ಈ ಸಾರ್ಥ 'ಮನೋಬೋಧ' ದ ಸಂಪಾದನೆಯಲ್ಲಿ ಕೆಳಗಿನ ಸಂಗತಿಗಳನ್ನು ಕೈಗೂಡಿಸಿದ್ದೇವೆ.-

(೧) ಮನೋಬೋಧವು ವಿಷಯ ಪ್ರತಿಪಾದನೆಯ ಗ್ರಂಥವಾಗಿರದೆ ಸ್ಫುಟ ವಾಕ್ಪ್ರವಾಹವಾಗಿದ್ದರಿಂದ, ಶ್ರೀ ಸಮರ್ಥ ರಾಮದಾಸರ ಆ ಪ್ರಾಸಾದಿಕ ವಾಣಿಯು ನೀತಿ-ಭಕ್ತಿ-ನಾಮಸ್ಮರಣೆ-ಸತ್ಸಂಗತಿ-ಜ್ಞಾನವೆಂಬ ಯೋಗ್ಯ ಕ್ರಮದಿಂದಲೇ ಅವತರಿಸಿದೆಯೆಂಬ ಸಂಗತಿಯು ಕಂಡು ಬಂದು ವಿಷಯ ನಿರ್ದೇಶ ಮಾಡಿರುವೆವು.

(೨) ಮಹತ್ವದ ಪಾಠಭೇದಗಳನ್ನು ಅಡಿ ಟಿಪ್ಪಣೆಗಳಲ್ಲಿ ಕೊಟ್ಟಿದ್ದೇವೆ.

(೩) ಮನೋಬೋಧದಲ್ಲಿ ಅನೇಕ ಕಡೆಗೆ ೫ ಅಥವಾ ೧೦ ಶ್ಲೋಕಗಳ ಸಮೂಹದ, ಪ್ರತಿಯೊಂದು ಶ್ಲೋಕದ ಕೊನೆಯ ಸಾಲು ಒಂದೇಯಾಗಿರುತ್ತದೆ. ಆ ಸಮ ಚರಣವನ್ನು ಅಡಿಟಿಪ್ಪಣೆಗಳಲ್ಲಿ ಆ ಶ್ಲೋಕ ಸಮೂಹದ ಬಗ್ಗೆ ನಿರ್ದಿಷ್ಟ ಚಿನ್ಹದಿಂದ ನಿರ್ದೇಶ ಮಾಡಿರುತ್ತದೆ.

(೪) ಕೆಲವು ಶ್ಲೋಕಗಳಲ್ಲಿ ಉಲ್ಲೇಖಿಸಿದ ಅವತಾರ ಹಾಗೂ ಭಕ್ತರ ಚರಿತ್ರಗಳನ್ನು ಅಡಿಟಿಪ್ಪಣೆಯಲ್ಲಿ ವಿವರಿಸಿರುವೆವು. ಈ ಚರಿತ್ರಗಳ ಅನುಕ್ರಮವನ್ನು ಕನ್ನಡ ಅಂಕಿಗಳಲ್ಲಿ ಕೊಟ್ಟಿರುವೆವು.

(೫) ಬಹಳ ಶ್ಲೋಕಗಳಲ್ಲಿ ಬಂದ ಮಹತ್ವದ ಶಬ್ದವನ್ನು ಆ ಶ್ಲೋಕಾಂಕಗಳೊಂದಿಗೆ ಅಡಿಟಿಪ್ಪಣೆಯಲ್ಲಿ ಕೊಟ್ಟಿದ್ದೇವೆ.

(೬) ಗ್ರಂಥದ ಕೊನೆಗೆ ಮನೋಬೋಧದ ಆರತಿಯನ್ನು ಸಾರ್ಥವಾಗಿ ಕೊಟ್ಟಿರುವೆವು.

-ಅನುವಾದಕರು

ಶ್ರೀ ರಾಮ ಸಮರ್ಥ

ಶ್ರೀ ಸಮರ್ಥ ರಾಮದಾಸ ಸ್ವಾಮಿಗಳಿಂದ ವಿರಚಿತವಾದ
ಮನಾಚೇ ಶ್ಲೋಕಗಳ ಸುರಸ ಕನ್ನಡ ಅನುವಾದಿತವಾದ

# ಮನೋಬೋಧ



ಅಧ್ಯಾತ್ಮ ಭಾಂಡಾರ
ಶಾಂತಿ ಕುಟೀರ, ಕನ್ನೂರ - ೫೮೬ ೧೧೯

ಅಧ್ಯಾತ್ಮ ಭಾಂಡಾರ ಗ್ರಂಥಮಾಲೆಯ
ಸಂಸ್ಥಾಪಕರು : ಶ್ರೀ ಸದ್ಗುರು ಗಣಪತರಾವ ಮಹಾರಾಜರು, ಕನ್ನೂರ

# ಮನೋಬೋಧ

ಶ್ರೀಸಮರ್ಥ ರಾಮದಾಸ ಸ್ವಾಮಿಗಳಿಂದ ವಿರಚಿತ
ಮರಾಠಿ 'ಮನಾಚೇ ಶ್ಲೋಕಗಳ' ಕನ್ನಡ ಸರಳಾನುವಾದ

ಅನುವಾದಕರು :
ಶ್ರೀ ಸದ್ಗುರು ಗಣಪತರಾವ ಮಹಾರಾಜರು, ಕನ್ನೂರ

ಅಧ್ಯಾತ್ಮ ಭಾಂಡಾರ
ಶಾಂತಿ ಕುಟೀರ, ಕನ್ನೂರ -ಉ ೫೮೬ ೧೧೯.

೨೦೦೧

ಬೆಲೆ : ೨೦ ರೂ.

ಪ್ರಕಾಶಕರು :
**ಎಸ್. ಎಸ್. ವೈದ್ಯ**
ಗೌ. ಕಾರ್ಯದರ್ಶಿ
**ಅಧ್ಯಾತ್ಮ ಭಾಂಡಾರ,**
**ಶಾಂತಿ ಕುಟೀರ, ಕನ್ನೂರ.**
**ಜಿಲ್ಲಾ : ವಿಜಾಪೂರ - ೫೮೬ ೧೧೯.**

© ಈ ಗ್ರಂಥದ ಎಲ್ಲ ಹಕ್ಕುಗಳನ್ನು ಕಾದಿರಿಸಲಾಗಿದೆ.

೭ ನೇಯ ಮುದ್ರಣ ೨೦೦೧, ಪ್ರತಿಗಳು : ೨೦೦೦

ಮುದ್ರಕರು :
**ಶಿವ ಆಫ್‌ಸೆಟ್,**
ಎಮ್. ಆಯ್. ಡಿ. ಸಿ.
ಕುಪ್ಪವಾಡ, ಸಾಂಗಲಿ.

ಅಕ್ಷರ ಜೋಡಣೆ :
**ಶ್ರೀ ಡಿ.ಟಿ.ಪಿ. ಸೆಂಟರ**
೧೫೩೦, ಮಾರುತಿ ಗಲ್ಲಿ,
ಬೆಳಗಾವಿ - ೫೯೦ ೦೦೨.

# ಮುನ್ನುಡಿ

ಶ್ರೀ ಸಮರ್ಥ ರಾಮದಾಸ ಸ್ವಾಮಿಗಳ 'ದಾಸಬೋಧ' ಗ್ರಂಥದ ಕನ್ನಡ ಅನುವಾದ ಹೊರಬಂದಾಗಲೇ, ನಮ್ಮ ಸಾಂಪ್ರದಾಯದಲ್ಲಿ 'ದಾಸಬೋಧ'ದ ಸಂಗಡವೇ ಸದಾ ನಲಿಯುವ ಚಿಕ್ಕ ಮನೋಬೋಧ ('ಮನಾಚೇ ಶ್ಲೋಕ')ದ ಅನುವಾದವೂ ಕ್ರಮಪ್ರಾಪ್ತವಾಯಿತು. 'ಮನಾಚೇ ಶ್ಲೋಕ'ವು ನಿರರ್ಗಳವಾಗಿ ಪ್ರವಹಿಸಿದ ಶ್ರೀ ಸಮರ್ಥರ ಪ್ರಾಸಾದಿಕ ವಾಣಿಯಾಗಿದೆ ! ಈಗಲಾದರೂ ರಾಮದಾಸೀ ಸಾಂಪ್ರದಾಯಕರು ಇದರಲ್ಲಿಯ ಯಾವದಾದರೊಂದು ಶ್ಲೋಕವನ್ನು ಉಚ್ಚಸ್ವರದಿಂದ ಅನ್ನುತ್ತ ಭಿಕ್ಷೆಗೆ ಹೋಗುವರು. ಶ್ಲೋಕದ ಕೊನೆಗೆ 'ಜಯ ಜಯ ರಘುವೀರ ಸಮರ್ಥ !' ಎಂಬ ಜಯಘೋಷವು ಒಳ್ಳೇ ಆನಂದದಾಯಕವಾಗಿರುತ್ತದೆ ! ಇರಲಿ.

ಶ್ರೀ ಸಮರ್ಥ ರಾಮದಾಸ ಸ್ವಾಮಿಗಳು ಬದ್ಧ ಮಾನವರು ಜಾಗ್ರತರಾಗಲೆಂದೇ, ತಮ್ಮ ಹೃದಯಾಂತರಾಳದಿಂದ ಹೊರಬಂದ ಈ ಶ್ಲೋಕಗಳನ್ನು ತಮ್ಮ ಮನಸ್ಸಿಗೆ ಬೋಧಿಸಿಕೊಳ್ಳುವ ನೆಪದಿಂದ ಸರ್ವರಿಗೂ ಬೋಧಿಸಿ ಮಹದುಪಕಾರ ಮಾಡಿರುತ್ತಾರೆ. ಶ್ರೀ ಸಮರ್ಥರ ತರುವಾಯ ಮಹಾರಾಷ್ಟ್ರ, ಕರ್ನಾಟಕಗಳಲ್ಲಿ ಈ ಗ್ರಂಥದ ಮಹತ್ವ ಅರಿತುಕೊಂಡಂಥ ಮಹಾನ್ ಸತ್ಪುರುಷರಾದ ಶ್ರೀ ಸದ್ಗುರು ಬ್ರಹ್ಮಚೈತನ್ಯ ಮಹಾರಾಜ ಗೋಂದಾವಲೇಕರರು ಹಾಗೂ ನಮ್ಮ ಸಾಂಪ್ರದಾಯದ ಬೆಳವಣಿಗೆಗೆ ಕಾರಣಪುರುಷವಾದ ಶ್ರೀ ಸದ್ಗುರು ಭಾವೂಸಾಹೇಬ ಮಹಾರಾಜರು ಉಮದೀಕರ ಅವರು ದಾಸಬೋಧ ಗ್ರಂಥದ ಮಹತ್ವ ಬೆಳೆಸುವದರ ಸಂಗಡವೇ ಈ ಗ್ರಂಥದ ಹಿರಿಮೆ ಬೆಳೆಯಿಸಿ, ಜನತೆಯ ಉದ್ಧಾರಗತಿ ಇಚ್ಛಿಸಿದ್ದಾರೆ.

ನಾವು ಸಾರ್ಥ 'ಮನೋಬೋಧ'ದ ಸಂಪಾದನೆಯಲ್ಲಿ ಕೆಳಗಿನ ಸಂಗತಿಗಳನ್ನು ಕೈಗೂಡಿಸಿದ್ದೇವೆ - (೧) ಮನೋಬೋಧವು ವಿಷಯ ಪ್ರತಿಪಾದನೆಯ ಗ್ರಂಥವಾಗಿರದೆ ಸ್ಫುಟ ವಾಕ್ಪ್ರವಾಹವಾಗಿದ್ದರಿಂದ, ಶ್ರೀ ಸಮರ್ಥ ರಾಮದಾಸರ ಆ ಪ್ರಾಸಾದಿಕ ವಾಣಿಯು ನೀತಿ-ಭಕ್ತಿ-ನಾಮಸ್ಮರಣೆ-ಸತ್ಸಂಗತಿ-ಜ್ಞಾನವೆಂಬ ಯೋಗ್ಯ ಕ್ರಮದಿಂದಲೇ ಅವತರಿಸಿದೆಯೆಂಬ ಸಂಗತಿಯು ಕಂಡು

ಬಂದು ನಮ್ಮ ವಿಷಯ ನಿರ್ದೇಶವು ಸಾರ್ಥಕವೆನಿಸಿತು ! (೨) ಮಹತ್ವದ ಪಾಠಭೇದಗಳನ್ನು ಅಡಿ ಟಿಪ್ಪಣಿಗಳಲ್ಲಿ ಕೊಟ್ಟಿದ್ದೇವೆ. (೩) ಮನೋಬೋಧದಲ್ಲಿ ಅನೇಕ ಕಡೆಗೆ ೫ ಅಥವಾ ೧೦ ಶ್ಲೋಕಗಳ ಸಮೂಹದ, ಪ್ರತಿಯೊಂದು ಶ್ಲೋಕದ ಕೊನೆಯ ಸಾಲು ಒಂದೇಯಾಗಿರುತ್ತದೆ. ಆ ಸಮ ಚರಣವನ್ನು ಅಡಿಟಿಪ್ಪಣಿಗಳಲ್ಲಿ ಆ ಶ್ಲೋಕ ಸಮೂಹದ ಬಗ್ಗೆ ನಿರ್ದಿಷ್ಟ ಚಿನ್ಹದಿಂದ ನಿರ್ದೇಶ ಮಾಡಿರುತ್ತದೆ. (೪) ಕೆಲವು ಶ್ಲೋಕಗಳಲ್ಲಿ ಉಲ್ಲೇಖಿಸಿದ ಅವತಾರ ಹಾಗೂ ಭಕ್ತರ ಚರಿತ್ರೆಗಳನ್ನು ಅಡಿಟಿಪ್ಪಣಿಯಲ್ಲಿ ವಿವರಿಸಿರುವೆವು. ಈ ಚರಿತ್ರೆಗಳ ಅನುಕ್ರಮವನ್ನು ಕನ್ನಡ ಅಂಕಿಗಳಲ್ಲಿ ಕೊಟ್ಟಿರುವೆವು. (೫) ಬಹಳ ಶ್ಲೋಕಗಳಲ್ಲಿ ಬಂದ ಮಹತ್ವದ ಶಬ್ದವನ್ನು ಆ ಶ್ಲೋಕಾಂಕಗಳೊಂದಿಗೆ ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದೇವೆ. (೬) ಗ್ರಂಥದ ಕೊನೆಗೆ ಮನೋಬೋಧದ ಆರತಿಯನ್ನು ಸಾರ್ಥವಾಗಿ ಕೊಟ್ಟಿರುವೆವು.

ಕನ್ನಡ ಬಂಧುಗಳು ಈ ಗ್ರಂಥವಾಚನದಿಂದ ಶ್ರೀ ಸಮರ್ಥ ರಾಮದಾಸ ಸ್ವಾಮಿಗಳ ಹೃದ್ಗತವನ್ನು ಅರಿತು, ಸ್ವಾನಂದ ಪಡೆದರೆ ಸಾಕು ! ಅದೇ ನಮ್ಮ ಮನೋಬೋಧ (ಮನಾಚೇ ಶ್ಲೋಕ)ದ ಭಾಷಾಂತರ ಕಾರ್ಯದ ಸಫಲತೆಯೆಂದು ಹರ್ಷಿಸುತ್ತೇವೆ ! ಇತಿ ಶಮ್.

- ಅನುವಾದಕರು

-------



श्री. समर्थ सद्गुरु गणपतराव महाराज कन्नूर

# ಪ್ರಕಾಶಕರ ಎರಡು ಶಬ್ದಗಳು

ನಮ್ಮ ಅಧ್ಯಾತ್ಮ ಗ್ರಂಥಮಾಲೆಯ ಪ್ರಧಾನ ಪ್ರಕಟನೆಯಾದ ಶ್ರೀ ಸಮರ್ಥ ರಾಮದಾಸ ಸ್ವಾಮಿಯವರ, ಶ್ರೀ ಸ.ಸ. ಗಣಪತರಾವ ಮಹಾರಾಜರು ಕನ್ನಡಕ್ಕೆ ಅನುವಾದಿಸಿದ ಗ್ರಂಥರಾಜ 'ದಾಸಬೋಧ' ಗ್ರಂಥದ ೫ನೇ ಆವೃತ್ತಿಯು ಮುಗಿದು ಅವುಗಳ ಬೇಡಿಕೆಯು ಬಹಳೇ ಇದ್ದ ಮೂಲಕ ೬ ನೇ ಮುದ್ರಣ ಪ್ರಕಾಶನ ಮಾಡುವದು ಕ್ರಮಪ್ರಾಪ್ತವಾಯಿತು. ಅದರ ಸಂಗಡವೇ ಶ್ರೀ ಸಮರ್ಥರ ರಚಿತ ಚಿಕ್ಕ ಗ್ರಂಥ ಮನೋಬೋಧ (ಮನಾಚೇ ಶ್ಲೋಕ)ದ ೭ ನೇ ಮುದ್ರಣದ ಕಾರ್ಯವನ್ನು ಸಹಕೈಗೊಂಡೆವು. ಮನೋಬೋಧ ಹಾಗೂ ದಾಸಬೋಧ ಗ್ರಂಥಗಳನ್ನು ವಾಚಕರ ಕೈಯಲ್ಲಿ ಕೊಡಲು ನನಗೆ ಅತ್ಯಂತ ಆನಂದವಾಗುತ್ತದೆ.

ಈ ಗ್ರಂಥ ಪ್ರಕಾಶ ಮಾಡುವಾಗ್ಗೆ ಸಹಕರಿಸಿದವರಿಗೆ ಕೃತಜ್ಞತೆ ಸಲ್ಲಿಸುವದು ನನ್ನ ಕರ್ತವ್ಯವಷ್ಟೇ! ಮೊಟ್ಟಮೊದಲು ಈ ಗ್ರಂಥದ ಅನುವಾದಕರು, ನಮ್ಮ ಸದ್ಗುರುಗಳಾದ ಶ್ರೀ ಸ. ಸ. ಗಣಪತರಾವ ಮಹಾರಾಜರ ಅಡಿದಾವರೆಗಳಲ್ಲಿ ನನ್ನ ಕಡೆಯಿಂದ ಹೀಗೆ ಸದಾ ಸೇವೆ ಪಡೆಯಲೆಂದು ಪ್ರಾರ್ಥಿಸುವೆ. ಪ್ರೆಸ್ ಕಾಪಿ ತಯಾರಿಸಿದ ಗು. ಬ. ತಳಕಲ್ಲ, ಅಕ್ಷರ ಜೋಡಣೆ ಮಾಡಿದ ಶ್ರೀಮತಿ ಅನುರಾಧಾ ಅ. ಅಧ್ಯಾಪಕ ಮತ್ತು ಮುದ್ರಿಸಿ ಕೊಟ್ಟ ಶಿವ ಆಫ್‌ಸೆಟ್, ಸಾಂಗಲಿ ಅವರಿಗೆ ನನ್ನ ಅನನ್ಯ ಕೃತಜ್ಞತೆಗಳನ್ನು ಸಲ್ಲಿಸುವೆ.

''ಗುರುಪ್ರಸಾದ''
ವಾರಣಾಲಿ ರೋಡ,
ವಿಶ್ರಾಮಬಾಗ, ಸಾಂಗಲಿ
೨೬-೩-೨೦೦೧

- ಪ್ರಕಾಶಕರು

ಪ್ರಭಾತೇ ಮನೀ ರಾಮ ಚಿಂತೀತ ಜಾವಾ ।
ಪುಢೇ ವೈಖರೀ ರಾಮ ಆಧೀ ವದಾವಾ ॥
ಸದಾಚಾರ ಹಾ ಥೋರ ಸಾಂಡೂನಯೇ ತೋ ।
ಜನೀ ತೋಚಿ ತೋ ಮಾನವೀ ಧನ್ಯ ಹೋತೋ ॥೩॥

ದಿನಾಲು ನಸುಕಿನಲ್ಲಿ ರಾಮನ ಧ್ಯಾನ ಮಾಡುತ್ತಿರಬೇಕು ಹಾಗೂ ಆಮೇಲೆಯಾದರೂ ಪ್ರಾಮುಖ್ಯವಾಗಿ ವಾಣಿಯಿಂದ ರಾಮನಾಮವನ್ನು ಉಚ್ಚರಿಸಬೇಕು. ಇದಲ್ಲದೆ ಒಳ್ಳೇ ನಡತೆಯು ಶ್ರೇಷ್ಠವಾಗಿದ್ದು ಅದನ್ನು ಬಿಟ್ಟು ಕೊಡಬಾರದು. ಹೀಗೆ ವರ್ತಿಸುವವನೊಬ್ಬನೇ ಮನುಜರಲ್ಲಿ ಧನ್ಯನಾಗುವನು.

ಮನಾ ವಾಸನಾ ದುಷ್ಟ ಕಾಮಾ ನಯೇರೇ ।
ಮನಾ ಸರ್ವಥಾ ಪಾಪಬುದ್ಧೀ ನಕೋರೇ ॥
ಮನಾ ಸರ್ವಥಾ* ನೀತಿ ಸೋಡೂ ನಕೋ ಹೋ ।
ಮನಾ ಅಂತರೀ ಸಾರ ವಿಚಾರ ರಾಹೋ ॥೪॥

ಹೇ ಮನವೇ, ಕೆಟ್ಟ ಬಯಕೆಯು ಕೆಲಸದ್ದಲ್ಲವಪ್ಪಾ ! ನೀನೆಂದಿಗೂ ಪಾಪವಿಚಾರ ಮಾಡಲೇಬೇಡ ನೋಡು !! ಮನರಾಯಾ, ನೀನೆಂದಿಗೂ ನೀತಿ ಬಿಡಬೇಡವಯ್ಯಾ ! ನಿನ್ನೊಳಗೆ ಶ್ರೇಷ್ಠ ವಿಚಾರವಿರಲಿ ತಂದೆ !!

ಮನಾ ಪಾಪಸಂಕಲ್ಪ ಸೋಡೂನಿ ದ್ಯಾವಾ ।
ಮನಾ ಸತ್ಯಸಂಕಲ್ಪ ಜೀವೀ ಧರಾವಾ ॥
ಮನಾ ಕಲ್ಪನಾ♦ ತೇ ನಕೋ ವೀಷಯಾಂಚೀ ।
ವಿಕಾರೇ ಘಡೇ ಹೋ ಜನೀ ಸರ್ವ ಛೀ ಛೀ ॥೫॥

ಮನವೇ, ಪಾಪದ ಕಲ್ಪನೆಯನ್ನು ಬಿಟ್ಟುಬಿಡತಕ್ಕದ್ದು ಹಾಗೂ ಸದಿಚ್ಛೆಯನ್ನು ದೃಢವಾಗಿ ಧರಿಸತಕ್ಕದ್ದು; ಹಾಗೆಯೇ ವಿಷಯಗಳ ಕಲ್ಪನೆಯಾದರೂ ತ್ಯಾಜ್ಯವಿರುತ್ತದೆ. ಯಾಕೆಂದರೆ ವಿಕಾರವಶದಿಂದ ಜನರಲ್ಲಿ ಛೀಪಟ್ಟಾಗುವದು !

ನಕೋರೇ ಮನಾ ಕ್ರೋಧ ಹಾ ಖೇದಕಾರೀ ।
ನಕೋರೇ ಮನಾ ಕಾಮ ನಾನಾ ವಿಕಾರೀ ॥

*ಪಾಠಭೇದ-ಧರ್ಮತಾ

♦ ಕಲ್ಪನಾ : ೫,೪೦,೫೪,೫೮,೬೧,೧೦೪,೧೦೫,೧೨೮,೧೬೪,೧೭೧,೧೭೨,೧೯೦(೧೩)



ನಕೋರೇ ಮನಾ ಲೋಭ ಹಾ ಅಂಗಿಕಾರೂ ।
ನಕೋರೇ ಮನಾ ಮತ್ಸರೂ ದಂಭ ಭಾರೂ ॥೬॥

ಮನವೇ, ದುಃಖದಾಯಕವಾದ ಸಿಟ್ಟು, ಅನೇಕ ವಿಕಾರಯುಕ್ತ ಕಾಮ, ಧನಾಶೆ ಹಾಗೂ ಪ್ರಬಲವಾದ ಹೊಟ್ಟೇಕಿಚ್ಚು, ದಂಭ ಇವಾವುಗಳನ್ನೂ ಗ್ರಹಿಸಬೇಡವಪ್ಪಾ !

ಮನಾ ಶ್ರೇಷ್ಠ ಧಾರಿಷ್ಟ ಜೇವೀ ಧರಾವೇ ।
ಮನಾ ಬೋಲಣೇ ನೀಚ ಸೋಶೀತ ಜಾವೇ ॥
ಸ್ವಯೇ ಸರ್ವದಾ ನಮ್ರ ವಾಚೇ ವದಾವೇ ।
ಮನಾ ಸರ್ವ ಲೋಕಾಸಿರೇ ನೀವವಾವೇ ॥೭॥

ಮನವೇ, ಒಳಗೆ ಮಹತ್ತಾದ ಧೈರ್ಯತಳೆದು, ಅನ್ಯರಾಡುವ ಹೀನಮಾತುಗಳನ್ನು ಸಹಿಸುತ್ತಿರು ಹಾಗೂ ನೀನು ಯಾವಾಗಲೂ ವಾಣಿಯಿಂದ ವಿನಯದ ಭಾಷಣ ಮಾತಾಡಿ ಎಲ್ಲ ಜನರನ್ನೂ ಸಂತೋಷಗೊಳಿಸು.

ದೇಹೇ ತ್ಯಾಗಿತಾ ಕೀರ್ತಿ ಮಾಗೇ ಉರಾವೀ ।
ಮನಾ ಸಜ್ಜನಾ ಹೇಚಿ ಕ್ರೀಯಾ ಧರಾವಿ ॥
ಮನಾ ಚಂದನಾಚೇ ಪರೀ ತ್ವಾ ಝಿಜಾವೇ ।
ಪರೀ ಅಂತರೀ ಸಜ್ಜನಾ ನೀವವಾವೇ ॥೮॥

ಸಭ್ಯ ಮನವೇ, ಶರೀರತೊಲಗಿದರೂ ಹಿಂದೆ ಕೀರ್ತಿಯುಳಿಯುವಂತಹ ನಡೆಯನ್ನು ಹಿಡಿ; ಗಂಧದಂತೆ ಸವೆದಾದರೂ ಸಾಧುಜನರ ಅಂತಃಕರಣವನ್ನು ಸಂತೋಷಗೊಳಿಸು !

ನಕೋರೆ ಮನಾ ದ್ರವ್ಯ ತೇ ಪೂಢಿಲಾಂಚೆ ।
ಅತೀ ಸ್ವಾರ್ಥ ಬುದ್ಧೀ ನುರೇ ಪಾಪ ಸಾಚೇ ॥
ಘಡೇ ಭೋಗಣೇ ಪಾಪ ತೇ ಕರ್ಮ ಖೋಟೇ ।
ನ ಹೋತಾ ಮನಾಸಾರಿಖೇ ದುಃಖ ಮೋಠೆ ॥೯॥

ಮನವೇ, ಪರಧನದ ಅಭಿಲಾಷೆ ಮಾಡಬೇಡ, ಮಿತಿಮೀರಿದ ಸ್ವಾರ್ಥಬುದ್ಧಿಯೂ ಒಳ್ಳೇದಲ್ಲ; ಯಾಕೆಂದರೆ ಅದರಿಂದ ಪಾಪ ಸಂಗ್ರಹವಾಗುವದು. ಹಾಗೂ ಆ ಕೆಟ್ಟ ಪಾಪಕರ್ಮದ ಫಲವನ್ನು ಅನುಭೋಗಿಸಬೇಕಾಗುವದು ! ಒಟ್ಟಿಗೆ ಲೋಭ ಸ್ವಾರ್ಥಗಳಿಂದ ತನ್ನ ಇಚ್ಛೆ

ಕೈಗೂಡದೆ ಭಯಂಕರ ದುಃಖವೇ ಪದರಿಗೆ ಬರುವದು !!

ಸದಾ ಸರ್ವದಾ ಪ್ರೀತಿ ರಾಮೀ ಧರಾವೀ ।
ದುಃಖಾಚೀ ಸ್ವಯೇ ಸಾಂಡಿ ಜೀವೀ ಕರಾವೀ ॥
ದೇಹೇದುಃಖ ತೇ ಸೂಖ ಮಾನೀತ ಜಾವೇ ।
ವಿವೇಕೇ* ಸದಾ ಸಸ್ವರೂಪೀ ಭರಾವೇ ॥೧೦॥

ರಾಮನಲ್ಲಿ ನಿರಂತರ ಪ್ರೇಮವಿಟ್ಟು ತಾನೇ ತನ್ನೊಳಗೆ ದುಃಖ ತ್ಯಜಿಸಬೇಕು ಹಾಗೂ ಪ್ರಾರಬ್ಧಪ್ರಾಪ್ತ ಶಾರೀರಿಕ ದುಃಖವನ್ನು ಸುಖವೆಂದು ಭಾವಿಸುತ್ತ, ವಿಚಾರದಿಂದ ಯಾವಾಗಲೂ ಆತ್ಮಸ್ವರೂಪದಲ್ಲಿ ಸಮರಸವಾಗಬೇಕು.

ಜನೀ ಸರ್ವಸೂಖೀ ಅಸಾ ಕೋಣ ಆಹೇ ।
ವಿಚಾರೇ ಮನಾ ತೂಚಿ ಶೋಧೂನಿ ಪಾಹೇ♦ ॥
ಮನಾ ತ್ವಾಚಿರೇ ಪೂರ್ವ ಸಂಚೀತ ಕೇಲೇ !
ತಯಾಸಾರಿಖೇ ಭೋಗಣೇ ಪ್ರಾಪ್ತ ಝಾಲೇ ॥೧೧॥

ಮನವೇ, ಜನರಲ್ಲಿ ಎಲ್ಲ ತರದಿಂದಲೂ ಸುಖಿಯಾದವನು ಯಾವನಿರುವನಪ್ಪಾ ? ನಿನೇ ವಿಚಾರದಿಂದ ಹುಡುಕಿ ನೋಡು, ಎಂದರೆ ಯಾವನೂ ಸರ್ವಸುಖಿಯಿಲ್ಲವೆನ್ನುವದು ಗೊತ್ತಾಗುವದು ! ಮನಾ, ಹಿಂದೆ ನೀನು ಕರ್ಮಸಂಚಯ ಮಾಡಿದ್ದರಿಂದಲೇ ಈಗ ಸುಖದುಃಖದ ಭೋಗ ಒದಗಿರುವದೆಂಬುದನ್ನು ನೆನಪಿಡು.

ಮನಾ ಮಾನಸೀ ದುಃಖ ಆಣೂ ನಕೋರೇ ।
ಮನಾ ಸರ್ವಥಾ ಶೋಕ ಚಿಂತಾ ನಕೋರೇ ॥
ವಿವೇಕೇ ದೇಹೇಬುದ್ಧಿ● ಸೋಡೂನಿ ದ್ಯಾವೀ ।
ವಿದೇಹೀಪಣೇ ಮುಕ್ತಿ ಭೋಗೀತ ಜಾವೀ ॥೧೨॥

*ವಿವೇಕ : ೧೦, ೧೨, ೪೦, ೫೩, ೬೯, ೧೦೫, ೧೦೬, ೧೧೦, ೧೧೫, ೧೩೧, ೧೪೫, ೧೪೮, ೧೬೨, ೧೭೦, ೧೭೨, ೧೭೩, ೧೮೩ (೧೭)
♦ಶೋಧೂನಿ ಪಾಹೇ : ೧೧, ೬೬, ೭೫, ೧೧೧, ೧೧೪, ೧೩೨, ೧೪೪, ೧೪೬, ೧೫೦, ೧೫೧, ೧೫೫, ೧೬೧, ೧೭೦, ೧೭೮, ೧೮೨, ೧೮೪, ೧೮೬ (೨೦)
●ದೇಹಬುದ್ಧಿ : ೧೨, ೧೦೩, ೧೨೭, ೧೩೭, ೧೩೮, ೧೬೩, ೧೬೫, ೧೬೬, ೧೬೮, ೧೬೯, ೧೭೦, ೧೮೮, ೧೯೧, ೧೯೭. (೧೪)



ಮನವೇ, ನಿನ್ನಲ್ಲಿ ದುಃಖ ತಂದುಕೊಳ್ಳಬೇಡ, ಗೋಳಾಟ - ಚಿಂತೆಯೆಂದಿಗೂ ಮಾಡಬೇಡ; ಆದರೆ ವಿಚಾರದಿಂದ ದೇಹವೇ ನಾನೆಂಬ ಅಹಂಕಾರವನ್ನು ತ್ಯಜಿಸಿಬಿಟ್ಟು ದೇಹಭಾವವಿರಹಿತನಾಗಿ ಮುಕ್ತಿಸುಖವನ್ನು ಅನುಭೋಗಿಸು.

ಮನಾ ಸಾಂಗ ಪಾ ರಾವಣಾ ಕಾಯ ಝಾಲೇ ।
ಅಕಸ್ಮಾತ ತೇ ರಾಜ್ಯ ಸರ್ವ್ಹೇ ಬುಡಾಲೇ ॥
ಮ್ಹಣೋನೀ ಕುಡೀ ವಾಸನಾ ಸಾಂಡಿ ವೇಗೀ ।
ಬಳೇ ಲಾಗಲಾ ಕಾಳ ಹಾ ಪಾಠಿಲಾಗೀ ॥೧೩॥

ಮನವೇ, ಮಹಾಬಲಿಷ್ಠ ರಾವಣನ ಗತಿ ಏನಾಯಿತು ಹೇಳು ನೋಡೋಣ ? ಅವನ ರಾಜ್ಯ ಮೊದಲಾದ ಸರ್ವಸ್ವವೂ ಮುಳುಗಿ ಹೋಯಿತು! ಅದಕ್ಕಾಗಿ ಹೀನ ಕಾಮೇಚ್ಛೆಯನ್ನು ತೀವ್ರವೇ ತ್ಯಜಿಸು ಹಾಗೂ ಕಾಲನು ಎಲ್ಲರನ್ನೂ ವೇಗದಿಂದ ಬೆನ್ನಟ್ಟಿರುವನೆಂಬುದನ್ನು ಮರೆಯದಿರು.

ಜಿವಾ ಕರ್ಮಯೋಗೇ ಜನೀ ಜನ್ಮ ಝಾಲಾ ।
ಪರೀ ಶೇವಟೀ 'ಕಾಳಮೂಖೀ ನಿಮಾಲಾ'* ॥
ಮಹಾಥೋರ ತೇ ಮೃತ್ಯುಪಂಥೇಚಿ ಗೇಲೇ ॥
ಕಿತೀ ಏಕ ತೇ ಜನ್ಮಲೇ ಆಣಿ ಮೇಲೇ ॥೧೪॥

ಜೀವನಿಗೆ ಅವನ ಕರ್ಮಾನುಸಾರವಾಗಿ ಜಗತ್ತಿನಲ್ಲಿ ಜನ್ಮ ಬಂದಿರುವದು. ಅದರೇನು, ಅವನು ಕೊನೆಗೆ ಮೃತ್ಯುವಿಗೆ ತುತ್ತಾಗುವನು ! ಬಹಳ ದೊಡ್ಡವರೆನಿಸಿದವರು ಸಹ ಮರಣದ ದಾರಿಯಿಂದಲೇ ಹೋದರು ! ಹೀಗೆ ಇಲ್ಲಿಯವರೆಗೆ ಹುಟ್ಟಿ ಸತ್ತು ಹೋದವರ ಸಂಖ್ಯೆ ಗಣಿಸಲಸಾಧ್ಯವು. !!

ಮನಾ ಪಾಹತಾ ಸತ್ಯ ಹೇ ಮೃತ್ಯು ಭೂಮೀ ।
ಜಿತಾ ಬೋಲತೀ ಸರ್ವಹೀ ಜೀವ ಮೀ ಮೀ ॥
ಚಿರಂಜೀವ ಹೇ ಸರ್ವಹೀ ಮಾನಿತಾತೀ ।
ಆಕಸ್ಮಾತ ಸಾಂಡೂನಿಯಾ ಸರ್ವ ಜಾತೀ ॥೧೫॥

ಮನವೇ, ಇದು ಮೃತ್ಯುಲೋಕವೆನ್ನುವದು ನಿಜವಷ್ಟೇ ? ಹೀಗಿದ್ದರೂ

*ಪಾಠಭೇದ : ಕಾಳ ಘೇವೂನಿ ಗೇಲಾ

ಮನುಷ್ಯರೆಲ್ಲ ತಮ್ಮ ಅಲ್ಪ ಜೀವನ ಕಾಲದಲ್ಲಿ 'ನಾ-ನಾ'ವೆನ್ನುವರು ! ಇವರೆಲ್ಲರೂ ತಮ್ಮನ್ನು ಚಿರಂಜೀವಿಯೆಂದೇ ಭಾವಿಸುತ್ತಾರಲ್ಲ ! ಆದರೆ ಆಕಸ್ಮಾತ್ತಾಗಿ ಎಲ್ಲವನ್ನೂ ಬಿಟ್ಟು ನಡೆಯುವರು !!

**ಮರೇ ಏಕ ತ್ಯಾಚಾ ದುಜಾ ಶೋಕ ವಾಹೇ ।**
**ಅಕಸ್ಮಾತ ತೋ ಹೀ ಪುಢೆ ಜಾತ ಆಹೇ ॥**
**ಪುರೇನಾ ಜನೀ ಲೋಭರೇ ಕ್ಷೋಭ ತ್ಯಾತೇ ।**
**ಮ್ಹಣೋನೀ ಜನೀ ಮಾಗುತಾ ಜನ್ಮ ಘೇತೇ ॥೧೬॥**

ಒಬ್ಬನು ಸತ್ತರೆ ಇನ್ನೊಬ್ಬನು ಅಳುವನು, ಆದರೆ ಆ ಮತ್ತೊಬ್ಬನಾದರೂ ಮುಂದೆ ಒಮ್ಮೆಲೇ ಸತ್ತು ಹೋಗುವನು ! ಹೀಗೆ ಬೇರೆಯವರಿಗಾಗಿ ಅಳುತ್ತ ತಾನು ಸಾಯುವದು ಮತ್ತು ಪುನಃ ಹುಟ್ಟಿಬರುವದು ಅವ್ಯಾಹತವಾಗಿ ಸಾಗಿದೆ ! ನಿಜವೇ ಅದೆ. ಪ್ರಪಂಚದಲ್ಲಿ ಆಶೆಯೆಂದಿಗೂ ಪೂರೈಸುವದಿಲ್ಲವಷ್ಟೇ ಅಲ್ಲ, ಅದಕ್ಕೆ ಉರಿದೇಳಲು ಆಸ್ಪದ ಸಿಗುವದರಿಂದ ಜಗತ್ತಿನಲ್ಲಿ ತಿರುಗಿ ಜನ್ಮ ತಕ್ಕೊಳ್ಳಬೇಕಾಗುವದು.

**ಮನೀ ಮಾನವಾ ವ್ಯರ್ಥ ಚಿಂತಾ ವಹಾತೇ ।**
**ಅಕಸ್ಮಾತ ಹೋಣಾರ ಹೋವೂನಿ ಜಾತೇ ॥**
**ಘಡೇ ಭೋಗಣೇ ಸರ್ವಹೀ ಕರ್ಮಯೋಗೇ ।**
**ಮತಿಮಂದ ತೇ ಖೇದ ಮಾನೀ ವಿಯೋಗೇ ॥೧೭॥**

ಮನುಜನು ಸುಮ್ಮನೆ ಮನದಲ್ಲಿ ಚಿಂತೆ ಮಾಡುವನು. ಆದರೆ ಆಗತಕ್ಕ ಘಟನೆಯೇನೋ ಅಕಸ್ಮಾತ್ತಾಗಿ ಆಗಿಯೇ ಹೋಗುವದು ! ನಿಜವಾಗಿ ಸುಖದುಃಖಾದಿ ಭೋಗವೆಲ್ಲವೂ ಪ್ರಾರಬ್ಧಕರ್ಮಾನುಸಾರವಾಗಿ ಪ್ರಾಪ್ತವಾಗುತ್ತಿದ್ದು, ಮೂರ್ಖನು ಆ ಹಾನಿ ಇತ್ಯಾದಿಯಿಂದ ನಿರರ್ಥಕವಾಗಿ ಕೆಡಕೆನಿಸಿಕೊಳ್ಳುವನು !

**ಮನಾ ರಾಘವೇವೀಣ ಆಶಾ ನಕೋರೇ ।**
**ಮನಾ ಮಾನವಾಚೀ ನಕೋ ಕೀರ್ತಿ ತೂ ರೇ ॥**
**ಜಯಾ ವರ್ಣಿತೀ ವೇದ ಶಾಸ್ತ್ರೇ ಪುರಾಣೇ ।**
**ತಯಾ ವರ್ಣಿತಾ ಸರ್ವಹೀ ಶ್ಲಾಘ್ಯವಾಣೇ ॥೧೮॥**



ಮನವೇ, ರಾಮನ ಹೊರತಾಗಿ ಬೇರೆ ಆಶೆ ಮಾಡಬೇಡ ಮತ್ತು ನೀನು ನರಸ್ತುತಿ ಮಾಡುವದೂ ಸಲ್ಲದು. ಯಾಕೆಂದರೆ ವೇದ-ಶಾಸ್ತ್ರ-ಪುರಾಣಗಳು ಹೊಗಳುತ್ತಿರುವ ಪರಮಾತ್ಮನನ್ನು ವರ್ಣಿಸುವದೇ ಪರಮಯೋಗ್ಯವು !

**ಮನ ಸರ್ವಥಾ ಸತ್ಯ ಸಾಂಡೂ ನಕೋರೇ ।**
**ಮನಾ ಸರ್ವಥಾ ಮಿಥ್ಯ ಮಾಂಡೂ ನಕೋರೇ ॥**
**ಮನಾ ಸತ್ಯ ತೇ ಸತ್ಯ ವಾಚೇ ವದಾವೇ ।**
**ಮನಾ ಮಿಥ್ಯೆ ತೇ ಮಿಥ್ಯ ಸೋಡೂನಿ ದ್ಯಾವೇ ॥೧೯॥**

ಮನವೇ, ಸತ್ಯವನ್ನೆಂದಿಗೂ ಬಿಡಬೇಡ ಹಾಗೂ ಮಿಥ್ಯವನ್ನೆಂದಿಗೂ ಪ್ರತಿಪಾದಿಸಬೇಡ. ಸತ್ಯವು ಯಾವಾಗಲೂ ಸತ್ಯವೇ ಹಾಗೂ ಮಿಥ್ಯವು ಯಾವಾಗಲೂ ಮಿಥ್ಯವೇ ಆಗಿದ್ದರಿಂದ ವಾಣಿಯಿಂದ ಸತ್ಯವನ್ನು ನುಡಿ ಹಾಗೂ ಅಸತ್ಯವನ್ನು ಬಿಟ್ಟುಬಿಡು.

**ಬಹೂ ಹಿಂಪುಟೀ ಹೋಯಿಜೇ ಮಾಯಪೋಟೀ ।**
**ನಕೋರೇ ಮನಾ ಯಾತನಾ ತೇಚಿ ಮೋಠೀ ॥**
**ನಿರೋಧೇ ಪಚೇ ಕೋಂಡಿಲೇ ಗರ್ಭವಾಸೀ ।**
**ಅಧೋಮೂಖರೇ ದುಃಖ ತ್ಯಾ ಬಾಳಕಾಸೀ ॥೨೦॥**

ಮನವೇ, ತಾಯಿಯ ಗರ್ಭದಲ್ಲಿ ಜೀವನಿಗೆ ಉಂಟಾಗುವ ಸಂಕಟವನ್ನು ಏನು ಹೇಳಲಪ್ಪಾ? ಬೇಡ ಬೇಡ, ಅದು ಭಯಂಕರವಿರುವದು! ಗರ್ಭಕೋಶದಲ್ಲಿ ತಲೆ ಕೆಳಗಾಗಿ ಸಿಕ್ಕುಬಿದ್ದು ಬೇಯುತ್ತಿರುವ ಆ ಎಳೇ ಕಂದನಿಗೆ ಅಸಹ್ಯ ದುಃಖವಾಗುತ್ತದೆ !!

**ಮನಾ ವಾಸನಾ ಚೂಕವೀ ಯೇರಝಾರಾ ।**
**ಮನಾ ಕಾಮನಾ ಸಾಂಡಿರೇ ದ್ರವ್ಯದಾರಾ ॥**
**ಮನಾ ಯಾತನಾ ಥೋರ ಹೇ ಗರ್ಭವಾಸೀ ।**
**ಮನಾ ಸಜ್ಜನಾ ಭೇಟವೀ ರಾಘವಾಸಿ ॥೨೧॥**

ಸದ್ಗುಣಿ ಮನವೇ, ಗರ್ಭವಾಸದ ದಾರುಣ ದುಃಖವನ್ನು ನೆನಸಿ ಹುಟ್ಟಿ ಬರಲು-ಮೃತ್ಯುಲೋಕಕ್ಕೆ ಸಾರಿಗೆಯಿಡಲು-ಕಾರಣವಾದ ವಾಸನೆಯನ್ನು ಹಾಗೂ ಕಾಮಕಾಂಚನದ ಆಶೆಯನ್ನು ತೊರೆಯಪ್ಪಾ! ನನಗೆ ರಾಮನ ದರ್ಶನ ಮಾಡಿಸಪ್ಪಾ!

## ೨. ಭಕ್ತಿಪರ ಉಪದೇಶ (೨೨-೬೬)

ಮನಾ ಸಜ್ಜನಾ ಹೀತ ಮಾಝೀ ಕರಾವೇ ।
ರಘೂನಾಯಕಾ ದೃಢ ಚಿತ್ತೀ ಧರಾವೇ ॥
ಮಹಾರಾಜ ತೋ ಸ್ವಾಮಿ ವಾಯೂಸುತಾಚಾ ।
ಜನಾ ಉದ್ಧರೀ ನಾಥ ಲೋಕತ್ರಯಾಚಾ ॥೨೨॥

ಒಳ್ಳೆಯ ಮನವೇ, ಶ್ರೀರಾಮನನ್ನು ಹೃದಯದಲ್ಲಿ ಸುಸ್ಥಿರಗೊಳಿಸಿ ನನ್ನ ಹಿತಸಾಧಿಸಿಕೊಡು. ಹನುಮಂತನ ಒಡೆಯನೂ ತ್ರೈಲೋಕ್ಯಾಧಿಪತಿಯೂ ಆದ ರಾಮಪ್ರಭುವೇ ಸರ್ವ ಉದ್ಧಾರಕರ್ತನಿರುತ್ತಾನೆ !

ನ ಬೋಲೇ ಮನಾ ರಾಘವಾವೀಣ ಕಾಂಹೀ ।
ಜನೀ ವಾವುಗೇ ಬೋಲತಾ ಸೌಖ್ಯ ನಾಹೀ ॥
ಘಡೀ ನೇಘಡೀ ಕಾಳ ಆಯುಷ್ಯ ನೇತೋ।
ದೇಹಾಂತೀ ತುಲಾ ಕೋಣ ಸೋಡೂ ಪಹಾತೋ ॥೨೩॥

ರಾಮಚಂದ್ರನ ಸ್ಮರಣೆ - ಕೀರ್ತನೆಯ ಹೊರತಗಿ ಮತ್ತೇನನ್ನೂ ನುಡಿಯಬೇಡ. ಜನರೊಡನೆ ನಿರರ್ಥಕವಾಗಿ ಮಾತಾಡುವದರಲ್ಲಿ ಏನೂ ಸುಖವಿಲ್ಲ! ಕಾಲನು ಪ್ರತಿ ಕ್ಷಣಕ್ಕೂ ನಿನ್ನ ಆಯುಷ್ಯವನ್ನು ಹರಣ ಮಾಡುತ್ತಿದ್ದು, ಮರಣಸಮಯಕ್ಕೆ ಆ ಹರಟೆಯ ಜನರಲ್ಲಿ ಯಾರು ನಿನ್ನನ್ನು ಬಿಡಿಸಲಿಕ್ಕೆ ಬರುವರು ನೋಡಪ್ಪಾ ?

ರಘೂನಾಯಕಾವೀಣ ವಾಯಾ ಶಿಣಾವೇ ।
ಜನಾಸಾರಿಖೇ ವ್ಯರ್ಥ ಕಾ ವೋಸಣಾವೇ ॥
ಸದಾಸರ್ವದಾ ನಾಮ★ ವಾಚೇಶೀ ವಸೋದೇ ।
ಅಹಂತಾ ಮನೀ ಪಾಪಿಣೀ ತೇ ನಸೋದೇ ॥೨೪॥

ಮನವೇ, ರಾಮಚಂದ್ರನನ್ನು ಬಿಟ್ಟು ಸುಮ್ಮನೆ ಏಕೆ ದಣಿಯುವಿ ? ಅಜ್ಞ ಜನರಂತೆ ಸುಮ್ಮನೆ ಏಕೆ ಗಳಹುವಿ ? ನಿನ್ನ ನಾಲಿಗೆಯಲ್ಲಿ ಯಾವಾಗಲೂ ನಾಮಸ್ಮರಣೆ ನೆಲೆಗೊಳ್ಳಲಿ ಹಾಗೂ ಪಾಪಿಷ್ಠೆಯಾದ ಅಹಂತೆಯು ನಿನ್ನಲ್ಲಿ ಮೋರೆ ತೋರಿಸದಿರಲಿ !

★ನಾಮ : ೨೪, ೪೮, ೫೭, ೭೦-೭೩, ೭೬, ೮೧-೮೩, ೮೬, ೮೮-೯೦, ೯೨-೧೦೦ (೨೫)



ಮನಾ ವೀಟ ಮಾನೂ ನಕೋ ಬೋಲಣ್ಯಾಚಾ ।
ಪುಢೇ ಮಾಗುತಾ ರಾಮ ಜೋಡೇಲ ಕೈಚಾ ॥
ಸುಖಾಚೀ ಘಡೀ ಲೋಟತಾ 'ದುಃಖ'★ ಆಹೇ ।
ಪುಢೇ ಸರ್ವ ಜಾಯೀಲಕಾಂಹೀ ನ ರಾಹೇ ॥೨೫॥

ಮನವೇ, ನನ್ನ ಉಪದೇಶದ ಮಾತುಗಳಿಗಾಗಿ ಬೇಜಾರ ಪಡಬೇಡ; ಹಾಗೆ ಮಾತು ಕೇಳದಿದ್ದರೆ ನಿನಗೆ ಯಾವ ಕಾಲಕ್ಕಾದರೂ ರಾಮನು ದೊರೆಯಬಹುದೇ ? ಸುಖದಗಳಿಗೆ ಹೋಗುವಷ್ಟರಲ್ಲಿಯೇ ಹಿಂದೆ ದುಃಖ ಸಿದ್ಧವದೆ. ಕೊನೆಗಂತೂ ಎಲ್ಲವೂ ನಾಶವಾಗಿ ಏನೊಂದೂ ಉಳಿಯಲಾರದು !

ದೇಹೇರಕ್ಷಣಾಕಾರಣೇ ಯತ್ನ ಕೇಲಾ ।
ಪರೀ ಶೇವಟೀ ಕಾಳ ಘೇವೂನಿ ಗೇಲಾ ॥
ಕರೀ ರೇ ಮನಾ ಭಕ್ತಿ ಯಾ ರಾಘವಾಚೀ ।
ಪುಢೇ ಅಂತರೀ ಸೋಡಿ ಚಿಂತಾ ಭವಾಚೀ ॥೨೬॥

ಮನವೇ, ನೀನು ಶರೀರವನ್ನು ಸಂರಕ್ಷಿಸಬೇಕೆಂದು ಎಷ್ಟು ಪ್ರಯತ್ನ ಮಾಡಿದರೂ, ಕಾಲನು ಕೊನೆಗೆ ಅದನ್ನು ಒಯ್ದೇಬಿಡುವನು ! ಎಂದಮೇಲೆ ಆ ಹವಣಿಕೆ ಬಿಟ್ಟು ನಮ್ಮ ರಾಮಚಂದ್ರನ ಭಕ್ತಿ ಮಾಡಪ್ಪಾ ಹಾಗೂ ಆದರಿಂದ ಜನ್ಮ ಮರಣದ ಚಿಂತೆಯನ್ನೇ ಅಳಿಯಪ್ಪಾ !

ಭವಾಚ್ಯಾ ಭಯೇ ಕಾಯ ಭೀತೋಸಿ ಲಂಡೀ ।
ಧರೀರೆ ಮನಾ ಧೀರ ಧಾಕಾಸಿ ಸಾಂಡಿ ॥
ರಘೂನಾಯಕಾಸಾರಿಖಾ ಸ್ವಾಮಿ ಶೀರೀ ।
ನುಪೇಕ್ಷೀ ಕದಾ ಕೋಪಲ್ಯಾ ದಂಡಧಾರೀ ॥೨೭॥

ಮನವೇ ಹೇಡಿಯಂತೆ ಜನ್ಮ-ಮರಣದ ಅಂಜಿಕೆಯಿಂದ ಏಕೆ ಕಾತುರಗೊಳ್ಳುವಿ ? ಧೈರ್ಯ ತಾಳಿ ಎದೆವಡಿಕೆಯನ್ನು ದೂರೀಕರಿಸು. ರಾಮಚಂದ್ರನಂಥ ಒಡೆಯನು ನಿನ್ನ ರಕ್ಷಣೆಗಿರಲು, ಯಮನು ಬಾಧಿಸಬಂದಾಗ್ಗೆ ಅವನೆಂದಿಗೂ ನಿನ್ನ ಕೈಬಿಡನು !

★ ಪಾಠ ಭೇದ - ಸೂಖ

ದೀನಾನಾಥಾ ಹಾ ರಾಮ ಕೋದಂಡಧಾರೀ ।
ಪುಢೇ ದೇಖತಾ ಕಾಳ ಪೋಟೀ ಥರಾರೀ ॥
ಮನಾ* ವಾಕ್ಯ ನೇಮಸ್ತ ಹೇ ಸತ್ಯ ಮಾನೀ ।
ನುಪೇಕ್ಷೀ ಕದಾ ರಾಮ ದಾಸಾಭಿಮಾನೀ♦ ॥೨೮॥

ಮನವೇ, ಧನುಷ್ಯ ಧರಿಸಿದ ದೀನರಕ್ಷಕ ರಾಮಚಂದ್ರನನ್ನು ನೋಡುತ್ತಲೇ ಯಮನು ಎದೆಯಲ್ಲಿ ನಡುಗುವನು ! ಈ ನನ್ನ ನಿಶ್ಚಯದ ಹೇಳಿಕೆಯನ್ನು ಸತ್ಯವೆಂದು ತಿಳಿ. ತನ್ನ ಸೇವಕರ ಅಭಿಮಾನಿಯಾದ ರಾಮನು ತನ್ನವರನ್ನೆಂದಿಗೂ ಕೈಬಿಡನು !

ಪದೀ ರಾಘವಾಚೇ ಸದಾ ಬ್ರೀದ ಗಾಜೇ ।
ಬಳೇ ಭಕ್ತರೀಪೂಶಿರೀ ಕಾಂಬಿ ವಾಜೇ ॥
ಪುರೀ ವಾಹಿಲೀ ಸರ್ವ ಜೇಣೇ ವಿಮಾನೀ ।
ನುಪೇಕ್ಷೀ ಕದಾ ರಾಮ ದಾಸಾಭಿಮಾನೀ ॥೨೯॥

ರಾಮಚಂದ್ರನ ಪದತಲದಲ್ಲಿ ಯಾವಾಗಲೂ ಬಿರುದು ಸಾರುತ್ತಿರುವದು; ಅಷ್ಟೇ ಅಲ್ಲದೆ, ಭಕ್ತರವೈರಿಗಳ ತಲೆಯೆಡೆಗೆ ಆತನ ಬಿಲ್ಲು ಟಣತ್ಕರಿಸುವದು ! ಅಯೋಧ್ಯಾ ನಗರವಾಸಿಗಳೆಲ್ಲರನ್ನೇ ವಿಮಾನದಲ್ಲಿ ಪರಂಧಾಮಕ್ಕೆ ಕರದೊಯ್ದ ಸೇವಕರ ಅಭಿಮಾನಿಯಾದ ರಾಮನು ತನ್ನವರನ್ನೆಂದಿಗೂ ಕೈಬಿಡನು !

ಸಮರ್ಥಾಚಿಯಾ ಸೇವಕಾ ವಕ್ರ ಪಾಹೇ ।
ಅಸಾ ಸರ್ವ ಭೂಮಂಡಳೀ ಕೋಣ ಆಹೇ ॥
ಜಯಾಚೀ ಲೀಲಾ ವರ್ಣಿತೀ ಲೋಕ ತೀನ್ಹೀ ।
ನುಪೇಕ್ಷಿ ಕದಾ ರಾಮ ದಾಸಾಭಿಮಾನೀ ॥೩೦॥

ಸರ್ವಶಕ್ತ ರಾಮಪ್ರಭುವಿನ ಸೇವಕರನ್ನು ವಕ್ರದೃಷ್ಟಿಯಿಂದ ನೋಡುವಂಥವನು ಇಡೀ ಜಗತ್ತಿನಲ್ಲಿಯೇ ಯಾವನಿರುವನು ? ಅರ್ಥಾತ್ ಯಾವನೂ ಇಲ್ಲ. ಮೂರೂ ಲೋಕಗಳೇ ಲೀಲಾವರ್ಣನೆ ಮಾಡುತ್ತಿರುವ ದಾಸಾಭಿಮಾನೀ ರಾಮನು ತನ್ನವರನ್ನೆಂದಿಗೂ ಕೈಬಿಡನು !

---

* ಪಾಠ ಭೇದ - ಜನಾ, ಜನೀ

♦ ನುಪೇಕ್ಷೀ ಕದಾ ರಾಮ ದಾಸಾಭೀಮಾನೀ ೨೮-೩೭ (೧೦ ಶ್ಲೋಕ)



ಮಹಾ ಸಂಕಟೀ ಸೋಡಿಲೇ ದೇವ ಜೇಣೆ ।
ಪ್ರತಾಪೇ ಬಳೇ ಆಗಳಾ ಸರ್ವಗೂಣೇ ॥
ಜಯಾತೇ ಸ್ಮರೇ ಶೈಲಜಾ ಶೂಲಪಾಣೀ ।
ನುಪೇಕ್ಷೀ ಕದಾ ರಾಮ ದಾಸಾಭಿಮಾನೀ ॥೩೧॥

ರಾವಣನ ಸೆರೆಯಲ್ಲಿಯ ಭಯಂಕರ ದುಃಖದಿಂದ ದೇವತೆಗಳನ್ನು ಮುಕ್ತಗೊಳಿಸಿದವನೂ, ಪರಾಕ್ರಮ, ಸಾಮರ್ಥ್ಯ ಮೊದಲಾಗಿ ಎಲ್ಲದರಿಂದಲೂ. ಸರ್ವಶೇಷ್ಠನೂ, ಶಿವ-ಪಾರ್ವತಿಯರಿಂದ ಧ್ಯಾನಿಸಲ್ಪಡುತ್ತಿರುವವನೂ ಆದ ದಾಸಾಭಿಮಾನೀ ರಾಮನು ತನ್ನವರನ್ನೆಂದಿಗೂ ಕೈಬಿಡನು !

ಅಹಿಲ್ಯಾ ಶಿಳಾ ರಾಘವೇ ಮುಕ್ತ ಕೇಲೀ ।
ಪದೀ ಲಾಗತಾ ದಿವ್ಯ ಹೋವೂನಿ ಗೇಲೀ ॥
ಜಯಾ ವರ್ಣಿತಾ ಶೀಣಲೀ ವೇದವಾಣೀ ।
ನುಪೇಕ್ಷೀ ಕದಾ ರಾಮ ದಾಸಾಭಿಮಾನೀ ॥೩೨॥

ರಾಮಚಂದ್ರನು ಶಿಲೆಯಾಗಿ ಬಿದ್ದ ಅಹಿಲ್ಯೆಯನ್ನು ಉದ್ಧರಿಸಿದನು, ಕೇವಲ ರಾಘವನ ಚರಣಸ್ಪರ್ಶದಿಂದ ಅವಳು ದಿವ್ಯರೂಪತಾಳಿದಳು ! ಇಂತಹ ಮಹಿಮೆಯ ಹಾಗೂ ವೇದವಾಣಿಗೂ ವರ್ಣಿಸಲಸಾಧ್ಯವಾದ ದಾಸಾಭಿಮಾನೀ ರಾಮನು ತನ್ನವರನ್ನೆಂದಿಗೂ ಕೈಬಿಡನು !

ವಸೇ ಮೇರುಮಾಂದಾರ ಹೇ ಸೃಷ್ಟಿಲೀಲಾ ।
ಶಶೀ ಸೂರ್ಯ ತಾರಾಂಗಣೇ ಮೇಘಮಾಲಾ ॥
ಚಿರಂಜೀವ ಕೇಲೆ ಜಗೀ ದಾಸ ದೋನ್ಹೀ ।
ನುಪೇಕ್ಷೀ ಕದಾ ರಾಮ ದಾಸಾಭಿಮಾನೀ ॥೩೩॥

ಮೇರು-ಮಾಂದಾರಾದಿ ಪರ್ವತಗಳು, ಸೂರ್ಯ-ಚಂದ್ರರು ನಕ್ಷತ್ರ-ಸಮೂಹ, ಮೇಘಮಾಲೆಗಳು ಇವೆಲ್ಲವನ್ನೂ ಕೇವಲ ಲೀಲಾಜಾಲವಾಗಿ ನಿರ್ಮಿಸಿರುವ ಹಾಗೂ ಹನುಮಂತ-ವಿಭೀಷಣರೆಂಬ ತನ್ನ ಇಬ್ಬರು ಸೇವಕರನ್ನು ಚಿರಂಜೀವಿಗಳನ್ನಾಗಿ ಮಾಡಿದ ಭಕ್ತಾಭಿಮಾನೀ ರಾಮನು ತನ್ನವರನ್ನೆಂದಿಗೂ ಕೈಬಿಡನು !

ಉಪೇಕ್ಷಾ ಕದಾ ರಾಮರೂಪೀ ಅಸೇನಾ ।
ಜಿವಾ ಮಾನವಾ ನಿಶ್ಚಯೋ ತೋ ವಸೇನಾ ॥

ಶಿರೀ ಭಾರ ವಾಹೇನ ಬೋಲೇ ಪುರಾಣೇ ॥
ನುಪೇಕ್ಷೀ ಕದಾ ರಾಮ ದಾಸಾಭಿಮಾನಿ ॥೩೪॥

ರಾಮನು ಸಹಜ ಸ್ವಭಾವದಲ್ಲಿ ತಾತ್ಸಾರವೆಂದಿಗೂ ಇರಲಾರದು; ಆದರೆ ಅಜ್ಞಾನೀ ಮನುಜರಿಗೆ ಆ ತರದ ವಿಶ್ವಾಸವಿರುವದಿಲ್ಲ ! ಪುರಾಣ - ಗೀತಾದಿ ಸ್ಮೃತಿ-ಗ್ರಂಥಗಳಲ್ಲಿ ''ಭಕ್ತರ ಯೋಗಕ್ಷೇಮವನ್ನು ತಲೆಯಮೇಲೆ ಹೊರುವೆನೆಂ''*ದು ವಚನವಿತ್ತಿರುವ ದಾಸಾಭಿಮಾನೀ ರಾಮನು ತನ್ನವರನ್ನೆಂದಿಗೂ ಕೈಬಿಡನು !

ಅಸೇ ಹೋ ಜಯಾ ಅಂತರೀ ಭಾವ ಜೈಸಾ ।
ವಸೇ ಹೋ ತಯಾ ಅಂತರೀ ದೇವ ತೈಸಾ ॥
ಅನನ್ಯಾಸಿ ರಕ್ಷಿತಸೇ ಚಾಪಪಾಣೇ ।
ನುಪೇಕ್ಷಿ ಕದಾ ರಾಮ ದಾಸಾಭಿಮಾನೀ ॥ ॥೩೫॥

ಯಾವನಲ್ಲಿ ಎಂತಹ ಭಾವವಿರುವದೋ, ದೇವನಾದರೂ ಅವನಲ್ಲಿ ಆದೇ ರೀತಿಯಾಗಿ ವಾಸಿಸುವನು; ಶ್ರೀರಾಮನು ಅನನ್ಯ ಭಕ್ತರನ್ನು ಕಾಪಾಡುವಲ್ಲಿ ಸಂದೇಹವೇ ಇಲ್ಲ, ಆ ದಾಸಾಭಿಮಾನಿಯು ತನ್ನವರನ್ನೆಂದಿಗೂ ಕೈಬಿಡನು !

ಸದಾ ಸರ್ವದಾ ದೇವ ಸನ್ನೀಧ ಆಹೇ ।
ಕೃಪಾಳೂಪಣೇ ಅಲ್ಪ ಧಾರಿಷ್ಟ ಪಾಹೇ ॥
ಸುಖಾನಂದ ಆನಂದ ಕೈವಲ್ಯದಾನೀ ।
ನುಪೇಕ್ಷಿ ಕದಾ ರಾಮ ದಾಸಾಭಿಮಾನೀ ॥ ॥೩೬॥

ಯಾವಾಗಲಾದರೂ ದೇವನು ಭಕ್ತನ ಹತ್ತಿರವೇ ಇರುತ್ತಿದ್ದರೂ ದಯಾಳುತನದಿಂದ ಅವನ (ಭಕ್ತನ) ಸ್ವಲ್ಪ ಪರೀಕ್ಷೆ ಮಾಡುತ್ತಾನೆ ! ಪರಿಪೂರ್ಣಾನಂದ ಮುಕ್ತಿದಾತನಾದ ದಾಸಾಭಿಮಾನೀ ರಾಮನು ತನ್ನವರನ್ನೆಂದಿಗೂ ಕೈ ಬಿಡನು !

ಸದಾ ಚಕ್ರವಾಕಾಸಿ ಮಾರ್ತಂಡ ಜೈಸಾ ।
ಉಡೀ ಘಾಲಿತೋ ಸಂಕಟೀ ಸ್ವಾಮಿ ತೈಸಾ ॥

* ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ !
- ಭಗವದ್ಗೀತಾ-೯, ೨೨



ಹರೀ ಭಕ್ತಿಚಾ ಘಾವ ಗಾಜೇ ನಿಶಾಣೇ ।
ನುಪೇಕ್ಷೀ ಕದಾ ರಾಮ ದಾಸಾಭೀಮಾನೀ ॥ ॥೩೭॥

ಸೂರ್ಯನು ಚಕ್ರವಾಕ ಪಕ್ಷಿಯ ದುಃಖ ಪರಿಹರಿಸುವಂತೆ ರಾಮಪ್ರಭುವು ಭಕ್ತರ ಸಂಕಟ ಕಾಲದಲ್ಲಿ ಧುಮುಕಿ ದುಃಖ ನಾಶಮಾಡುವನು. ಈಶ್ವರ ಭಕ್ತಿಯ ದುಃಖನಾಶಕ ದೊಣ್ಣೆಯು ಪ್ರಕಟವಾಗಿ ಮೆರೆಯುತ್ತಿರುವದು ! ಒಟ್ಟಿಗೆ ದಾಸಾಭಿಮಾನೀ ರಾಮನು ತನ್ನವರನ್ನೆಂದಿಗೂ ಕೈಬಿಡನು !

ಮನಾ ಪ್ರಾರ್ಥನಾ ತೂಜಲಾ ಏಕ ಆಹೇ !
ರಘೂರಾಜ 'ಅಂಕೀತ ಹೋವುನೀ ರಾಹೇ*' ॥
ಅವಜ್ಞಾ ಕದಾ ಹೋ ಯದರ್ಥಿ ನ ಕೀಜೇ ।
ಮನಾ ಸಜ್ಜನಾ ರಾಘವೀ ವಸ್ತಿ ಕೀಜೇ♦ ॥ ॥೩೮॥

ಮನವೇ, ನಿನಗೆ ನನ್ನದೊಂದು ಪ್ರಾರ್ಥನೆ ಏನೆಂದರೆ 'ನೀನು ರಾಮಚಂದ್ರನ ಅಜ್ಞಾಧಾರಕನಾಗಿರು' ಈ ಸಂಗತಿಗೆಂದಿಗೂ ತಾತ್ಸಾರ ಮಾಡಬೇಡ ಮತ್ತೆ ಸುಮನಾ, ರಾಮಸ್ವರೂಪದಲ್ಲಿ ವಾಸಮಾಡು.

ಜಯಾ ವರ್ಣಿತೀ ವೇದಶಾಸ್ತ್ರೆ ಪುರಾಣೇ ।
ಜಯಾಚೇನಿ ಯೋಗೇ ಸಮಾಧಾನ ಬಾಣೇ ॥
ತಯಾಲಾಗಿ ಹೇ ಸರ್ವ ಚಾಂಚಲ್ಯ ದೀಜೇ ।
ಮನಾ ಸಜ್ಜನಾ ರಾಘವೀ ವಸ್ತಿ ಕೀಜೇ ॥೩೯॥

ಸಾಧು ಮನವೇ ಯಾವನನ್ನು ೪ ವೇದ , ೬ ಶಾಸ್ತ್ರ, ೧೮ ಪುರಾಣಗಳು ವರ್ಣಿಸುತ್ತಿವೆಯೋ ಹಾಗೂ ಯಾರಿಂದ ಸಮಾಧಾನ ಬಿಂಬಿಸುವದೋ ಅಂತಹ ಶ್ರೀರಾಮನಿಗಾಗಿ ನಿನ್ನ ಎಲ್ಲ ಚಂಚಲತೆಯನ್ನು ತೊರೆದು, ಅವನಲ್ಲಿಯೇ ವಾಸಮಾಡು.

ಮನಾ ಪಾವಿಜೇ ಸರ್ವಹೀ ಸೂಖ ಜೇಥೇ ।
ಅತೀ ಆದರೇ ತೇವಿಜೇ ಲಕ್ಷ ತೇಥೇ ॥
ವಿವೇಕೇ ಕುಡೀ ಕಲ್ಪನಾ ಪಾಲಟೀಜೇ ।
ಮನಾ ಸಜ್ಜನಾ ರಾಘವೀ ವಸ್ತಿ ಕೀಜೇ ॥ ॥೪೦॥

* ಪಾಠ ಭೇದ - ಥಕ್ಕೀತ ಹೋವೂನಿ ಪಾಹೆ
♦ ಮನಾ ಸಜ್ಜನಾ ರಾಘವೀ ವಸ್ತಿ ಕೀಜೇ : ೩೮-೪೨ (೫ ಶ್ಲೋಕ)

ಸನ್ಮನವೇ, ಎಲ್ಲ ಸುಖವೂ ಸಿಗುವ ಸ್ಥಾನದಲ್ಲಿಯೇ ಪ್ರೇಮದಿಂದ ಲಕ್ಷವಿಡಬೇಕಷ್ಟೇ ? ಎಂದ ಮೇಲೆ ವಿಚಾರದಿಂದ ಹೀನ ಕಲ್ಪನೆಗಳನ್ನು ಪಲ್ಲಟಿಸಿ ರಾಮಸ್ವರೂಪದಲ್ಲಿ ವಾಸ ಮಾಡು.

**ಬಹೂ ಹಿಂಡತಾ ಸೂಖ ಹೋಣಾರ ನಾಂಹೀ ।**
**ಶಿಣಾವೇ ಪರೀ ನಾತುಡೇ ಹೀತ ಕಾಂಹೀ ॥**
**ವಿಚಾರೀ ಬರೇ ಅಂತರಾ ಬೋಧವೀಜೇ ।**
**ಮನಾ ಸಜ್ಜನಾ ರಾಘವೀ ವಸ್ತಿ ಕೀಜೇ ॥** ॥೪೧॥

ಸಜ್ಜನಾ ಮನವೇ, ಅತಿಯಾಗಿ ಅಲೆದಾಡುವದರಿಂದ ಸುಖವಾಗದು; ಅದರಿಂದ ಬರೇ ದಣಿವಾಗುತ್ತಿದ್ದು ನಿನ್ನ ಹಿತವೇನೂ ಕೈಗೂಡದು ! ಅದಕ್ಕಾಗಿ ಅಂತಃಕರಣಕ್ಕೆ ಒಳ್ಳೇ ತಿಳಿಹೇಳಿ ರಾಮಸ್ವರೂಪದಲ್ಲಿ ವಾಸಮಾಡು.

**ಬಹೂತಾಪರೀ ಹೇಚಿ ಆತಾ ಧರಾವೆ ।**
**ರಘೂನಾಯಕಾ ಆಪುಲೇಸೇ ಕರಾವೇ ॥**
**ದಿನಾನಾಥ ಹೇ ತೋಡರೀ ಬ್ರೀದ ಗಾಜೇ ।**
**ಮನಾ ಸಜ್ಜನಾ ರಾಘವೀ ವಸ್ತಿ ಕೀಜೇ ॥** ॥೪೨॥

ಸದ್ಗುಣಿ ಮನವೇ ಎಲ್ಲ ತರದಿಂದಲೂ ಸಾರಭೂತವಾಗಿರುವ ಇದನ್ನೊಂದೇ ಲಕ್ಷದಲ್ಲಿಡು - ರಾಮಪ್ರಭುವನ್ನು ನಿನ್ನವನಾಗಿ ಮಾಡಿಕೋ. ರಾಮಚಂದ್ರನು ದೀನರಕ್ಷಕನೆಂದು ಅವನ ಕಾಲ್ತೊಡಿಗೆಯೇ ಬಿರುದು ಸಾರುತ್ತಿರಲು ಆತನಲ್ಲಿ ವಾಸಮಾಡು.

**ಮನಾ ಸಜ್ಜನಾ ಏಕ ಜೀವೀ ಧರಾವೇ ।**
**ಜನೀ ಆಪುಲೇ ಹೀತ ತೂವಾ ಕರಾವೇ ॥**
**ರಘೂನಾಯಕಾವೀಣ ಬೋಲೋ ನಕೋ ಹೋ ।**
**ಸದಾ ಮಾನಸೀ ಹಾ ನಿಜಧ್ಯಾಸ ರಾಹೋ ॥** ॥೪೩॥

ಸನ್ಮನವೇ, ನೀನು ಒಂದು ಮಾತನ್ನು ಗಟ್ಟಿಯಾಗಿ ಹಿಡಿ - ಅದೆಂದರೆ ಜಗತ್ತಿನಲ್ಲಿ ನಿನ್ನ ಹಿತ ಮಾಡಿಕೋ ಮತ್ತು ಸ್ವಹಿತ ಸಾಧಿಸಬೇಕಾದರೆ ರಾಮಚಂದ್ರನ ನಾಮ- ಗುಣಕೀರ್ತನೆ ಇತ್ಯಾದಿಯ ಹೊರತಾಗಿ ಅನ್ಯ ಮಾತುಗಳನ್ನು ಆಡಬೇಡವಪ್ಪಾ ! ಯಾವಾಗಲೂ ನಿನ್ನಲ್ಲಿ ಇದೇ ಅನುಸಂಧಾನವಿರಲಿ.



**ಮನಾರೇ ಜನೀ ಮೌನಮುದ್ರಾ ಧರಾವೀ ।**
**ಕಥಾ ಆದರೇ ರಾಘವಾಚೀ ಕರಾವೀ ॥**
**ನಸೇ ರಾಮ ತೇ ಧಾಮ ಸೋಡೂನಿ ದ್ಯಾವೇ ।**
**ಸುಖಾಲಾಗಿ ಅರಣ್ಯ ಸೇವೀತ ಜಾವೇ ॥** ॥೪೪॥

ಅಪ್ಪಾ ಮನವೇ, ಜನರಲ್ಲಿ ಮೂಕನಂತೆ ಇರುತ್ತ, ರಾಮನ ಕೀರ್ತನೆಯನ್ನು ತತ್ಪರತೆಯಿಂದ ಮಾಡು. ಅಷ್ಟೇ ಅಲ್ಲದೆ, ನೈಜ ಸುಖಪ್ರಾಪ್ತಿಗಾಗಿ ರಾಮಭಕ್ತಿಯಿಲ್ಲದ ಮನೆಯನ್ನು ಬಿಟ್ಟು ವನಕ್ಕೆ ಹೋಗುತ್ತಿರು !

**ಜಯಾಚೇನಿ ಸಂಗೇ ಸಮಾಧಾನ ಭಂಗೇ ।**
**ಅಹಂತಾ ಅಕಸ್ಮಾತ ಯೇವೂನಿ ಲಾಗೇ ॥**
**ತಯೇ ಸಂಗತೀಚೇ ಜನೀ ಕೋಣ ಗೋಡೀ ।**
**ಜಯೇ ಸಂಗತೀನೇ ಮತೀ ರಾಮ ಸೋಡೀ ॥** ॥೪೫॥

ತನ್ನ ಶಾಂತಿಗೆ ಭಂಗ ತರುವ ಹಾಗೂ ಒಮ್ಮೆಲೇ ಅಹಂಕಾರ ಅಂಟಿಕೊಳ್ಳುವ ಕುಜನ ಸಹವಾಸದಲ್ಲಿ ಸ್ವಾರಸ್ಯವೇನು ? ಆ ಲೌಕಿಕ ಜನರ ಸಂಗತಿಯಿಂದ ಬುದ್ಧಿಯು ರಾಮನನ್ನೇ ತ್ಯಜಿಸುವದು !

**ಮನಾ ಜೇ ಘಡೀ ರಾಘವಾವೀಣ ಗೇಲೀ ।**
**ಜನೀ ಆಪುಲೀ ತೇ ತುವಾ ಹಾನಿ ಕೇಲೀ ॥**
**ರಘೂನಾಯಾಕಾವೀಣ ತೋ ಶೀಣ ಆಹೇ ।**
**ಜನೀ ದಕ್ಷ ತೋ ಲಕ್ಷ ಲಾವೂನಿ ಪಾಹೇ ॥** ॥೪೬॥

ಮನವೇ, ರಾಮಚಿಂತನದ ಹೊರತಾಗಿ ಒಂದು ಕ್ಷಣವನ್ನು ಕಳೆದರೂ ಕೂಡ, ನೀನು ನಿನ್ನ ಹಾನಿ ಮಾಡಿಕೊಂಡಿಯೆಂದು ತಿಳಿ. ಯಾಕೆಂದರೆ ರಾಮಚಂದ್ರನನ್ನು ಬಿಟ್ಟು ಏನೆಲ್ಲವೂ ದಣಿವು ಮಾತ್ರವಾಗಿದೆ ! ಜನರಲ್ಲಿ ಜಾಣನಾದವನೇ ಈ ಸಂಗತಿಯನ್ನು ಲಕ್ಷಗೊಟ್ಟು ನೋಡುವನು !

**ಮನೀ ಲೋಚನೀ ಶ್ರೀಹರೀ ತೋಚಿ ಪಾಹೇ ।**
**ಜನೀ ಜಾಣತಾ ಭಕ್ತ ಹೋವೂನಿ ರಾಹೇ ॥**
**ಗುಣೇ ಪ್ರೀತಿ ರಾಖೇ ಕ್ರಮೂ ಸಾಧನಾಚಾ ।**
**ಜಗೀ ಧನ್ಯ ತೋ ದಾಸ ಸರ್ವೋತ್ತಮಾಚಾ*** ॥೪೭॥

---

*ಜಗೀ ಧನ್ಯ ತೋ ದಾಸ ಸರ್ವೋತ್ತಮಾಚಾ : ೪೭-೫೬ (೧೦ ಶ್ಲೋಕ)

ಮನದಲ್ಲಿಯೂ, ನಯನದಲ್ಲಿಯೂ ಭಗವಂತನನ್ನೇ ನೋಡುವ, ಜನರಲ್ಲಿ ಜ್ಞಾನೀ ಭಕ್ತನಾಗಿರುವ ಹಾಗೂ ಸಗುಣದಲ್ಲಿ ಪ್ರೇಮ ಧರಿಸಿ ಸಾಧನಕ್ರಮವನ್ನು ಆಚರಿಸುವ ರಾಮಭಕ್ತನು ಜಗತ್ತಿನಲ್ಲಿ ಧನ್ಯನಿರುತ್ತಾನೆ !

**ಸದಾ ದೇವಕಾಜೀ ಝಿಜೇ ದೇಹ ಜ್ಯಾಚಾ ।**
**ಸದಾ ರಾಮನಾಮೇ ವದೇ ನಿತ್ಯ ವಾಚಾ ॥**
**ಸ್ವಧರ್ಮೇಚಿ ಚಾಲೇ ಸದಾ ಉತ್ತಮಾಚಾ ।**
**ಜಗೀ ಧನ್ಯ ತೋ ದಾಸ ಸರ್ವೋತ್ತಮಾಚಾ ॥೨೮॥**

ಯಾವಾಗಲೂ ಭಕ್ತಿಕಾರ್ಯದಲ್ಲಿಯೇ ದೇಹವನ್ನು ಸವೆಸುವ, ಸರ್ವದಾ ವಾಣಿಯಿಂದ ರಾಮನ ನಾಮಸ್ಮರಣೆಯನ್ನೇ ಮಾಡುವ ಹಾಗೂ ಶ್ರೇಷ್ಠ ಸ್ವಧರ್ಮದಿಂದಲೇ ನಡೆಯುವ ರಾಮಭಕ್ತನು ಜಗತ್ತಿನಲ್ಲಿ ಧನ್ಯನಿರುತ್ತಾನೆ !

**ಸದಾ ಬೋಲಣ್ಯಾಸಾರಿಖೇ ಚಾಲತಾಹೇ ।**
**ಅನೇಕೀ ಸದಾ ಏಕ ದೇವಾಸಿ ಪಾಹೇ ॥**
**ಸಗೂಣೀ ಭಜೇ ಲೇಶ ನಾಂಹೀ ಭ್ರಮಾಚಾ ।**
**ಜಗೀ ಧನ್ಯ ತೋ ದಾಸ ಸರ್ವೋತ್ತಮಾಚಾ ॥೨೯॥**

ಯಾವಾಗಲೂ ಮಾತಾಡಿದಂತೆ ನಡೆಯುವ ಸರ್ವರಲ್ಲಿಯೂ ಒಬ್ಬ ದೇವನನ್ನೇ ನೋಡುವ ಹಾಗೂ ಕಿಂಚಿತ್ತವೂ ಸಂಶಯವಿಲ್ಲದೆ ಸಗುಣ ಭಜನೆ ಮಾಡುವ ರಾಮಭಕ್ತನು ಜಗತ್ತಿನಲ್ಲಿ ಧನ್ಯನಿರುತ್ತಾನೆ !

**ನಸೇ ಅಂತರೀ 'ಕಾಮ ನಾನಾ*' ವಿಕಾರೀ ।**
**ಉದಾಸೀನ ತೋ ತಾಪಸೀ ಬ್ರಹ್ಮಚಾರೀ ॥**
**ನಿವಾಲಾ ಮನೀ ಲೇಶ ನಾಂಹೀ ತಮಾಚಾ ।**
**ಜಗೀ ಧನ್ಯತೋ ದಾಸ ಸರ್ವೋತ್ತಮಾಚಾ ॥೩೦॥**

ಒಳಗೆ ವಿವಿಧ ಚೇಷ್ಟೆಯ ಕಾಮವಿಲ್ಲದವನು, ನಿರಾಶನು, ಶಮದಮಾದಿ ತಪವನ್ನಾಚರಿಸುವವನು, ಬ್ರಹ್ಮಚರ್ಯರತನು, ಮನದಲ್ಲಿ ಶಾಂತನಾದವನು, ತಮೋಗುಣ ಲವಲೇಶವೂ ಇಲ್ಲದವನು ಆದ ರಾಮಭಕ್ತನು ಜಗತ್ತಿನಲ್ಲಿ ಧನ್ಯನಿರುತ್ತಾನೆ !

---

* ಪಾಠಭೇದ - ಕಾಮಕಾರೀ



**ಮದೇ ಮತ್ಸರೇ ಸಾಂಡಿಲೀ ಸ್ವಾರ್ಥಬುದ್ಧೀ ।**
**ಪ್ರಪಂಚೀಕ ನಾಂಹೀ ಜಯಾತೇ ಉಪಾಧೀ ॥**
**ಸದಾ ಬೋಲಣೇ ನಮ್ರ ವಾಚಾ ಸುವಾಚಾ ।**
**ಜಗೀ ಧನ್ಯ ತೋ ದಾಸ ಸರ್ವೋತ್ತಮಾಚಾ ॥೩೧॥**

ಮದ-ಮತ್ಸರ-ಸ್ವಾರ್ಥಬುದ್ಧಿಯನ್ನು ತ್ಯಜಿಸಿದ, ಸಂಸಾರಿಕ ಜೊಂಜಾಟವಿಲ್ಲದ ಹಾಗೂ ಯಾವಾಗಲೂ ಮೃದು-ಮಧುರವಾಗಿ ಮಾತಾಡುವ ರಾಮಭಕ್ತನು ಜಗತ್ತಿನಲ್ಲಿ ಧನ್ಯನಿರುತ್ತಾನೆ !

**ಕ್ರಮೀ ವೇಳ ಜೋ ತತ್ತ್ವಚಿಂತಾನುವಾದೇ ।**
**ನ ಲಿಂಪೇ ಕದಾ ದಂಭವಾದೇ ವಿವಾದೇ ॥**
**ಕರೀ ಸೂಖಸಂವಾದ ಜೋ ಊಗಮಾಚಾ ।**
**ಜಗೀ ಧನ್ಯ ತೋ ದಾಸ ಸರ್ವೋತ್ತಮಾಚಾ ॥೩೨॥**

ಪರತತ್ತ್ವದ ಚಿಂತನೆ - ಕಥನೆಯಲ್ಲಿ ವೇಳೆಗಳೆಯುವ, ದಾಂಭಿಕ ವಾದ ವಿವಾದಕ್ಕೆಂದಿಗೂ ಸೋಂಕದ ಹಾಗೂ ಮೂಲವಸ್ತುವಿನ ಬಗ್ಗೆ ಪ್ರೇಮದಿಂದ ವಿಚಾರವಿನಿಮಯ ಮಾಡುವ ರಾಮಭಕ್ತನು ಜಗತ್ತಿನಲ್ಲಿ ಧನ್ಯನಿರುತ್ತಾನೆ !

**ಸದಾ ಆರ್ಜವೀ ಪ್ರೀಯ ಜೋ ಸರ್ವ ಲೋಕೀ ।**
**ಸದಾ ಸರ್ವದಾ ಸತ್ಯವಾದೀ ವಿವೇಕೀ ॥**
**ನ ಬೋಲೇ ಕದಾ ಮಿಥ್ಯ ವಾಚಾ ತ್ರಿವಾಚಾ ।**
**ಜಗೀ ಧನ್ಯ ತೋ ದಾಸ ಸರ್ವೋತ್ತಮಾಚಾ ॥೩೩॥**

ಸರ್ವದಾ ವಿನಯಶೀಲನು, ಜನಪ್ರೀಯನು, ಯಾವಾಗಲೂ ಸತ್ಯವನ್ನು ಸಮರ್ಥಿಸುವವನು, ವಿಚಾರಿಯು, ತ್ರಿಕರಣಗಳಿಂದಲೂ ಎಂದಿಗೂ ಸುಳ್ಳು ಮಾತಾಡದವನು ಆದ ರಾಮಭಕ್ತನು ಜಗತ್ತಿನಲ್ಲಿ ಧನ್ಯನಿರುತ್ತಾನೆ !

**ಸದಾ ಸೇವಿ ಆರಣ್ಯ ತಾರುಣ್ಯಕಾಳೀ ।**
**ಮಿಳೇನಾ ಕದಾ ಕಲ್ಪನೇಚೇನಿ ಮೇಳೀ ॥**
**ಚಳೇನಾ ಮನೀ ನಿಶ್ಚಯೋ ದೃಢ ಜ್ಯಾಚಾ ।**
**ಜಗೀ ಧನ್ಯ ತೋ ದಾಸ ಸರ್ವೋತ್ತಮಾಚಾ ॥೩೪॥**

ಆಯುಷ್ಯದ ಭರದ ಕಾಲದಲ್ಲಿಯೇ ಕಲ್ಪನಾಜಾಲದಲ್ಲಿ ಸಿಲುಕದೆ ಸತತ ಏಕಾಂತ ಸೇವನೆ ಮಾಡುವ ಹಾಗೂ ಮನದಲ್ಲಿಯ ದೃಢನಿಶ್ಚಯವು ಅಭಂಗವಾಗಿರುವ ರಾಮಭಕ್ತನು ಜಗತ್ತಿನಲ್ಲಿ ಧನ್ಯನಿರುತ್ತಾನೆ !

**ನಸೇ ಮಾನಸೀ ನಷ್ಟ ಆಶಾ ದುರಾಶಾ ।**
**ವಸೇ ಅಂತರೀ ಪ್ರೇಮಪಾಶಾ ಪಿಪಾಶಾ ॥**
**ಋಣೀ ದೇವ ಹಾ ಭಕ್ತಿಭಾವೇ ಜಯಾಚಾ ।**
**ಜಗೀ ಧನ್ಯ ತೋ ದಾಸ ಸರ್ವೋತ್ತಮಾಚಾ ॥೫೫॥**

ಮನದಲ್ಲಿ ದುಷ್ಟ ದುರಾಶೆಯಿಲ್ಲದವನು, ಆದರೆ ಅಂತರಂಗದಲ್ಲಿ ತೀವ್ರವಾದ ಈಶಪ್ರೇಮದ ತೃಷ್ಣೆಯಿದ್ದವನು ಹಾಗೂ ತನ್ನ ಅನನ್ಯ ಭಕ್ತಿಯಿಂದ ದೇವನನ್ನೇ ಋಣಿ ಮಾಡಿದವನು ಆದ ರಾಮಭಕ್ತನು ಜಗತ್ತಿನಲ್ಲಿ ಧನ್ಯನಿರುತ್ತಾನೆ

**ದೀನಾಚಾ ದಯಾಳೂ ಮನಾಚಾ ಮವಾಳೂ ।**
**ಸ್ನೇಹಾಳೂ ಕೃಪಾಳೂ ಜಗೀ ದಾಸಪಾಳೂ ॥**
**ತಯಾ ಅಂತರೀ ಕ್ರೋಧ ಸಂತಾಪ ಕೈಚಾ ।**
**ಜಗೀ ಧನ್ಯ ತೋ ದಾಸ ಸರ್ವೋತ್ತಮಾಚಾ ॥೫೬॥**

ಬಡವರ ಮೇಲೆ ದಯೆ ತೋರುವವನು, ಕೋಮಲ ಮನಸ್ಸಿನವನು, ಸಖ್ಯಪರನು, ಕರುಣಾಳುವು, ತನ್ನನ್ನು ನಂಬಿದವರ ಪಾಲನಕರ್ತನು, ಸಿಟ್ಟು ಆಕ್ರೋಶದ ಲೇಶವೂ ಇಲ್ಲದವನು ಆದ ರಾಮಭಕ್ತನು ಜಗತ್ತಿನಲ್ಲಿ ಧನ್ಯನಿರುತ್ತಾನೆ!

**ಜಗೀ ಹೋಯಿಜೇ ಧನ್ಯ ಯಾ ರಾಮನಾಮೇ ।**
**ಕ್ರಿಯಾ ಭಕ್ತಿ ಉಪಾಸನಾ ನಿತ್ಯನೇಮೇ ॥**
**ಉದಾಸೀನತಾ ತತ್ತ್ವತಾ ಸಾರ ಆಹೇ ।**
**ಸದಾ ಸರ್ವದಾ ಮೋಕಳೀ ವೃತ್ತಿ ರಾಹೇ ॥೫೭॥**

ಈ ಜಗತ್ತಿನಲ್ಲಿ ಸರ್ವಪ್ರಸಿದ್ಧವಾದ ರಾಮನಾಮದಿಂದಲೂ, ಕರ್ಮ-ಭಕ್ತಿ ಉಪಾಸನೆಯ (ಪೂಜಾದಿ ಕರ್ಮ, ಈಶ್ವರಪ್ರೇಮರೂಪೀ ಭಕ್ತಿ-ಭಜನೆ-ಕೀರ್ತನಾದಿ ಉಪಾಸನೆ) ನಿತ್ಯನೇಮದಿಂದಲೂ ಧನ್ಯರಾಗಬೇಕು. ಕರ್ಮಾದಿಗಳಿಂದ ಲಭಿಸುವ (ಮನಸ್ಸಿನ) ನಿರ್ದ್ವಂದ್ವ ಸ್ಥಿತಿಯೇ ಸರ್ವಶ್ರೇಷ್ಠವಾಗಿದ್ದು ಆದರಿಂದ ಚಿತ್ತವು ಎಲ್ಲ ಕಾಲಕ್ಕೂ ಮುಕ್ತವುಳಿಯುವದು.



**ನಕೊ ವಾಸನಾ ವಿಷಯೀ ವೃತ್ತಿರೂಪೇ ।**
**ಪದಾರ್ಥೀ ಜಡೇ ಕಾಮನಾ ಪೂರ್ವಪಾಪೇ ॥**
**ಸದಾ ರಾಮ ನಿಷ್ಕಾಮ ಚಿಂತೀತ ಜಾವಾ ।**
**ಮನಾ ಕಲ್ಪನಾ ಲೇಶ ತೋಹೀ ನಸಾವಾ ॥೫೮॥**

ಮೊದಲಿನ ಪಾಪದಿಂದಲೇ ಸ್ಥೂಲ ವಸ್ತುಗಳಲ್ಲಿ ಆಶೆ ನೆಲೆಸುತ್ತಿದ್ದು, ಅಂತಹ ಸೂಕ್ಷ್ಮ ವಿಷಯ ವಾಸನೆಯನ್ನು ತ್ಯಜಿಸಪ್ಪಾ ! ಒಂದಿಷ್ಟೂ ಕಲ್ಪನೆಯನ್ನು ಇರಗೊಡದೆ ಯಾವಾಗಲೂ ಕಾಮನಾರಹಿತವಾಗಿ ರಾಮನನ್ನು ಧ್ಯಾನಿಸಪ್ಪಾ !

**ಮನಾ ಕಲ್ಪನಾ ಕಲ್ಪಿತಾ ಕಲ್ಪಕೋಟೀ ।**
**ನವ್ಹೇರೇ ನವ್ಹೇ ಸರ್ವಥಾ ರಾಮಭೇಟೀ ॥**
**ಮನೀ ಕಾಮನಾ ರಾಮ ನಾಂಹೀ ಜಯಾಲಾ ।**
**ಅತೀ ಆದರೇ ಪ್ರೇಮ ನಾಂಹೀ ತಯಾಲಾ ॥೫೯॥**

ಮನವೇ, ಕಲ್ಪನೆಗಳನ್ನು ಕಲ್ಪಿಸುತ್ತ ನಡೆದರೆ ಅವು ಅಸಂಖ್ಯವಾಗಿ ಬೆಳೆಯುತ್ತವೆ ಹಾಗೂ ಅದರಿಂದಲೆಂದಿಗೂ ರಾಮನ ಭೆಟ್ಟಿಯಾಗದು ! ಕಾಮನೆಯ ಮೂಲಕವಾಗಿ ಒಳಗೆ ರಾಮನಿಲ್ಲದವನಿಗೆ ಸದ್ಭಾವದ ಭಕ್ತಿಯೆಂದಿಗೂ ಉದಿಸಲಾರದು !

**ಮನಾ ರಾಮ ಕಲ್ಪತರೂ ಕಾಮಧೇನೂ ।**
**ನಿಧೀ ಸಾರ ಚಿಂತಾಮಣೀ ಕಾಯ ವಾನೂ ॥**
**ಜಯಾಚೇನಿ ಯೋಗೇ ಘಡೇ ಸರ್ವ ಸತ್ತಾ ।**
**ತಯಾ ಸಾಮ್ಯತಾ ಕಾಯಸೀ ಕೋಣ ಆತಾ ॥೬೦॥**

ಮನವೇ, ಕಲ್ಪವೃಕ್ಷ -ಕಾಮಧೇನು-ಭಾಗ್ಯನಿಧಿ-ಚಿಂತಾಮಣಿ ಎಲ್ಲವೂ ಆಗಿರುವ ರಾಮನನ್ನು ಏನೆಂದು ವರ್ಣಿಸಲಿ ? ಯಾವನಿಂದ ಸರ್ವಸಾಮರ್ಥ್ಯವು ನಡೆಯುವದೋ ಅಂತಹ ರಾಮಪ್ರಭುವಿಗೆ ಯಾರು ಏನು ಸಾಟಿ ?

**ಉಭಾ ಕಲ್ಪವೃಕ್ಷಾತಳೀ ದುಃಖ ವಾಹೇ ।**
**ತಯಾ ಅಂತರೀ ಸರ್ವದಾ ತೇಚಿ ರಾಹೇ ॥**
**ಜನೀ ಸಜ್ಜನೀ ವಾದ ಹಾ ವಾಢವಾವಾ ।**
**ಪುಢೇ ಮಾಗುತಾ ಶೋಕ ಜೀವೀ ಧರಾವಾ ॥೬೧॥**

ಇನ್ನು , ಕಲ್ಪವೃಕ್ಷದ ಕೆಳಗೆ ನಿಂತುಕೊಂಡು ದುಃಖವನ್ನು ಭಾವಿಸಿದರೆ, ಅವನಿಗೆ ನಿರಂತರವೂ ದುಃಖವೇ ಆಗುವದು ! ಅದರಂತೆ ಸತ್ಪುರುಷರ ಬಳಿಗೆ ಹೋಗಿಯೂ ವಾದಕ್ಕೇ ಅಣಿಯಾದರೆ ಎಂದೆಂದಿಗೂ ದುಃಖಕ್ಕೆ ಭಾಗಿಯಾಗಲೇಬೇಕಾಗುತ್ತದೆ.

ನಿಜಧ್ಯಾಸ ತೋ ಸರ್ವ ತುಟೋನ ಗೇಲಾ ।
ಬಳೇ ಅಂತರೀ ಶೋಕಸಂತಾಪ ಠೇಲಾ ॥
ಸುಖಾನಂದ ಆನಂದ ಭೇದೇ ಬುಡಾಲಾ ।
ಮನೀ ನಿಶ್ಚಯೋ ಸರ್ವ ಖೇದೇ ಉಡಾಲಾ ॥೬೨॥

ಆ ವಾದಿಗೆ ರಾಮನ ಅನುಸಂಧಾನವೆಲ್ಲ ಕಡಿದುಹೋಗಿ, ಅಂತಃಕರಣದಲ್ಲಿ ದುಃಖದುಮ್ಮಾನವೇ ಮನೆ ಮಾಡಿರುವದು ! ಭೇದಬುದ್ಧಿಯಿಂದ ಸುಖಸಂತೋಷ ಮುಳುಗಿ, ಆ ವಿಷಾದದಿಂದ ಅವನ ನಿಶ್ಚಯವೆಲ್ಲ ಹಾರಿ ಹೋಗಿರುವುದು !

ಘರೀ ಕಾಮಧೇನೂ ಪುಢೇ ತಾಕ ಮಾಗೇ ।
ಹರೀಬೋಧ ಸೋಡೂನಿ ವೀವಾದ ಲಾಗೇ ॥
ಕರೀ ಸಾರ ಚಿಂತಾಮಣೀ ಕಾಚಖಂಡೇ ।
ತಯಾ ಮಾಗತಾ ದೇತ ಆಹೇ ಉದಂಡೇ ॥೬೩॥

ಜ್ಞಾನಿಗಳ ಭಕ್ತಿಯ ಉಪದೇಶವನ್ನು ಕೇಳದೇ, ಅವರೊಡನೆ ವಾದಿಸಲಿಕ್ಕೆ ಹತ್ತಿದರೆ, ಮನೆಯಲ್ಲಿ ಕಾಮಧೇನುವಿರಲು ಅದಕ್ಕೆ ಮಜ್ಜಿಗೆ ಬೇಡಿದಂತಾಗುತ್ತದೆ! ಬೇಡದರೆ ಬೇಕಾದಷ್ಟು ಕೊಡಬಲ್ಲ ಸರ್ವಶ್ರೇಷ್ಠ ಚಿಂತಾಮಣಿಯು ಕೈಯ್ಯಲ್ಲಿ ಇರಲಿಕ್ಕಾಗಿಯೂ ಅದನ್ನು ಕಾಜಿನ ತುಣುಕೆಂದು ಬಗೆದಂತಾಗುತ್ತದೆ !!

ಅತೀ ಮೂಢ ತ್ಯಾ ದೃಢ ಬುದ್ಧೀ ಅಸೇನಾ ।
ಅತೀ ಕಾಮ ತ್ಯಾ ರಾಮ ಚಿತ್ತೀ ವಸೇನಾ ॥
ಅತೀ ಲೋಭ ತ್ಯಾ ಕ್ಷೋಭ ಹೋಯೀಲ ಜಾಣಾ ।
ಅತೀ ವಿಷಯೀ ಸರ್ವದಾ ದೈನ್ಯವಾಣಾ ॥೬೪॥

ಪ್ರಪಂಚಾಸಕ್ತ ಭಕ್ತಹೀನರ ಸ್ಥಿತಿಯನ್ನು ನೋಡುತ್ತಿರಲಿಕ್ಕೆ , ಅತಿಶಯ ಮೂರ್ಖನಿಗೆ ಬುದ್ಧಿ ದೃಢವಿರದು, ಅತಿಶಯ ಕಾಮಾಧೀನನಿಗೆ ಮನದಲ್ಲಿ ರಾಮನಿರನು, ಅತಿಶಯ ಲೋಭಿಗೆ ದುಗುಡ ತಪ್ಪದು ಹಾಗೂ ಅತಿಶಯ ವಿಷಯಾಸಕ್ತನಿಗೆ ಯಾವಾಗಲೂ ದೀನತೆ ಬಿಡದು !



ನಕೋ ದೈನ್ಯವಾಣೇ ಜಿಣೇ ಭಕ್ತಿಊಣೇ ।
ಅತೀ ಮೂರ್ಖ ತ್ಯಾ ಸರ್ವದಾ ದುಃಖ ದೂಣೇ ॥
ಧರೀರೇ ಮನಾ ಆದರೇ ಪ್ರೀತಿ ರಾಮೀ ।
ನಕೋ ವಾಸನಾ ಹೇಮಧಾಮೀ ವಿರಾಮೀ ॥೬೫॥

ಮನವೇ, ಭಕ್ತಿವಿರಹಿತ ಹೀನದೀನ ಜೀವನ ಸಲ್ಲದು; ಅಂತಹ ಮೂಢನಿಗೆ ಯಾವ ಕಾಲಕ್ಕೂ ದುಃಖ ಇಮ್ಮಡಿಸುವದು ! ಅದಕ್ಕಾಗಿ ಗೃಹ- ಕನಕಾದಿ ವಿಷಯಸುಖದಲ್ಲಿ ಆಶೆಯಿಡದೆ ರಾಮನಲ್ಲಿ ಅಂತಃಕರಣಪೂರ್ವಕವಾದ ಪ್ರೇಮ ಧರಿಸು.

ನವ್ಹೇ ಸಾರ ಸಂಸಾರ ಹಾ ಘೋರ ಆಹೇ ।
ಮನಾ ಸಜ್ಜನಾ ಸತ್ಯ ಶೋಧೂನಿ ಪಾಹೇ ॥
ಜನೀ ವೀಷ ಖಾತಾ ಪುಢೇ ಸೂಖ ಕೈಚೇ ।
ಕರೀರೇ ಮನಾ ಧ್ಯಾನ ಯಾ ರಾಘವಾಚೇ ॥೬೬॥

ಸಾಧು ಮನವೇ, ಈ ಸಂಸಾರವು ಅಸಾರವೂ ದುಃಖಮಯವೂ ಆಗಿದೆಯೆಂಬ ವಸ್ತುಸ್ಥಿತಿಯನ್ನು ಪರೀಕ್ಷಿಸಿ ಕಂಡುಕೊ. ವಿಷ ತಿಂದರೆಂದಾದರೂ ಅದರಿಂದ ಸುಖವಾದೀತೇ ? ಸಾರಾಂಶ, ಸಂಸಾರದ ಆಶೆ ತೊರೆದ ರಾಮಚಂದ್ರನ ಧ್ಯಾನ ಮಾಡಪ್ಪಾ !

## ೩. ನಾಮಮಹಾತ್ಮೆ (ಶ್ಲೋಕ ೬೭-೧೦೧)

ಘನಶ್ಯಾಮ ಹಾ ರಾಮ ಲಾವಣ್ಯ ರೂಪೀ ।
ಮಹಾಧೀರ ಗಂಭೀರ ಪೂರ್ಣ ಪ್ರತಾಪೀ ॥
ಕರೀ ಸಂಕಟೀ ಸೇವಕಾಚಾ ಕುಡಾವಾ ।
ಪ್ರಭಾತೇ ಮನೀ ರಾಮ ಚಿಂತೀತ ಜಾವಾ * ॥೬೭।

ಮೇಘದಂತೆ ನೀಲೀ ವರ್ಣದವನೂ, ನಯನಮನೋಹರನೂ ಶೂರ-ವೀರನೂ, ನಿಃಸೀಮ ತೇಜಸ್ವಿಯೂ, ಗಂಭೀರನೂ, ಸಂಕಟದಲ್ಲಿ ಭಕ್ತರ ರಕ್ಷಣೆ ಮಾಡುವವನೂ ಆದ ಆ ಶ್ರೀರಾಮನನ್ನು ನಿತ್ಯವೂ ಪ್ರಾತಃಕಾಲದ ನೆನೆಯುತ್ತಿರಬೇಕು.

---

* ಪ್ರಭಾತೇ ಮನೀ ರಾಮ ಚಿಂತೀತ ಜಾವಾ : ೬೭-೭೬ (೧೦ ಶ್ಲೋಕಗಳು)

ಬಳೇ ಆಗಳಾ ರಾಮ ಕೋದಂಡಧಾರೀ ।
ಮಹಾ ಕಾಳ ವಿಕ್ರಾಳ ತೋಹೀ ಥರಾರೀ ॥
ಪುಢೇ ಮಾನವಾ ಕಿಂಕರಾ ಕೋಣ ಕೇಂವಾ ।
ಪ್ರಭಾತೇ ಮನೀ ರಾಮ ಚಿಂತೀತ ಜಾವಾ ॥೬೮॥

ಮೀರಿದ ಸಾಮರ್ಥ್ಯವಂತನಾದ ಧನುಷ್ಯಧಾರೀ ರಾಮಪ್ರಭುವಿನೆದುರಿಗೆ ಭಯಂಕರವಾದ ಯಮನೂ ಗದಗದ ನಡುಗುವನು ! ಅಂದಮೇಲೆ ಯಃಕಶ್ಚಿತ ಮನುಷ್ಯದೇನು ಬಿಸಾತು ? ಆದುದರಿಂದ ಅಭಿಮಾನ ತೊರೆದು ನಿತ್ಯವೂ ಪ್ರಾತಃಕಾಲದಲ್ಲಿ ಶ್ರೀರಾಮನನ್ನು ನೆನೆಯುತ್ತಿರಬೇಕು.

ಸುಖಾನಂದಕಾರೀ ನಿವಾರೀ ಭಯಾತೇ ।
ಜನೀ ಭಕ್ತಿಭಾವೇ ಭಜಾವೇ ತಯಾತೇ ॥
ವಿವೇಕೇ ತ್ಯಜಾವಾ ಅನಾಚಾರ ಹೇವಾ ।
ಪ್ರಭಾತೇ ಮನೀ ರಾಮ ಚಿಂತೀತ ಜಾವಾ ॥೬೯॥

ಭಯಹರಣ ಮಾಡಿ ಸುಖಸಂತೋಷವೀಯುವ ಪ್ರಭುವನ್ನು ಅನನ್ಯ ಭಕ್ತಿಯಿಂದ ಉಪಾಸಿಸುವುದೇ ಯುಕ್ತವಷ್ಟೇ ? ಎಂದ ಮೇಲೆ ವಿಚಾರದಿಂದ ತನ್ನ ಅವನಡತೆಯ ಅಭಿಮಾನ ಬಿಟ್ಟು ನಿತ್ಯವೂ ಪ್ರಾತಃಕಾಲದಲ್ಲಿ ಶ್ರೀರಾಮನನ್ನು ನೆನೆಯುತ್ತಿರಬೇಕು.

ಸದಾ ರಾಮನಾಮೇ ವದಾ ಪೂರ್ಣ ಕಾಮೇ ।
ಕದಾ ಬಾಧಿಜೇನಾಪದಾ ನಿತ್ಯನೇಮೇ ॥
ಮದಾಲಸ್ಯ ಹಾ ಸರ್ವ ಸೋಡೂನಿ ದ್ಯಾವಾ ।
ಪ್ರಭಾತೇ ಮನೀ ರಾಮ ಚಿಂತೀತ ಜಾವಾ ॥೭೦॥

ಇಚ್ಛಾಪೂರ್ಣ ಮಾಡುವ ರಾಮನಾಮಗಳನ್ನು ಯಾವಾಗಲೂ ಉಚ್ಚರಿಸಿರಿ. ನಾಮಸ್ಮರಣೆಯ ನಿತ್ಯನಿಯಮದಿಂದ ಸಂಕಟಗಳೆಂದಿಗೂ ಗಾಸಿಮಾಡವು! ಹೀಗಿರಲು ಒಣ ಗರ್ವ-ಆಲಸ್ಯವನ್ನು ಬಿಟ್ಟು ಕೊಟ್ಟು ನಿತ್ಯವೂ ಪ್ರಾತಃಕಾಲದಲ್ಲಿ ಶ್ರೀರಾಮನನ್ನು ನೆನೆಯುತ್ತಿರಬೇಕು.

ಜಯಾಚೇನಿ ನಾಮೇ ಮಹಾದೋಷ ಜಾತೀ ।
ಜಯಾಚೇನಿ ನಾಮೇ ಗತೀ ಪಾವಿಜೇತಿ ॥



ಜಯಾಚೇನಿ ನಾಮೇ ಘಡೇ ಪುಣ್ಯತೇವಾ ।
ಪ್ರಭಾತೇ ಮನೀ ರಾಮ ಚಿಂತೀತ ಜಾವಾ ॥೭೧॥

ಯಾರ ನಾಮದಿಂದ ದಾರುಣ ದೋಷಗಳ ಪರಿಹಾರವಾಗುವದೋ, ಶ್ರೇಷ್ಠ ಪದವಿ ದೊರೆಯುವವೋ, ಪುಣ್ಯಸಂಚಯವಾಗುವದೋ ಅಂತಹ ಶ್ರೀರಾಮನನ್ನು ನಿತ್ಯವೂ ಪ್ರಾತಃಕಾಲದಲ್ಲಿ ನೆನೆಯುತ್ತಿರಬೇಕು.

ನ ವೇಚೇ ಕದಾ ಗ್ರಂಥಿಚೇ ಅರ್ಥ ಕಾಂಹಿ ।
ಮುಖೇ ನಾಮ ಉಚ್ಚಾರಿತಾ ಕಷ್ಟ ನಾಂಹಿ ॥
ಮಹಾ ಘೋರ ಸಂಸಾರ ಶತ್ರೂ ಜಿಣಾವಾ ।
ಪ್ರಭಾತ್ಯೇ ಮನೀ ರಾಮ ಚಿಂತಿತ ಜಾವಾ ॥೭೨॥

ಬಾಯಿಯಿಂದ ನಾಮವನ್ನು ಅನ್ನಲಿಕ್ಕೆ ಪದರಿನ ಹಣವೇನು ವೆಚ್ಚವಾಗುವದಿಲ್ಲ ಹಾಗೂ ಅದಕ್ಕೆ ಶ್ರಮವೂ ಇರುವದಿಲ್ಲ ! ಎಂದ ಮೇಲೆ ಅತಿ ಭಯಂಕರವಾದ ಸಂಸಾರ ಶತ್ರುವನ್ನು ಗೆಲ್ಲುವದಕ್ಕಾಗಿ ಶ್ರೀರಾಮನನ್ನು ನಿತ್ಯವೂ ಪ್ರಾತಃಕಾಲದಲ್ಲಿ ನೆನೆಯುತ್ತಿರಬೇಕು.

ದೇಹೇದಂಡಣೇಚೇ ಮಹಾದುಃಖ ಆಹೇ ।
ಮಹಾದುಃಖಃ ತೇ ನಾಮ ಘೇತಾ ನ ರಾಹೆ ॥
ಸದಾಶೀವ ಚಿಂತೀತಸೇ ದೇವದೇವಾ ।
ಪ್ರಭಾತೇ ಮನೀ ರಾಮ ಚಿಂತೀತ ಜಾವಾ ॥೭೩॥

ತಪ-ವ್ರತಾದಿ ದೇಹದಂಡನೆಯು ಅತ್ಯಂತ ದುಃಖದಾಯಕವಿರುತ್ತದೆ; ಆದರೆ ನಾಮ ತಕ್ಕೊಂಡರೆ ಇದ್ದ ದುಃಖಗಳೂ ಲಯಿಸುವವು! ಪ್ರತ್ಯಕ್ಷ ಶಂಕರನೇ ಭಗವಂತನಾದ ಶ್ರೀರಾಮನ ಸ್ಮರಣೆ ಮಾಡುತ್ತಿರುವನು!! ಎಂದ ಮೇಲೆ ನಿತ್ಯವೂ ಪ್ರಾತಃಕಾಲದಲ್ಲಿ ಶ್ರೀರಾಮನನ್ನು ನೆನೆಯುತ್ತಿರಬೇಕು.

ಬಹುತಾಪರೀ ಸಂಕಟೇ ಸಾಧನಾಚೇ ।
ವ್ರತೇ ದಾನ ಉದ್ಯಾಪನೇ ತೀ ಧನಾಚೀ ॥
ದಿನಾಚಾ ದಯಾಳೂ ಮನೀ ಆಠವಾವಾ ।
ಪ್ರಭಾತೇ ಮನೀ ರಾಮ ಚಿಂತೀತ ಜಾವಾ ॥೭೪॥

ಅನ್ಯ ಸಾಧನಗಳಲ್ಲಿ ತರತರದ ಕಷ್ಟಗಳಿರುವವು; ವೃತ-ದಾನ-ಉದ್ಯಾಪನೆ ಗಳಂತೂ ಕೇವಲ ಹಣದಿಂದಲೇ ಸಾಧ್ಯವು! ಅದಕ್ಕಾಗಿ ಆ ಯಾವ ತೊಂದರೆ- ಯಲ್ಲಿಯೂ ಬೀಳದೆ ದೀನಬಂಧುವಾದ ಶ್ರೀರಾಮನನ್ನು ನಿತ್ಯವೂ ಪ್ರಾತಃಕಾಲದಲ್ಲಿ ನೆನೆಯುತ್ತಿರಬೇಕು.

**ಸಮಸ್ತಾಮಧೇ ಸಾರ ಸಾಚಾರ ಆಹೇ ।**
**ಕಳೇನಾ ತರೀ ಸರ್ವ ಶೋಧೂನಿ ಪಾಹೇ ॥**
**ಜಿವಾ ಸಂಶಯೋ ವಾವುಗಾ ತೋ ತ್ಯಜಾವಾ ।**
**ಪ್ರಭಾತೇ ಮನೀ ರಾಮ ಚಿಂತೀತ ಜಾವಾ ॥೨೫॥**

ಸತ್ಯವಾಗಿಯೂ, ಎಲ್ಲ ಸಾಧನೆಗಳಲ್ಲಿ ನಾಮಸ್ಮರಣೆ ಶ್ರೇಷ್ಠವಾಗಿದೆ. ನಿನಗೆ ಈ ಸಂಗತಿ ತಿಳಿಯದಿದ್ದರೆ ಎಲ್ಲವನ್ನೂ ಪರೀಕ್ಷಿಸಿ ನೋಡು ಹಾಗೂ ಸುಮ್ಮನೆ ತಥ್ಯ ಹೀನ ಸಂಶಯವನ್ನು ಬಿಟ್ಟುಕೊಟ್ಟು ನಿತ್ಯವೂ ಪ್ರಾತಃಕಾಲದಲ್ಲಿ ಶ್ರೀರಾಮನನ್ನು ನೆನೆಯುತ್ತಿರಬೇಕು.

**ನವ್ಹೇ ಕರ್ಮ ನಾ ಧರ್ಮ ನಾ ಯೋಗ ಕಾಂಹೀ ।**
**ನವ್ಹೇ ಭೋಗ ನಾ ತ್ಯಾಗ ನಾ ಸಾಂಗ ಪಾಹೀ ॥**
**ಮ್ಹಣೇ ದಾಸ ವಿಶ್ವಾಸ ನಾಮೀ ಧರಾವಾ ।**
**ಪ್ರಭಾತೇ ಮನೀ ರಾಮ ಚಿಂತೀತ ಜಾವಾ ॥೨೬॥**

ಪ್ರಪಂಚದಲ್ಲಿ ಕರ್ಮ, ಧರ್ಮಾಚರಣೆ, ಯೋಗ ಇವಾವದೊಂದೂ ಸರಿಯಾಗಿ ಸಾಧಿಸುವದಿಲ್ಲ; ಪೂರ್ಣ ಭೋಗವೂ ಸಾಧ್ಯವಿಲ್ಲ, ಪೂರ್ಣತ್ಯಾಗವೂ ಸಾಧ್ಯವಿಲ್ಲ ಇಂತಹ ಪರಿಸ್ಥಿತಿಯಿರುತ್ತದೆ. ಅದಕ್ಕಾಗಿ ರಾಮದಾಸರು ಹೇಳುವದೇನೆಂದರೆ ಕರ್ಮಾದಿಗಳ ಹವ್ಯಾಸ ಬಿಟ್ಟು ನಾಮಸ್ಮರಣೆಯಲ್ಲಿ ನಂಬಿಗೆ ಹಿಡಿಯಬೇಕು ಹಾಗೂ ನಿತ್ಯವೂ ಪ್ರಾತಃಕಾಲದಲ್ಲಿ ರಾಮನನ್ನು ನೆನೆಯುತ್ತಿರಬೇಕು.

**ಕರೀ ಕಾಮ ನಿಷ್ಕಾಮ ಯಾ ರಾಘವಾಚೇ ।**
**ಕರೀ ರೂಪ ಸ್ವರೂಪ ಸರ್ವಾ ಜಿವಾಚೇ ॥**
**ಕರೀ ಛಂದ ನಿರ್ದ್ವಂದ್ವ ಹೇ ಗೂಣ ಗಾತಾ ।**
**ಹರೀ ಕೀರ್ತನೀ ವೃತ್ತಿ ವಿಶ್ವಾಸ ಹೋತಾ ॥೨೭॥**



ರಾಮನ ಕಾಮನೆಯು ಮನುಷ್ಯನನ್ನು ನಿಷ್ಕಾಮ ಮಾಡುವದು; ರಾಮನ ರೂಪವು ಅವನನ್ನು ಎಲ್ಲ ಜೀವಮಾತ್ರರ ಸ್ವರೂಪವನ್ನೇ ಮಾಡುವದು; ಕೀರ್ತನೆಯಲ್ಲಿ ದೃಢ ನಂಬಿಗೆಯಿಟ್ಟು ರಾಮನ ಗುಣಗಾನ ಮಾಡಿದರೆ ಆ ಒಲವು ಮನುಷ್ಯನನ್ನು ಸುಖ-ದುಃಖಾದಿ ದ್ವಂದ್ವಗಳಿಂದ ಮುಕ್ತ ಮಾಡುವದು.

**ಅಹೋ ಜ್ಯಾ ನರಾ ರಾಮವಿಶ್ವಾಸ ನಾಂಹೀ ।**
**ತಯಾ ಪಾಮರಾ ಬಾಧಿಜೇ ಸರ್ವ ಕಾಂಹೀ ॥**
**ಮಹಾರಾಜ ತೋ ಸ್ವಾಮೀ ಕೈವಲ್ಯದಾತಾ ।**
**ವೃಥಾ ವಾಹಣೆ ದೇಹ ಸಂಸಾರ ಚಿಂತಾ ॥೨೮॥**

ನೋಡಿರಿ ! ರಾಮನಲ್ಲಿ ಭಕ್ತಿಯಿಲ್ಲದ ಹೀನ ಮನುಜನಿಗೆ ಏನೆಲ್ಲವೂ ಪೀಡೆ ಕೊಡುವವು ! ಮುಕ್ತಿದಾತ ಪ್ರಭು ವಾದ ರಾಮರಾಯನನ್ನು ನಂಬದೆ ಶರೀರ ಹಾಗೂ ಪ್ರಪಂಚದ ಚಿಂತೆ ಹೊರುವದು ವ್ಯರ್ಥ ಶ್ರಮವಲ್ಲವೇ ?

**ಮನಾ ಪಾವನಾ ಭಾವನಾ ರಾಘವಾಚೀ ।**
**ಧರೀ ಅಂತರೀ ಸೋಡಿ ಚಿಂತಾ ಭವಾಚೀ ॥**
**ಭವಾಚೀ ಜಿವಾ ಮಾನವಾ ಭೂಲಿ ಠೇಲಿ ।**
**ನಸೇ ವಸ್ತುಚೀ ಧಾರಣಾ ವ್ಯರ್ಥ ಗೇಲೀ ॥೨೯॥**

ಮನವೇ, ನಿನ್ನೊಳಗೆ ರಾಮನ ಪವಿತ್ರ ಭಕ್ತಿಯನ್ನು ನೆಲೆಗೊಳಿಸಿ ಸಂಸಾರ ಚಿಂತೆಯನ್ನು ಎಸೆದುಬಿಡು. ನಿಜವಾಗಿ ಎಲ್ಲ ಜೀವರಿಗೆ ಬಂಧನದ ಬರೀ ಭ್ರಮೆಯೇ ಆಗಿದ್ದು, ಆ ಖೊಟ್ಟಿ ಸಂಸಾರದ ಗ್ರಹಣವು ನಿರರ್ಥಕವಾಯಿತು!

**ಧರಾ ಶ್ರೀವರಾ ತ್ಯಾ ಹರಾ ಅಂತರಾತೇ ।**
**ತರಾ ದುಸ್ತರಾ ತ್ಯಾ ಪರಾ ಸಾಗರಾತೇ ॥**
**ಸರಾ ವೀಸರಾ ತ್ಯಾ ಭರಾ ದುರ್ಭರಾತೇ ।**
**ಕರಾ ನೀಕರಾ ತ್ಯಾ ಖರಾ ಮತ್ಸರಾತೇ ॥೩೦॥**

ಶಂಕರನ ಹೃದಯವಾಸಿಯಾದ ಸೀತಾಪತಿಯನ್ನು ಹಿಡಿಯಿರಿ, ಹಿಡಿದು ಕೊಳ್ಳಿರಿ ಹಾಗೂ ಕಠಿಣವಾದ ಪ್ರಪಂಚದ ಮಹಾ ಸಮುದ್ರವನ್ನು ದಾಟಿರಿ, ದಾಟಿಹೋಗಿರಿ ! ಎಷ್ಟು ಹಾಕಿದರೂ ತುಂಬಲಾರದ ಲೋಭವನ್ನು ದೂಡಿರಿ, ದೂರಿಕರಿಸಿರಿ ಮತ್ತು ಮೂರ್ಖತನದ ಮತ್ಸರವನ್ನು ಬಡೆಯಿರಿ, ಸದೆಬಡೆಯಿರಿ!!

ಮನಾ ಮತ್ಸರೇ ನಾಮ ಸೋಡೂ ನಕೋಹೋ ।
ಅತೀ ಆದರೇ ಹಾ ನಿಜಧ್ಯಾಸ ರಾಹೋ ॥
ಸಮಸ್ತಾಮಧೇ ನಾಮ ಹೇ ಸಾರ ಆಹೇ ।
ದುಜೀ ತೂಳಣಾ ತೂಳಿತಾಹೀ ನ ಸಾಹೇ ॥೮೧॥

ಮನರಾಯರೇ, ತಿರಸ್ಕಾರದಿಂದ ನಾಮವನ್ನು ಬಿಡಬೇಡಿರಪ್ಪಾ ! ಆದರೆ ಒಳ್ಳೇ ಪ್ರೇಮದಿಂದ ಅದರ ಅನುಸಂಧಾನವಿಡಿರಿ ! ಎಲ್ಲ ಸಾಧನಗಳಲ್ಲಿಯೂ ನಾಮವು ಶ್ರೇಷ್ಠವಿದ್ದು , ಎರಡನೆಯ ಯಾವ ಸಾಧನವನ್ನು ಅದರೊಡನೆ ತೂಗಿನೋಡಿದರೂ, ನಾಮವೇನೂ ಒಳಗಾಗದು !!

ಬಹೂ ನಾಮ ಯಾ ರಾಮನಾಮೀ ತುಳೇನಾ ।
ಅಭಾಗ್ಯಾ ನರಾ ಪಾಮರಾ ಹೇ ಕಳೇನಾ ॥
ವಿಷಾಔಷಧೇ ಘೇತಲೇ ಪಾರ್ವತೀಶೇ ।
ಜಿವಾ ಮಾನವಾ ಕಿಂಕರಾ ಕೋಣ ಪೂಸೇ ॥೮೨॥

ಬೇರೆ ಅನೇಕ ನಾಮಗಳಾವವೂ ರಾಮನಾಮದ ತೂಕಕ್ಕೆ ಬಾರವು ! ಆದರೆ ದೈವಹೀನ ಕ್ಷುದ್ರ ಮನುಜನಿಗೆ ಈ ಸಂಗತಿ ತಿಳಿಯಲೊಲ್ಲದು !! ಪ್ರತ್ಯಕ್ಷ ಶಂಕರನು ಹಾಲಾಹಲದ ವಿಷಕ್ಕೆ ರಾಮನಾಮದ ಔಷದ ತಕ್ಕೊಂಡನೆಂದ ಮೇಲೆ ಬಡಪಾಯಿಯಾದ ಮನುಷ್ಯನನ್ನು ಯಾರು ಕೇಳಬೇಕು ?

ಜೇಣೇ ಜಾಳಿಲಾ ಕಾಮ ತೋ ರಾಮ ಧ್ಯಾತೋ ।
ಉಮೇಶೀ ಅತೀ ಆದರೇ ಗುಣ ಗಾತೋ ॥
ಬಹೂ ಜ್ಞಾನ* ವೈರಾಗ್ಯ ಸಾಮರ್ಥ್ಯ ಜೇಥೇ ।
ಪರೀ ಅಂತರೀ ರಾಮವಿಶ್ವಾಸ♦ ತೇಥೇ ॥೮೩॥

ಕಾಮನನ್ನು ದಹಿಸಿದ ಮಹಾದೇವನು ರಾಮನ ಧ್ಯಾನ ಮಾಡುವನು ! ಹಾಗೂ ಪಾರ್ವತಿಯೊಡಗೂಡಿ ಆತನ ಗುಣಗಾನ ಮಾಡುವನು! ಜ್ಞಾನ-ವೈರಾಗ್ಯ ಬಲದ ನಿಧಿಯಾದ ಶಂಕರನಿಗೂ ರಾಮನಲ್ಲಿ ಇಷ್ಟು ಶ್ರದ್ಧೆಯಿರುವದು !!

---

* ಜ್ಞಾನ : ೮೩, ೧೪೫, ೧೬೧, ೧೭೦, ೧೮೮, ೧೯೧, ೨೦೦, ೨೦೫ (೮)

♦ ಪಾಠಭೇದ - ನಾಮ ವಿಶ್ವಾಸ



ವಿಠೋನೇ ಶಿರೀ ವಾಹಿಲಾ ದೇವರಾಣಾ ।
ತಯಾ ಅಂತರೀ ಧ್ಯಾಸರೇ ತ್ಯಾಸಿ ನೇಣಾ ॥
ನಿವಾಲಾ ಸ್ವಯೇ ತಾಪಸೀ ಚಂದ್ರಮೌಳೀ ।
ಜಿವಾ ಸೋಡವೀ ರಾಮ ಹಾ ಅಂತಕಾಳೀ ॥೮೪॥

ವಿಠ್ಠಲನು ಮಹಾದೇವನನ್ನು ಮಸ್ತಕದಲ್ಲಿ ಧರಿಸಿರುವನು, ಆದರೆ ಅಂತಹ ಮಹಾದೇವನಲ್ಲಿಯೂ ರಾಮನ ಧ್ಯಾನ ನೆಲೆಗೊಂಡಿದೆ; ಅವನನ್ನು (ರಾಮನನ್ನು) ಅರಿಯಿರಲ್ಲಾ ! ತಪೋಮೂರ್ತಿಯಾದ ಪ್ರತ್ಯಕ್ಷ ಶಂಕರನೇ ಶಾಂತಿ ಪಡೆದಿರಲು, ರಾಮನು ಜೀವರನ್ನು ಕೊನೆಗೆ ಮುಕ್ತ ಮಾಡುವನೆಂಬಲ್ಲಿ ಸಂದೇಹವೇನು ?

ಭಜಾ ರಾಮ ವಿಶ್ರಾಮ ಯೋಗೇಶ್ವರಾಂಚಾ ।
ಜಪೂ ನೇಮಿಲಾ ನೇಮ ಗೌರೀಹರಾಚಾ ॥
ಸ್ವಯೇ ನೀವವೀ ತಾಪಸೀ ಚಂದ್ರಮೌಳೀ ।
ತುಮ್ಹಾ ಸೋಡವಿ ರಾಮ ಹಾ ಅಂತಕಾಳೀ ॥೮೫॥

ಯೋಗಿಶ್ರೇಷ್ಠರ ವಿಶ್ರಾಂತಿ ಸ್ಥಾನವಾದ ರಾಮನನ್ನು ಭಜಿಸಿರಿ. ಶಿವ-ಪಾರ್ವತಿಯರು ರಾಮನಜಪದ ನೇಮವನ್ನೇ ಇಟ್ಟುಕೊಂಡಿರುವರು ! ಅಷ್ಟೇ ಅಲ್ಲದೆ, ಮಹಾ ತಪಸ್ವಿಯಾದ ಶಂಕರನೇ ಎಲ್ಲರಿಗೂ ''ರಾಮನು ನಿಮ್ಮನ್ನು ಅಂತ್ಯಕಾಲದಲ್ಲಿ ಮುಕ್ತ ಮಾಡುವನೆ''ಂದು ಸಂತೈಸುತ್ತಿರುವನು !!

ಮುಖೀ ರಾಮ ವಿಶ್ರಾಮ ತೇಥೇಚಿ ಆಹೇ ।
ಸದಾನಂದ ಆನಂದ ಸೇವೂನಿ ರಾಹೇ ॥
ತಯಾವೀಣ ತೋ ಶೀಣ ಸಂದೇಹಕಾರೀ ।
ನಿಜಧಾಮ ಹೇ ನಾಮ ಶೋಕಾಪಹಾರೀ ॥೮೬॥

ಬಾಯಿಯಲ್ಲಿ ರಾಮನೆಂಬ ನಾಮವಿದ್ದರೆ ಅಲ್ಲಿಯೇ ವಿಶ್ರಾಂತಿ-ಯಿರುವದು, ಯಾವಾಗಲೂ ಆ ಪರಮಾನಂದವನ್ನು ಅನುಭವಿಸುತ್ತಲಿರು. ಅದರ ಹೊರತಾಗಿ ಏನೆಲ್ಲವೂ ಸಂಶಯಮಯ ದಣಿವೇ ಸೈ ! ತನ್ನ ಮೂಲ ವಿಶ್ರಾಂತಿ ಸ್ಥಾನವೆನಿಸಿದ ಈ ನಾಮವು ದುಃಖವನ್ನು ಸಮೂಲ ನಾಶಗೊಳಿಸುವದು !

ಮುಖೀ ರಾಮ ತ್ಯಾ ಕಾಮ ಬಾಧೂ ಶಕೇನಾ ।
ಗುಣೇ ಇಷ್ಟ ಧಾರಿಷ್ಟ ತ್ಯಾಚೇ ಚುಕೇನಾ ॥

ಹರೀಭಕ್ತ ತೋ ಶಕ್ತ ಕಾಮಾಸಿ ಮಾರೀ ।
ಜಗೀ ಧನ್ಯ ತೋ ಮಾರುತೀ ಬ್ರಹ್ಮಚಾರೀ ॥೮೭॥

ಬಾಯಿಯಲ್ಲಿ ರಾಮನಾಮವಿದ್ದವನಿಗೆ ಕಾಮವು ಪೀಡಿಸಲಾರದು, ಮೋಹಕ ವಿಷಯಗಳಿಂದ ಅವನ ಧೈರ್ಯವು ಕುಂದದು ! ಸಾರಾಂಶ, ರಾಮ ಭಕ್ತನೇ ಕಾಮವನ್ನು ನಿರ್ನಾಮಗೊಳಿಸುವ ಶಕ್ತಿ ಪಡೆದಿದ್ದಾನೆ ! ಜಗತ್ತಿನಲ್ಲಿ ಅಂತಹ ಭಕ್ತಾಗ್ರಣಿ ಬ್ರಹ್ಮಚಾರೀ ಹನುಮಂತನು ಪ್ರಸಿದ್ಧನಷ್ಟೇ ?

ಬಹೂ ಚಾಂಗಲೇ ನಾಮ ಯಾ ರಾಘವಾಚೇ ।
ಅತೀ ಸಾಜಿರೇ ಸ್ವಲ್ಪ ಸೋಪೇ ಫುಕಾಚೇ ॥
ಕರೀ ಮೂಳ ನಿರ್ಮೂಳ ಘೇತಾ ಭವಾಚೇ ।
ಜಿವಾ ಮಾನವಾ ಹೇಚಿ ಕೈವಲ್ಯ ಸಾಚೇ ॥೮೮॥

ಈ ರಾಮರಾಯನ ನಾಮವು ಬಹಳ ಉತ್ತಮವು, ಬಲು ಚಂದವು, ಚಿಕ್ಕದು, ಸುಲಭವು ಹಾಗೂ ಪುಕ್ಕಟೆಯು ಆಗಿದ್ದು , ನಾಮ ತಕ್ಕೊಂಡರೆ ಅದು ಸಂಸಾರಬಂಧನವನ್ನು ಬೇರು ಸಹಿತ ಕಿತ್ತೊಗೆಯುವದು ! ಮನುಜನಿಗೆ ಇದೇ ನಿಜವಾದ ಅಂತಿಮ ಸ್ಥಿತಿಯು !

ಜನೀ ಭೋಜನೀ ನಾಮ ವಾಚೇ ವದಾವೇ ।
ಅತೀ ಆದರೇ ಗದ್ಯಘೋಷೇ ಮ್ಹಣಾವೇ ॥
ಹರಿ ಚಿಂತನೇ ಅನ್ನ ಸೇವಿತ ಜಾವೇ ।
ತರೀ ಶ್ರೀಹರೀ ಪಾವಿಜೇತೋ ಸ್ವಭಾವೇ ॥೮೯॥

ಊಟದ ಸಮಯದಲ್ಲಿ ವಾಣಿಯಿಂದ ನಾಮವನ್ನು ಉಚ್ಚರಿಸಬೇಕು, ಪ್ರೇಮಾತಿಶಯದಿಂದ ಗದ್ಯಪದ್ಯಗಳನ್ನು ಉಚ್ಚ ಸ್ವರದಿಂದ ಅನ್ನಬೇಕು ಹಾಗೂ ರಾಮನ ಸ್ಮರಣೆ ಮಾಡುತ್ತ ಅನ್ನ ಉಣ್ಣುತ್ತಿರಬೇಕು; ಹೀಗೆ ಮಾಡಿದರೆ ಸಹಜದಲ್ಲಿಯೇ ರಾಮನ ಪ್ರಾಪ್ತಿಯಾಗುತ್ತದೆ.

ನ ಯೇ ರಾಮ ವಾಣೀ ತಯಾ ಥೋರ ಹಾನೀ ।
ಜನೀ ವ್ಯರ್ಥ ಪ್ರಾಣೀ ತಯಾ ನಾಮ ಕಾಣೀ ॥
ಹರೀ ನಾಮ ಹೇ ವೇದಶಾಸ್ತ್ರಿಪುರಾಣೀ ।
ಬಹೂ ಅಗಳೇ ಬೋಲಿಲೀ ವ್ಯಾಸವಾಣೀ ॥೯೦॥



ನಾಲಿಗೆಯಿಂದ ರಾಮನಾಮ ನುಡಿಯದವನಿಗೆ ದೊಡ್ಡ ಘಾತವಾಗುವದು! ಅವನು ಜಗತ್ತಿನಲ್ಲಿ ತುಚ್ಛ ಜೀವಿಯೆನಿಸುವನು !! ಅದಿರಲಿ. ವ್ಯಾಸ ಋಷಿಗಳು ವೇದ-ಶಾಸ್ತ್ರ-ಪುರಾಣಗಳಲ್ಲಿ ನಾಮಮಹಿಮೆಯನ್ನು ಬಹಳ ವರ್ಣಿಸಿರುತ್ತಾರೆ.

ನಕೋ ವೀಟ ಮಾನೂ ರಘೂನಾಯಕಾಚಾ ।
ಅತೀ ಆದರೇ ಬೋಲಿಜೇ ರಾಮ ವಾಚಾ ॥
ನ ವೇಚೇ ಮುಖೀ ಸಾಪಡೇ ರೇ ಫುಕಾಚಾ ।
ಕರೀ ಘೋಷ ತ್ಯಾ ಜಾನಕೀವಲ್ಲಭಾಚಾ ॥೯೧॥

ರಾಮನ ವಿಷಯಕ್ಕೆ ಬೇಜಾರಪಡದೆ ಬಹುಪ್ರೀತಿಯಿಂದ ರಾಮನಾಮವನ್ನು ನುಡಿ. ಇದರಲ್ಲಿ ಹಣವೇನೂ ವೆಚ್ಚವಾಗದೆ ನಾಮವು ಪುಕ್ಕಟೆಯಾಗಿಯೇ ಲಭ್ಯವಿರುವದು, ಅದಕ್ಕಾಗಿ ಸೀತಾಪತಿಯ ನಾಮ ಘೋಷಮಾಡು !

ಅತೀ ಆದರೇ ಸರ್ವಹೀ ನಾಮಘೋಷೇ ।
ಗಿರೀ ಕಂದರೀ ಜಾಯಿಜೇ ದೂರಿ ದೋಷೇ* ॥
ಹರೀ ತಿಷ್ಠತೂ ತೋಷಲಾಽ ನಾಮತೋಷೇ♦ ।
ವಿಶೇಷೇ ಹರಾ ಮಾನಸೀ ರಾಮಪೀಸೇ ॥೯೨॥

ಭಕ್ತಿ ಪೂರ್ವಕವಾಗಿ ನಾಮ ಗರ್ಜಿಸುವದರಿಂದ ಎಲ್ಲ ದೋಷಗಳೂ ದೂರ ಗುಡ್ಡಗವ್ವರಗಳಿಗೆ ಓಡಿಹೋಗುವವು ! ರಾಮನು ತನ್ನ ನಾಮೊಚ್ಚರಣೆಯಿಂದ ಸಂಪ್ರೀತನಾಗಿ ಒಲಿಯುವನು ! ಶಂಕರನಿಗಾದರೋ ಮನದಲ್ಲಿ ರಾಮನ ಹುಚ್ಚೇ ಹಿಡಿದಿರುವದು !!

ಜಗೀ ಪಾಹತಾ ರಾಮ• ಹಾ ಅನ್ನದಾತಾ ।
ತಯಾ ಲಾಗಲೀ ತತ್ತ್ವತಾ ಸಾರ ಚಿಂತಾ ॥
ತಯಾಚೇ ಮುಖೀ ನಾಮ ಘೇತಾ ಫುಕಾಚೇ ।
ಮನಾ ಸಾಂಗಪಾರೇ ತುಝೇ ಕಾಯ ವೇಚೇ ॥೯೩॥

---

ಪಾಠಬೇಧ *ದೇಶೀ ಽತುಷ್ಟಲಾ ♦ನಾಮಘೋಷೇ •ದೇವ

ವಿಚಾರಿಸಿ ನೋಡಲು ಜಗತ್ತಿನಲ್ಲಿ ರಾಮನೇ ಅನ್ನ ಕೊಡುವವನಿದ್ದು, ಅವನಿಗೇ ಎಲ್ಲರ ಸಂರಕ್ಷಣೆಯ ಚಿಂತಿಯಿರುತ್ತದೆ ! ಮನವೇ ಇಂತಹ ದಯಾಮಯ ರಾಮನ ವಿನಾಮೌಲ್ಯದ ನಾಮವನ್ನು ಬಾಯಿಯಿಂದ ಅನ್ನಲಿಕ್ಕೆ ನಿನ್ನದೇನು ಗಂಟು ಖರ್ಚಾಗುವದು ಹೇಳು ನೋಡೋಣ !!

**ಚಿನ್ಹಿ ಲೋಕ ಜಾಳೂ ಶಕೇ ಕೋಪ ಯೇತಾ ।**
**ನಿವಾಲಾ ಹರೂ ತೋ ಮುಖೇ ನಾಮ ಘೇತಾ ॥**
**ಜಪೇ ಆದರೇ ಪಾರ್ವತೀ ವಿಶ್ವಮಾತಾ ।**
**ಮ್ಹಣೋನೀ ಮ್ಹಣಾ ತೇಚಿ ಹೇ ನಾಮ ಆತಾ ॥೯೪॥**

ಮೂರೂ ಲೋಕಗಳನ್ನು ಸುಟ್ಟುಬಿಡುವಂತಹ ಸಿಟ್ಟಿನವನಾದ ಶಂಕರನೇ ನಾಮ ತಕ್ಕೊಂಡು ಶಾಂತನಾದನು ! ಲೋಕಜನನಿಯಾದ ಪಾರ್ವತಿಯಾದರೂ ಪ್ರೇಮದಿಂದ ನಾಮ ಜಪಿಸುತ್ತಿರುವಳು ! ಅದಕ್ಕಾಗಿ ನೀವಾದರೂ ಇಂತಹ ಶ್ರೇಷ್ಠ ರಾಮನಾಮವನ್ನು ಉಚ್ಚರಿಸಿರಿ.

**ಅಜಾಮೇಳ ಪಾಪೀ ವದೇ ಪುತ್ರಕಾಮೇ ।**
**ತಯಾ ಮುಕ್ತಿ ನಾರಾಯಣಾಚೇನಿ ನಾಮೇ ॥**
**ಶುಕಾಕಾರಣೇ ಕುಂಟಣೇ ಲಾಮವಾಣೇ ।**
**ಮುಖೇ ಬೋಲತಾ ಖ್ಯಾತಿ ಝಾಲೀ ಪುರಾಣೇ ॥೯೫॥**

ಪಾಪಿಷ್ಟನಾದ ಅಜಾಮಿಳನು[೧] ಮಗನ ಮೋಹದಿಂದ "ನಾರಾಯಣ" ನೆಂದು ನುಡಿದರೂ, ಆ ನಾಮೋಚ್ಚರಣೆಯ ಮಾತ್ರದಿಂದಲೇ ಮುಕ್ತಿ ಪಡೆದನು! ವೇಶ್ಯಯು ಗಿಳಿಗೆ ಕಲಿಸುವದಕ್ಕಾಗಿ "ರಾಮರಾಮ" ನೆಂದು ಅಂದರೂ ಅಷ್ಟರಿಂದಲೇ ಪುರಾಣಪ್ರಸಿದ್ಧತೆ ಹೊಂದಿದಳು.

---

[೧] **ಅಜಾಮಿಳನ ಕಥೆ** – ಅಜಾಮಿಳನೆಂಬ ಬ್ರಾಹ್ಮಣನು ದುರಾಚಾರಿಯಾಗಿ ಚಾಂಡಾಲ ಸ್ತ್ರೀಯಿಂದ ೧೦ ಮಕ್ಕಳನ್ನು ಪಡೆದನು. ಅವರಲ್ಲಿ ಕಡೆಯವನಾದ ನಾರಾಯಣನ ಮೇಲೆ ಅತಿಶಯ ಪ್ರೀತಿಯಿತ್ತು. ಅಜಾಮಿಳನು ಮಗನನ್ನು ಕರೆಯುವ ಮೊದಲಾದ ಕಾರಣದಿಂದ ಮೇಲಿಂದ ಮೇಲೆ 'ನಾರಾಯಣ' ನೆಂದು ಅನ್ನುತ್ತಿದ್ದನು ಮತ್ತು ಮರಣ ಸಮಯಕ್ಕೆ ಸಹ 'ನಾರಾಯಣಾ' ಎಂದು ಉಚ್ಚರಿಸಿಯೇ ಪ್ರಾಣ ಬಿಟ್ಟನು ! ಆಗ ವಿಷ್ಣುದೂತರು ಬಂದು, ಅಜಾಮಿಳನ ಘೋರ ಪಾಪಕೃತ್ಯಗಳ ಫಲವಾಗಿ ಅವನನ್ನು ಯಮಲೋಕಕ್ಕೆ ಒಯ್ಯಲು ಬಂದ ಯಮದೂತರನ್ನು ಓಡಿಸಿ, ಅಜಾಮಿಳನನ್ನು ವೈಕುಂಠಕ್ಕೆ ಕರೆದೊಯ್ದರು !



**ಮಹಾಭಕ್ತ ಪ್ರಲ್ಹಾದ ಹಾ ದೈತ್ಯಕೂಳೀ ।**
**ಜಪೇ ರಾಮನಾಮಾವಳೀ ನಿತ್ಯಕಾಳೀ ॥**
**ಪಿತಾ ಪಾಪರೂಪೀ ತಯಾ ದೇಖವೇನಾ ।**
**ಜನೀ ದೈತ್ಯ ತೋ ನಾಮ ಮೂಖೇ ಮ್ಹಣೇನಾ ॥೯೬॥**

ರಾಕ್ಷಸಕುಲದಲ್ಲಿ ಹುಟ್ಟಿದ ಹರಿಭಕ್ತ ಪ್ರಲ್ಹಾದನು* ಸರ್ವದಾ ರಾಮನಾಮ ಜಪಿಸುತ್ತಿದ್ದನು; ಆದರೆ ಅವನ ಪಾಪಿಷ್ಟ ತಂದೆಗೆ ಅದು ತಡೆಯದಾಯಿತು ! ಆ ಹಿರಣ್ಯಕಶ್ಯಪಾಸುರನು ಬಾಯಿಯಲ್ಲಿ ಎಂದಿಗೂ ತಪ್ಪಿ ಸಹ ನಾಮ ಉಚ್ಚರಿಸಲಿಲ್ಲ!!

**ಮುಖೀ ನಾಮ ನಾಂಹೀ ತಯಾ ಮುಕ್ತಿ ಕೈಚೀ ।**
**ಅಹಂತಾ ಗುಣೇ ಯಾತನಾ ತೇ ಫುಕಾಚೀ ॥**
**ಫುಡೇ ಅಂತ ಯೇಯೀಲ ತೋ ದೈನ್ಯವಾಣಾ ।**
**ಮ್ಹಣೋನೀ ಮ್ಹಣಾರೇ ಮ್ಹಣಾದೇವರಾಣಾ ॥೯೭॥**

ನಾಲಿಗೆಯಲ್ಲಿ ನಾಮಸ್ಮರಣೆ ಇಲ್ಲದವನಿಗೆ ಮುಕ್ತಿಯೆಲ್ಲಿಯದು ? ಅಹಂಕಾರ ಮೂಲಕವಾಗಿ ಅವನು ಸುಮ್ಮನೆ ದುಃಖ ಭೋಗಿಸುವನಲ್ಲದೆ, ಕೊನೆಗೆ ಮರಣ ಕಾಲಕ್ಕೆ ಕರುಣಾಜನಕ ಸ್ಥಿತಿಯಾಗುತ್ತದೆ. ಅದಕ್ಕಾಗಿ ದೇವದೇವೇಶ ರಾಮನೆಂದು ಅನ್ನಿರಪ್ಪಾ, ಅನ್ನಿರಿ !

**ಹರೀನಾಮ ನೇಮಸ್ತ ಪಾಷಾಣ ತಾರೀ ।**
**ಬಹೂ ತಾರಿಲೇ ಮಾನವ ದೇಹಧಾರೀ ॥**
**ತಯಾ ರಾಮನಾಮೀ ಸದಾ ಜೋ ವಿಕಲ್ಪೀ ।**
**ವದೇನಾ ಕದಾ ಜೀವ ತೋ ಪಾಪರೂಪೀ ॥೯೮॥**

ರಾಮನಾಮವು ಕಲ್ಲನ್ನು ಸಹ ನಿಶ್ಚಿತವಾಗಿ ದಾಟಿಸುವದೆಂದ ಮೇಲೆ ಅದರಿಂದ ಮನುಷ್ಯರೆಷ್ಟೋ ಉದ್ಧಾರವಾಗಿರುವದೇನು ಅಚ್ಚರಿಯಲ್ಲ ! ಆದರೆ ಅಂತಹ ಮಹಿಮಾಶಾಲಿ ರಾಮನಾಮದಲ್ಲಿಯೂ ಯಾವಾಗಲೂ ಸಂಶಯ ತಕ್ಕೊಳ್ಳುತ್ತ ನಾಮ ಉಚ್ಚರಿಸಲಾರದವನು ಕೇವಲ ಪಾಪಿಷ್ಠನೇ ಸೈ !

---

* ಪ್ರಲ್ಹಾದಾಖ್ಯಾನವನ್ನು ದಶಾವತಾರಗಳ ಚರಿತ್ರೆಯಲ್ಲಿ ನೋಡಿರಿ. (ಶ್ಲೋಕ : ೧೨೧) ಪುಟ-೪೨.

ಜಗೀ ಧನ್ಯ ವಾರಣಾಸೀ ಪುಣ್ಯರಾಶೀ ।
ತಯೇ ಮಾಜಿ ಜಾತಾ ಗತೀ ಪೂರ್ವಜಾಸೀ ॥
ಮುಖೇ ರಾಮನಾಮಾವಳೀ ನಿತ್ಯಕಾಳೀ ।
ಜೀವಾ ಹೀತ ಸಾಂಗೇ ಸದಾ ಚಂದ್ರಮೌಳೀ ॥೯೯॥

ಜಗತ್ತಿನಲ್ಲಿ ಅತ್ಯಂತ ಪುಣ್ಯಮಯವಾದ ಕಾಶೀ ಕ್ಷೇತ್ರವಿರುವದು, ಅಲ್ಲಿಗೆ ಹೋದರೆ ಪೂರ್ವಜರ ಉದ್ಧಾರವಾಗುತ್ತದೆ, ಸರಿ ! ಆದರೆ ಕಾಶಿಯ ಅಧಿದೈವತನಾದ ಶಿವನೇ ಜೀವರಿಗೆ ''ಸರ್ವದಾ ಮುಖದಿಂದ ರಾಮನಾಮ ಸ್ಮರಿಸಿರೆ''ಂದು ಹಿತೋಪದೇಶ ಹೇಳುತ್ತಿರುವನು !

ಯಥಾಸಾಂಗರೇ ಕರ್ಮ ತೇ ಹೀ ಘಡೇನಾ ।
ಘಡೇ ಕರ್ಮ ತೇ ಪುಣ್ಯ ಗಾಂಠೀ ಪಡೇನಾ ॥
ದಯಾ ಪಾಹತಾ ಸರ್ವ ಭೂತಿ ಅಸೇನಾ ।
ಫುಕಾಚೇ ಮುಖಿ ನಾಮ ತೇ ಹೀ ವಸೇನಾ ॥೧೦೦॥

ಸಾಂಗೋಪಾಂಗವಾಗಿ ಕರ್ಮವೂ ಘಡಿಸುವದಿಲ್ಲ, ಏನೂ ಘಡಿಸಿದ ಕರ್ಮದ ಪುಣ್ಯವೂ ಪದರಿಗೆ ಬೀಳುವದಿಲ್ಲ ಹಾಗೂ ಪ್ರಾಣಿಮಾತ್ರರಲ್ಲಿ ದಯೆಯೂ ಇರುವದಿಲ್ಲ ! ಹೀಗೆಂದು ಪುಕ್ಕಟೆಯಾದ ನಾಮಸ್ಮರಣೆಯಾದರೂ ಮಾಡಬೇಕಲ್ಲ, ಅದೂ ಇಲ್ಲ !!

ಜಯಾ ನಾವಡೇ ನಾಮ ತ್ಯಾ ಯಮ ಜಾಚೀ ।
ವಿಕಲ್ಪೇ ಉಠೇ ತರ್ಕ ತ್ಯಾ ನರ್ಕ ಛೀ ಛೀ ॥
ಮ್ಹಣೋನೀ ಅತೀ ಆದರೆ ನಾಮ ಘ್ಯಾವೇ ।
ಮುಖೇ ಬೋಲತಾ ದೋಷ ಜಾತೀ ಸ್ವಭಾವೇ ॥೧೦೧॥

ನಾಮಸ್ಮರಣೆ ಸೇರದವನನ್ನು ಯಮನು ಗಾಸಿ ಮಾಡುವನು ! ಹಾಗೆ ದುರ್ಭಾವದಿಂದ ವಾದಿಸುವವನಿಗೆ ನರಕವೇ ಮೀಸರು !! ಛೀ ಛೀ ಅವನಿಗೆ !! ಈ ಸಂಗತಿಯನ್ನು ಮನದಂದು, ಪ್ರೇಮಪೂರ್ವಕವಾಗಿ ನಾಮ ತಕ್ಕೊಳ್ಳಬೇಕು; ನಾಮವನ್ನು ಉಚ್ಚರಿಸಿದರೆ ದೋಷಗಳು ತಾವಾಗಿಯೇ ತೊಲಗುವವು.



## ೪. ಹರಿಕೀರ್ತನೆ ಇತ್ಯಾದಿ ಸಗುಣ ಭಕ್ತಿ

(ಶ್ಲೋಕ ೧೦೨-೧೩೫)

[ಸಗುಣ ಭಕ್ತಿ (ಶ್ಲೋಕ ೧೦೨-೧೦೭) ವಾದ ಮಾಡಬೇಡ (ಶ್ಲೋಕ ೧೦೮-೧೧೫), ದೇವನು ಭಕ್ತ ರಕ್ಷಕನಾಗಿದ್ದಾನೆ (ಶ್ಲೋಕ ೧೧೬-೧೨೭), ಸಜ್ಜನ ಸಂಗತಿ (೧೨೮-೧೩೫)]

ಅತೀ ಲೀನತಾ ಸರ್ವಭಾವೇ ಸ್ವಭಾವೇ ।
ಜನಾ ಸಜ್ಜನಾಲಾಗಿ ಸಂತೋಷವಾವೇ ॥
ದೇಹೇ ಕಾರಣೀ ಸರ್ವ ಲಾವೀತ ಜಾವೇ ।
ಸಗೂಣೀಅತೀ ಆದರೇಸೀ ಭಜಾವೇ ॥೧೦೨॥

ಸಹಗುಣವಾದ ಅತ್ಯಂತ ನಮ್ರತೆಯಿಂದ ಜನತೆಯನ್ನು ಹಾಗೂ ವಿಶೇಷತಃ ಸತ್ಪುರುಷರನ್ನು ಆನಂದಗೊಳಿಸಬೇಕು ಮತ್ತು ಬಹು ಪ್ರೇಮದಿಂದ ಸಗುಣ ಭಜನೆ ಮಾಡುತ್ತ ಶರೀರವನ್ನು ಸಾರ್ಥಕಗೊಳಿಸಬೇಕು.

ಹರೀಕೀರ್ತನೀ ಪ್ರೀತಿ ರಾಮಿ ಧರಾವೀ ।
ದೇಹೇಬುದ್ಧಿ ನಿರೂಪಣೀ ವೀಸರಾವೀ ॥
ಪರದ್ರವ್ಯ ಆಣೀಕ ಕಾಂತಾ ಪರಾವೀ ।
ಯದರ್ಥೀ ಮನಾ ಸಾಂಡಿ ಜೀವೀ ಕರಾವೀ ॥೧೦೩॥

ಮನವೇ, ಕೀರ್ತನದ ವೇಳೆಗೆ ರಾಮನಲ್ಲಿ ಭಕ್ತಿಯಿಡಬೇಕು ಹಾಗೂ ನಿರೂಪಣ ಸಮಯದಲ್ಲಿ ದೇಹಬುದ್ಧಿಯನ್ನು ಮರೆಯಬೇಕು. ಇದಲ್ಲದೆ ಪರದ್ರವ್ಯ-ಪರಸ್ತ್ರೀಯನ್ನು ಮುನಃಪೂರ್ವಕ ತ್ಯಾಗ ಮಾಡುವದವಶ್ಯವು.

ಕ್ರಿಯೇವೀಣ ನಾನಾಪರೀ ಬೋಲಿಜೇತೇ ।
ಪರೀ ಚಿತ್ತ ದುಶ್ಚಿತ ತೇ ಲಾಜವೀತೇ ॥
ಮನಾ ಕಲ್ಪನಾ ಧೀಟ ಸೈರಾಟ ಧಾವೇ ।
ತಯಾ ಮಾನವಾ ದೇವ ಕೈಸೇನಿ ಪಾವೇ ॥೧೦೪॥

ಆಚರಣೆಯಿಲ್ಲದೆ ಸುಮ್ಮನೇ ಜ್ಞಾನ ಹೇಳುತ್ತಾರೆ ! ಆದರೆ ಅವರ ವಿಷಯಾಸೆಯೇ ಅವರನ್ನು ಲಜ್ಜೆಗೀಡು ಮಾಡುವದು !! ಮನವೇ, ತೀವ್ರ ಓಟದ ಕಲ್ಪನೆಯ ಮನುಷ್ಯನಿಗೆ ಈಶಪ್ರಾಪ್ತಿ ಹೇಗೆ ಸಾಧ್ಯವು ?

ವಿವೇಕೆ ಕ್ರಿಯಾ ಆಪುಲೀ ಪಾಲಟಾವೀ ।
ಅತೀ ಆದರೇ ಶುದ್ಧ ಕ್ರಿಯಾ ಧರಾವೀ ॥
ಜನೀ ಬೋಲಣ್ಯಾಸಾರಿಖೇ ಚಾಲ ಬಾಪಾ ।
ಮನಾ ಕಲ್ಪನಾ ಸೋಡಿ ಸಂಸಾರತಾಪಾ ॥೧೦೫॥

ಮನವೇ, ವಿಚಾರದಿಂದ ನಿನ್ನ ದುರ್ನಡತೆಯನ್ನು ಪಲ್ಲಟಿಸು ಹಾಗೂ ಒಳ್ಳೇ ಪ್ರೀತಿಯಿಂದ ಸದ್ವರ್ತನೆ ಅವಲಂಬಿಸು. ನೀನು ಜನರಲ್ಲಿ ಆಡಿದಂತೆಯೇ ನಡೆಯಪ್ಪಾ ! ಪ್ರಪಂಚ ದುಃಖಕ್ಕೆ ಕಾರಣವಾದ ಕಲ್ಪನೆಯನ್ನು ಕಳೆಯಪ್ಪಾ !!

ಬರೀ ಸ್ನಾನಸಂಧ್ಯಾ ಕರೀ ಏಕನಿಷ್ಠಾ ।
ವಿವೇಕೀ ಮನಾ ಅವರೀ ಸ್ಥಾನಭ್ರಷ್ಟಾ ॥
ದಯಾ ಸರ್ವಭೂತೀ ಜಯಾ ಮಾನವಾಲಾ ।
ಸದಾ ಪ್ರೇಮಳೂ ಭಕ್ತಿಭಾವೇ ನಿವಾಲಾ * ॥೧೦೬॥

ಸ್ನಾನಸಂಧ್ಯಾದಿ ನಿತ್ಯಕರ್ಮಗಳನ್ನು ಶ್ರದ್ಧೆಯಿಂದ ಮಾಡುವವನು ಆತ್ಮಸ್ವರೂಪದಿಂದ ಚ್ಯುತವಾದ ಮನವನ್ನು ಆವರಿಸುವವನು, ಪ್ರಾಣಿಮಾತ್ರರಲ್ಲಿ ದಯೆಯುಳ್ಳವನು ಹಾಗೂ ಪ್ರೇಮಸೀಲನಾದವನೇ ಭಾವಭಕ್ತಿಯಿಂದ ಶಾಂತಿ ಪಡೆಯುವನು.

ಮನಾ ಕೋಪ ಅರೋಪಣಾ ತೇ ನಸಾವೀ ।
ಮನಾ ಬುದ್ಧಿ ಹೇ ಸಾಧುಸಂಗೀ ವಸಾವೀ ॥
ಮನಾ ನಷ್ಟ ಚಾಂಡಾಳ ತೋ ಸಂಗ ತ್ಯಾಗಿ ।
ಮನಾ ಹೋಯಿರೇ ಮೋಕ್ಷಭಾಗೀ ವಿಭಾಗಿ ॥೧೦೭॥

ಮನವೇ, ನಿನ್ನಲ್ಲಿ ಸಿಟ್ಟು - ದೋಷವಿರಬಾರದು, ಆದರೆ ಸಂತಸಹವಾಸದಲ್ಲಿ ನಿನ್ನ ಪ್ರೀತಿಯಿರಬೇಕು. ಮನಾ, ನೀಚ ದುಃಸಂಗತಿಯನ್ನು ತ್ಯಜಿಸಿಬಿಟ್ಟು ಮುಕ್ತಿಗೆ ಅಧಿಕಾರಿಯಾಗಪ್ಪಾ !

ಸದಾ ಸರ್ವದಾ ಸಜ್ಜನಾಚೇನಿಯೋಗೆ ।
ಕ್ರಿಯಾ ಪಾಲಟೇ ಭಕ್ತಿಭಾವಾರ್ಥ ಲಾಗೇ ॥

---

* ಪಾಠಭೇದ - ನಾಮಾಲಾ



ಕ್ರಿಯೇವೀಣ ವಾಚಾಳತಾ ತೋ ನಿವಾರೀ ।
ತುಟೇ ವಾದ ಸಂವಾದ ತೋ ಹೀತಕಾರೀ♦ ॥೧೦೮॥

ಮನವೇ, ಸತತವಾದ ಸಜ್ಜನಸಂಗದಿಂದ ನಡತೆ ಪರಿವರ್ತನವಾಗಿ ಭಕ್ತಿಭಾವ ಉದಿಸುವದು; ಅದಕ್ಕಾಗಿ ನೀನು ನಡೆಯಿಲ್ಲದ ಬರೇ ಮಾತುಗಾರಿಕೆ ಬಿಟ್ಟು ಕೊಟ್ಟು ಎಲ್ಲ ಸಂಶಯವನ್ನು ಕಡಿಯುವ ಜಿಜ್ಞಾಸೆಯ ಸಂಭಾಷಣೆ ಮಾಡುವದೇ ಹಿತಕರವು !

ಜನೀ ವಾದವೀವಾದ ಸೋಡೂನಿ ದ್ಯಾವಾ ।
ಜನೀ ಸೂಖಸಂವಾದ ಸೂಖೇ ಕರವಾ ॥
ಜಗೀ ತೋಚಿ ತೋ ಶೋಕಸಂತಾಪಹಾರಿ ।
ತುಟೇ ವಾದ ಸಂವಾದ ತೋ ಹೀತಕಾರಿ ॥೧೦೯॥

ಜನರಲ್ಲಿ ಯಾರ ಸಂಗಡವಾದರೂ ವಾದವಿವಾದ ಮಾಡತಕ್ಕದ್ದಲ್ಲ, ಆದರೆ ಅವರೊಡನೆ ಸುಖಸಂಭಾಷಣೆಯನ್ನು ಬೇಕಾದಷ್ಟು ಮಾಡಬಹುದು ! ಯಾಕೆಂದರೆ ಅಂತಹ ಪ್ರೇಮಪೂರ್ಣ ಚರ್ಚೆಯಿಂದಲೇ ದುಃಖ-ದುಮ್ಮಾನ ನಾಶವಾಗುವದು. ಸಾರಾಂಶ, ಎಲ್ಲ ಸಂಶಯ ಕಡಿಯುವ ಜಿಜ್ಞಾಸೆಯ ಸಂಭಾಷಣೆ ಮಾಡುವದೇ ಹಿತಕರವು.

ತುಟೇ ವಾದ ಸಂವಾದ ತ್ಯಾತೇ ಮ್ಹಣಾವೇ ।
ವಿವೇಕೇ ಅಹಂಭಾವ ಯಾತೇ ಜಿಣಾವೇ ॥
ಅಹಂತಾಗುಣೇ ವಾದ ನಾನಾ ವಿಕಾರೀ ।
ತುಟೇ ವಾದ ಸಂವಾದ ತೋ ಹೀತಕಾರೀ ॥೧೧೦॥

ನಾ-ನಿನೇಂದು ವಾದಿಸುವದು ಅಳಿದಾಗಲೇ ಅದು ಸಂವಾದವೆನಿಸುವದು. ಅಹಂಕಾರದಿಂದಲೇ ಕ್ರೋಧಾದಿ ವಿಕಾರಯುಕ್ತವಾದ ಬೆಳೆಯುವದರಿಂದ ವಿವೇಕದಿಂದ 'ನಾ' ನನ್ನು ಜಯಿಸಬೇಕು. ಒಟ್ಟಿಗೆ ಎಲ್ಲ ವಾದವಳಿದು ಮಾಡುವ ಜಿಜ್ಞಾಸೆಯ ಸಂಭಾಷಣೆಯೇ ಹಿತಕರವು !

ಹಿತಕಾರಣೇ ಬೋಲಣೇ ಸತ್ಯ ಆಹೇ ।
ಹಿತಾಕಾರಣೇ ಸರ್ವ ಶೋಧೂನಿ ಪಾಹೇ ॥

---

♦ ತುಟೇ ವಾದ ಸಂವಾದ ತೋ ಹೀತಕಾರೀ : ೧೦೮-೧೧೨ (೫ ಶ್ಲೋಕ)

**ಹಿತಾಕಾರಣೇ ಬಂಡ ಪಾಖಾಂಡ ವಾರೀ ।**
**ತುಟೇ ವಾದ ಸಂವಾದ ತೋ ಹಿತಕಾರೀ ॥೧೧೧॥**

ಸ್ವಹಿತ ಸಾಧಿಸುವದಕ್ಕಾಗಿ ಮಾತಾಡುವದು ಅವಶ್ಯವೇ ಅದೆ. ಸ್ವಹಿತದ ಉದ್ದೇಶದಿಂದ ಎಲ್ಲವನ್ನೂ ಸೂಕ್ಷ್ಮ ವಿಚಾರ ಮಾಡಿ ದುಷ್ಟ ನಾಸ್ತಿಕತೆಯನ್ನು ನಿರಸನಮಾಡು. ಸಾರಾಂಶ, ಎಲ್ಲ ವಾದವಳಿಯುವಂತೆ ಸಂಭಾಷಣೆ ಮಾಡುವದೇ ಹಿತಕರವು !

**ಜನೀ ಸಾಂಗತಾ ಐಕತಾ ಜನ್ಮ ಗೇಲಾ ।**
**ಪರೀ ವಾದವೀವಾದ ತೈಸಾಚಿ ಠೇಲಾ ॥**
**ಉಠೇ ಸಂಶಯೋ ವಾದ ಹಾ ದಂಭಭಾರೀ* ।**
**ತುಟೇ ವಾದ ಸಂವಾದ ತೋ ಹಿತಕಾರಿ ॥೧೧೨॥**

ಜನರಲ್ಲಿ ಬರೇ ಹೇಳ ಕೇಳುತ್ತಲೇ ಜನ್ಮ ಕಳೆಯಿತಾದರೂ ಮುಖ್ಯ ವಾದಗ್ರಸ್ತ ವಿಷಯವು ಹಾಗೆ ಉಳಿಯುತು ! ಬರೇ ಸಂಶಯವನ್ನೇ ಬೆಳಿಸುವ ಚರ್ಚೆಯು ಮಹಾ ದಾಂಭಿಕತನವಿರುತ್ತದೆ ! ಅದಕ್ಕಾಗಿ ಎಲ್ಲ ವಾದವಳಿದು ಜಿಜ್ಞಾಸೆಯ ಸಂಭಾಷಣೆ ಮಾಡುವದೇ ಹಿತಕರವು !

**ಜನೀ ಹೀತ ಪಂಡೀತ ಸಾಂಡೀತ ಗೇಲೇ ।**
**ಅಹಂತಾಗುಣೇ ಬ್ರಹ್ಮ ರಾಕ್ಷಸ ಝಾಲೇ ॥**
**ತಯಾಹೂನಿ ವ್ಯುತ್ಪನ್ನ ತೋ ಕೋಣ ಆಹೇ ।**
**ಮನಾ ಸರ್ವ ಜಾಣೀವ ಸಾಂಡೂನೀ ರಾಹೇ ॥೧೧೩॥**

ಪಂಡಿತರೆನ್ನುವವರು ತಮ್ಮ ನಿಜವಾದ ಕಲ್ಯಾಣವನ್ನು ದುರ್ಲಕ್ಷಿಸಿ, ಅಹಂಕಾರದಿಂದ ಬ್ರಹ್ಮರಾಕ್ಷಸರಾದರು ! ಆ ಪಂಡಿತರಿಗಿಂತಲೂ ಹೆಚ್ಚಿನ ವಿದ್ವತ್ತೆಯಾವನಿಗಿರುವದು ? ಆದ್ದರಿಂದ ಮನವೇ ವೃಥಾ ಅಹಂಕಾರವೆಲ್ಲವನ್ನು ತ್ಯಜಿಸು.

**ಫುಕಾಚೇ ಮುಖೀ ಬೋಲತಾ ಕಾಯ ವೇಚೇ ।**
**ದಿಸಂದೀಸ ಅಭ್ಯಂತರೀ ಗರ್ವ ಸಾಚೇ ॥**
**ಕ್ರಿಯೇವೀಣ ವಾಚಾಳತಾ ವ್ಯರ್ಥ ಆಹೇ ।**
**ವಿಚಾರೇ ತುಝಾ ತೂಚಿ ಶೋಧೂನಿ ಪಾಹೇ ॥೧೧೪॥**

★ ಪಾಠಭೇದ - ದಂಭಧಾರೀ



ಸುಮ್ಮಸುಮ್ಮನೇ ಉಪದೇಶ ಹೇಳಲಿಕ್ಕೆ ಯಾರಿಗೆ ಏನು ಖರ್ಚಾಗುವದು? ಆದರೆ ಅದರಿಂದ ದಿನದಿನಕ್ಕೂ ಗರ್ವ ಮಾತ್ರ ಹೆಚ್ಚಾಗುವದು! ಸಾರಾಂಶ, ಕ್ರಿಯಾರಹಿತ ಬಡಬಡಿಕೆಯು ಏತಕ್ಕೂ ಬಾರದು !! ಈ ನಿಜ ಸಂಗತಿಯನ್ನು ನಿನ್ನದು ನೀನೇ ವಿಚಾರಮಾಡಿನೋಡು.

**ತುಟೇ ವಾದ ಸಂವಾದ ತೇಥೇ ಕರಾವಾ ।**
**ವಿವೇಕೇ ಅಹಂಭಾವ ಹಾ ಪಾಲಟಾವಾ ॥**
**ಜನೀ ಬೋಲಣ್ಯಾಸಾರಿಖೇ ಆಚರಾವೇ ।**
**ಕ್ರಿಯಾಪಾಲಟೇ ಭಕ್ತಿಪಂಥೇಚಿ ಜಾವೇ ॥೧೧೫॥**

ಸಾರಾಸಾರ ವಿವೇಕದಿಂದ ಅಹಂಕಾರವನ್ನು ಬಿಟ್ಟು, ಸಂಶಯ ಕಡಿಸುವ ಸತ್ಪುರುಷರಲ್ಲಿಯೇ ಆತ್ಮಹಿತದ ಸಂಭಾಷಣೆ ಮಾಡತಕ್ಕದ್ದು. ಅಲ್ಲದೆ, ಜನರಲ್ಲಿ ತಾನು ಮಾತಾಡಿದಂತೆಯೇ ನಡೆಯುತ್ತ, ಶುದ್ಧ ಕ್ರಿಯೆಯುಳ್ಳವನಾಗಿ ಭಕ್ತಿ ಮಾರ್ಗದಿಂದಲೇ ಹೋಗಬೇಕು.

**ಬಹೂಶಾಪಿತಾ ಕಷ್ಟಲಾ ಅಂಬಋಷೀ ।**
**ತಯಾಚೆ ಸ್ವಯೇ ಶ್ರೀಹರಿ ಜನ್ಮ ಸೋಶೀ ॥**
**ದಿಲಾ ಕ್ಷೀರಸಿಂಧೂ ತಯಾ ಉಪಮಾನಿ ।**
**ನುಪೇಕ್ಷೀ ಕದಾ ದೇವ ಭಕ್ತಾಭಿಮಾನೀ* ॥೧೧೬॥**

ದೂರ್ವಾಸ ಋಷಿಯ ಶಾಪದಿಂದ ಅಂಬರೀಷ ರಾಜನು ವ್ಯಥೆಗೀಡಾಗಿರಲು, ಸ್ವತಃ ಶ್ರೀ ವಿಷ್ಣುವೇ ಅವನ ಸಲುವಾಗಿ ಜನ್ಮ ಬೋಗಿಸಿದನು![2] ಉಪಮನ್ಯುವಿಗೆ ಕ್ಷೀರ ಸಮುದ್ರವನ್ನೇ ದಯ

*** ನುಪೇಕ್ಷೀ ಕದಾ ದೇವ ಭಕ್ತಾಭಿಮಾನೀ : ೧೧೬-೧೨೫ (೧೦-ಶ್ಲೋಕ)**

೨. ಅಂಬರೀಷ ರಾಜನು ಮಹಾ ವಿಷ್ಣುಭಕ್ತನಾಗಿದ್ದನು. ಒಮ್ಮೆ ದೂರ್ವಾಸ ಋಷಿಯು ಅವನಲ್ಲಿಗೆ ಬಂದು, ಬೇಕಂತೇ ಭೋಜನಕ್ಕೆ ತಡಮಾಡಿ, ರಾಜನ ದ್ವಾದಶೀ ವ್ರತವನ್ನು ಕೆಡಿಸಲುದ್ಯುಕ್ತನಾದನು. ರಾಜನು ವ್ರತದ ಕಾಲ ಮೀರಬಾರದೆಂದು ದೇವರಿಗೆ ನೈವೇದ್ಯ ತೋರಿಸಿ, ತಾನು ತೀರ್ಥದಿಂದ ಪಾರಣೀ ಮಾಡಿದನು. ಕೋಪಿಷ್ಠ ಋಷಿಗೆ ಇದು ಸಹನವಾಗದೆ ಒಂದು ಕೃತ್ಯೆಯನ್ನು ರಾಜನ ಮೇಲೆ ಬಿಟ್ಟನು. ಆಗ ಅಂಬರೀಷನು

(ಮುಂದಿನ ಪುಟಕ್ಕೆ)

ಪಾಲಿಸಿದನು!![೩] ಇಂತಹ ಭಕ್ತ ಕೈವಾರಿಯಾದ ದೇವನು ತನ್ನ ಭಕ್ತರನ್ನೆಂದಿಗೂ ಅಲಕ್ಷ ಮಾಡನು !

**ಧ್ರುವೂ ಲೇಕರೂ ಬಾಪುಡೇ ದೈನ್ಯವಾಣೇ ।**
**ಕೃಪಾ ಭಾಕಿತಾ ದೀಧಲೀ ಭೇಟಿ ಜೇಣೇ ॥**
**ಚಿರಂಜೀವ ತಾರಾಂಗಣೀ ಪ್ರೇಮಖಾಣೀ ।**
**ನುಪೇಕ್ಷೀ ಕದಾ ದೇವ ಭಕ್ತಾಭಿಮಾನೀ ॥೧೧೭॥**

ಹೀನ ದೀನನಾದ ಧ್ರುವಕೂಸು ದೇವನ ಕರುಣೆಗಾಗಿ ಪ್ರಾರ್ಥಿಸುತ್ತಿರಲು ನಾರಾಯಣನು ಅದಕ್ಕೆ ಭೆಟ್ಟಿಕೊಟ್ಟನಲ್ಲದೆ, ಆ ತನ್ನ ಪ್ರೇಮದ ಖಣಿಗೆ ತಾರೆಗಳ ಮಂಡಲದಲ್ಲಿ ಶಾಶ್ವತ ಸ್ಥಾನ ಕೊಟ್ಟನು ![೪] ಇಂತಹ ಭಕ್ತ ಕೈವಾರಿ

---

ವಿಹ್ವಲನಾಗಿ ಭಗವಂತನಿಗೆ ಮೊರೆಯಿಡಲು, ವಿಷ್ಣುವಿನ ಸುದರ್ಶನ ಚಕ್ರವೇ ಅವನ ರಕ್ಷಣೆಗೆ ಬಂದು ಆ ಕೃತ್ಯೆಯನ್ನು ನಾಶಗೊಳಿಸಿದ್ದಲ್ಲದೆ ದುರ್ವಾಸನ ಬೆನ್ನಟ್ಟಿತು ! ಋಷಿಯು ತ್ರಾಹಿ, ತ್ರಾಹಿ ಎಂದು ವಿಷ್ಣುವಿನ ಕಡೆಗೆ ಓಡಿದಾಗ ''ನಾನು ಭಕ್ತಪರಾಧೀನನು, ಭಕ್ತರಿಗೆ ಮಾಡಿದ ಅಪರಾಧವನ್ನು ಭಕ್ತರೇ ಕ್ಷಮಿಸಬಲ್ಲರು !'' ಎಂದು ಉದ್ಗರಿಸಿದನು. ಆಗ ದುರ್ವಾಸನು ಪಶ್ಚಾತ್ತಾಪದಿಂದ ಅಂಬರೀಷನಿಗ ಶರಣು ಹೋಗಿ ಚಕ್ರದಿಂದ ಬಿಡುಗಡೆಯಾದನು ! (ವಿಷ್ಣುವು ಜನ್ಮ ತಕ್ಕೊಳ್ಳಬೇಕಾದ ಶಾಪವದು?)

೩. ಉಪಮನ್ಯುವು ಒಬ್ಬ ಋಷಿಪುತ್ರನು. ಅವನ ತಾಯಿತಂದೆಗಳು ಕೇವಲ ಬಡತನದಲ್ಲಿ ಕಾಲಹರಣ ಮಾಡುತ್ತಿದ್ದುದರಿಂದ ಉಪಮನ್ಯುವು ಹೈನ - ಹಾಲನ್ನು ಎಂದಿಗೂ ಕಂಡಿರಲಿಲ್ಲ. ಅವನು ಒಮ್ಮೆ ತನ್ನ ಮಿತ್ರರೊಡನೆ ಅವರ ಆಶ್ರಮಕ್ಕೆ ಹೋಗಿರಲು, ಅಲ್ಲಿ ಹಾಲು ಕುಡಿಯಲಿಕ್ಕೆ ಕೊಟ್ಟರು. ಉಪಮನ್ಯವು ಮನೆಗೆ ಬಂದು ತಾಯಿಗೆ ಹಾಲು ಕೊಡೆಂದು ಹಟ ಹಿಡಿದನು ! ತಾಯಿಯು ದುಃಖಿತಳಾಗಿ ನೀರಿನಲ್ಲಿ ಹಿಟ್ಟು ಕಲಿಸಿ ಅದನ್ನೇ ಹಾಲೆಂದು ಕೊಡಹೋಗಲು ಬಾಲಕನು ಅದು ಬೇರೆಯವರ ಆಶ್ರಮದಲ್ಲಿ ಕುಡಿದಂಥ ಹಾಲು ಅಲ್ಲವೆಂದು ಮತ್ತಿಷ್ಟು ಅಳಹತ್ತಿದನು !!

ತಾಯಿಯು ಉಪಮನ್ಯುವಿಗೆ - ''ಕಂದಾ, ಹರಿಭಕ್ತಿ ಮಾಡಿ, ಅವನಿಂದ ಏನು ಬೇಕಾದುದನ್ನು ಪಡೆಯಬಹುದು !'' ಎಂದು ಹೇಳಲು, ಉಪಮನ್ಯು ಬಾಲಕನು ದೃಢನಿಷ್ಠೆಯಿಂದ ವಿಷ್ಣುವಿನ ಧ್ಯಾನ ಮಾಡಿದನು. ಹಾಗೂ ವಿಷ್ಣುವನ್ನು ಒಲಿಸಿಕೊಂಡು ಕ್ಷೀರಸಾಗರವನ್ನೇ ಪಡೆದನು!

೪. ಉತ್ತಾನಪಾದ ರಾಜನಿಗೆ ಸುನೀತಿ, ಸುರುಚಿ ಎಂಬ ಇಬ್ಬರು ರಾಣಿಯರಿದ್ದರು.

(ಮುಂದಿನ ಪುಟಕ್ಕೆ)



ಯಾದ ದೇವನು ತನ್ನ ಭಕ್ತರನ್ನೆಂದಿಗೂ ಅಲಕ್ಷ ಮಾಡನು !

**ಗಜೇಂದ್ರೂ ಮಹಾಸಂಕಟೀ ವಾಸ* ಪಾಹೇ ।**
**ತಯಾಕಾರಣೇ ಶ್ರೀಹರೀ ಧಾವತಾಹೇ ॥**
**ಉಡೀ ಘಾತಲಿ ಜಾಹಲಾ ಜೀವದಾನೀ ।**
**ನುಪೇಕ್ಷೀ ಕದಾ ದೇವ ಭಕ್ತಾಭಿಮಾನೀ ॥೧೧೮॥**

ಗಜೇಂದ್ರನು ಮೊಸಳೆಯಿಂದ ಭಯಂಕರ ವಿಪತ್ತಿನಲ್ಲಿ ಸಿಲುಕಿ, ವಿಮೋಚನೆಗಾಗಿ ಹಂಬಲಿಸುತ್ತಿರಲು, ಶ್ರೀ ಹರಿಯು ಅವನಿಗಾಗಿ ಓಡಿ ಬಂದನು ! ದೇವನು ಒಮ್ಮೆಲೆ ಧುಮುಕಿ ಮೊಸಳೆಯನ್ನು ಕೊಂದು

---

ಕಾಲಕ್ರಮೇಣದಿಂದ ಈರ್ವರಿಗೂ ಪುತ್ರರಾಗಲು ಹಿರಿಯಳ ಮಗನಿಗೆ ಧ್ರುವನೆಂತಲೂ ಕಿರಿಯಳ ಮಗನಿಗೆ ಉತ್ತಮನೆಂತಲೂ ಕರೆದರು. ಆದರೆ ರಾಜನು ಚಿಕ್ಕವಳಾದ ಸುರುಚಿಯನ್ನೇ ಪ್ರೀತಿಸುತ್ತ, ಅವಳ ಅಸೂಯಾಪರ ಬೋಧನೆಯಂತೆ ಸುನೀತಿಯನ್ನು ಮಗುವಿನೊಡನೆ ದೂರವಿಟ್ಟನು. ಧ್ರುವನು ೫-೬ ವರ್ಷದವನಾಗಿರಲು ತಾಯಿಗೆ ತನ್ನ ತಂದೆ ಯಾರೆಂದು ಕೇಳಲು, ಸುನೀತಿಯು ''ಈ ದೇಶವನ್ನಾಳುವ ರಾಜನು ನಿನ್ನ ತಂದೆ''ಯೆಂದು ಉತ್ತರ ಕೊಟ್ಟಳು. ಧ್ರುವನು ಹರ್ಷಿತನಾಗಿ ಅರಮನೆಗೆ ಹೋಗಿ ಪ್ರೀತಿಯಿಂದ ತಂದೆಯ ತೊಡೆಯ ಮೇಲೇರಿದನು. ರಾಜನು ತಾನಾಗೀ ಬಳಿಗೆ ಬಂದ ಮಗನನ್ನು ಕಂಡು ಮುದ್ದಿಸುತ್ತಿರಲು, ಸುರುಚಿಯು ಕ್ರೋಧಾವೇಶದಿಂದ ಧ್ರುವನನ್ನು ಒದೆದು ನೆಲಕ್ಕೆ ಕೆಡವಿ, ತನ್ನ ಮಗನಾದ ಉತ್ತಮನಿಗೆ ಮಾತ್ರ ರಾಜನ ಅಂಕಾರೋಹಣದ ಭಾಗ್ಯವಿದೆಯೆಂದು ಹೀಯಾಳಿಸಿ ನುಡಿದಳು ! ಅಸಹಾಯಕನಾಗಿ ರಾಜನಿಗೆ ಏನನ್ನೂ ಮಾಡಲಾಗಲಿಲ್ಲ.

ಧ್ರುವನು ಅಳುತ್ತಳುತ್ತ ತಾಯಿಯ ಹತ್ತರ ಬಂದು, ನಡೆದ ಎಲ್ಲ ಸಂಗತಿಯನ್ನು ಹೇಳಿದನು. ಆಗ ತಾಯಿಯು - ''ಮಗನೇ, ನಾವು ಈಶ್ವರನಲ್ಲಿ ಬೇಡಿ ಬಂದಿಲ್ಲ !'' ಎಂದು ಉದ್ಗರಿಸಿದಳು.

ಧ್ರುವ - ತಾಯೀ, ಈಶ್ವರನೆಲ್ಲಿರುವನು ? ನಾವು ಅವನಿಂದ ಈಗಲಾದರೂ ಪಡೆಯೋಣ.

ಸುನೀತಿ - ಮಗೂ ಈಶ್ವರನು ಭೆಟ್ಟಿಯಾಗುವದು. ಸುಲಭವಲ್ಲ ! ಅವನನ್ನು ಭಕ್ತಿಯಿಂದ ಬಹುಕಾಲ ಧ್ಯಾನಿಸಬೇಕು. ಅಂದರೆ ಮಾತ್ರ ಅವನು ದರ್ಶನ ಕೊಡುವನು.

ಧ್ರುವ - ಹಾಗಾದರೆ ನಾನು ಧ್ಯಾನಮಾಡಿ ದೇವನ ಪ್ರತ್ಯಕ್ಷ ದರ್ಶನ ಮಾಡಿಕೊಳ್ಳುವೆನು.

(ಮುಂದಿನ ಪುಟಕ್ಕೆ)

* ಪಾಠಭೇದ - ವಾಟ

ಗಜೇಂದ್ರನಿಗೆ ಪ್ರಾಣದಾನ ಮಾಡಿದನು ! ೫ ಇಂತಹ ಭಕಕ್ತೈವಾರಿಯು ತನ್ನ ಭಕ್ತರನ್ನೆಂದಿಗೂ ಅಲಕ್ಷ ಮಾಡನು !

**ಅಜಾಮೀಳ ಪಾಪೀ ತಯಾ ಅಂತ ಆಲಾ ।**
**ಕೃಪಾಳೂಪಣೇ ತೋ ಜನೀ ಮುಕ್ತ ಕೇಲಾ ॥**
**ಅನಾಥಾಸೀ ಆಧಾರ ಹಾ ಚಕ್ರಪಾಣೀ ।**
**ನುಪೇಕ್ಷೀ ಕದಾ ದೇವ ಭಕ್ತಾಭಿಮಾನೀ ॥೧೯॥**

ಪಾಪಿಯಾದ ಅಜಾಮಿಳನ ಮರಣಕಾಲ ಬಂದಿರಲು:- ಭಗವಂತನು ದಯೆಯಿಂದ ಅವನನ್ನು ಮುಕ್ತ ಮಾಡಿದನು ! * ಶ್ರೀ ಹರಿಯು ಅನನ್ಯ ಶರಣಾಗತರಿಗೆ ಆಧಾರನಿರುತ್ತಾನೆ. ಇಂತಹ ಭಕಕ್ತೈವಾರಿಯಾದ ದೇವನು ತನ್ನ ಭಕ್ತರನ್ನೆಂದಿಗೂ ಅಲಕ್ಷ ಮಾಡನು !

---

ಮೇಲಿನಂತೆ ಸಂಭಾಷಣೆಯಾದ ಬಳಿಕ ಧ್ರುವನು 'ಈಶ್ವರ ದರ್ಶನವಾಗದೆ ತಿರುಗಿ ಬರಲಾರೆ'ನೆಂಬ ದೃಢನಿರ್ಧಾರದಿಂದ ಅಡವಿಗೆ ಹೋದನು. ಅಲ್ಲಿ ನಾರದ ಋಷಿಗಳು ಭೆಟ್ಟಿಯಾಗಿ 'ಓಂ ನಮೋ ಭಗವತೇ ನಾರಾಯಣಾಯ' ಎಂಬ ಮಂತ್ರೋಪದೇಶ ಮಾಡಿದರು. ಧ್ರುವನು ಅಚಲ ನಿಷ್ಠೆಯಿಂದ ಆ ನಿರ್ಜನ ವನದಲ್ಲಿ ಗುರೂಪದಿಷ್ಟ ಮಂತ್ರದ ಜಪ ಮಾಡ ಹತ್ತಿದನು. ವಿಷ್ಣುವು ಧ್ರುವಬಾಲಕನ ದೃಢ ಭಕ್ತಿಗೆ ಒಲಿದು ಪ್ರತ್ಯಕ್ಷ ದರ್ಶನ ಕೊಟ್ಟನು ಹಾಗೂ ಅವನಿಗೆ ತಂದೆಯ ರಾಜ್ಯವಲ್ಲದೆ ಗ್ರಹಗಳು ಅವಿರತ ಪ್ರದಕ್ಷಿಣೆ ಮಾಡುವ ಶಾಶ್ವತ ಸ್ಥಾನವನ್ನು ಅನುಗ್ರಹಿಸಿದನು !

೫. ಅಗಸ್ತ್ಯ ಋಷಿಯ ಶಾಪದಿಂದ ಪಾಂಡ್ಯ ದೇಶದ ರಾಜನೊಬ್ಬನು ಆನೆಯಾಗಿ ಹುಟ್ಟಿದನು. ಒಮ್ಮೆ ಆ ಗಜವು ಸರೋವರದಲ್ಲಿ ಜಲಕ್ರೀಡೆಗೆ ಬಂದಾಗ, ಒಂದು ದೊಡ್ಡ ಮೊಸಳೆಯು ಅದರ ಕಾಲು ಹಿಡಿದು ಎಳೆಯಹತ್ತಿತು. ಗಜರಾಜನು ಎಷ್ಟು ಬಲಪ್ರಯೋಗ ಮಾಡಿದರೂ ಮೊಸಳೆಯಿಂದ ಬಿಡಿಸಿಕೊಳ್ಳುವದಾಗದೆ ವಿಹ್ವಲನಾಗಿರಲು, ಪೂರ್ವಜನ್ಮದ ಸ್ಮೃತಿಯುಂಟಾಗಿ, ಸರೋವರದಲ್ಲಿ ಹತ್ತಿರವೇ ಇದ್ದ ಒಂದು ಕಮಲವನ್ನು ಸೊಂಡೆಯಲ್ಲಿ ಹಿಡಿದು, ಭಕ್ತಿಯಿಂದ ಆ ಕಮಲವನ್ನು ಭಗವಂತನಿಗೆ ಅರ್ಪಿಸಿ ಮೊರೆಯಿಟ್ಟನು ! ಆಗ ವಿಷ್ಣುವು ಗರುಡಾರೂಢನಾಗಿ ಬಂದು, ಚಕ್ರದಿಂದ ಮೊಸಳೆಯನ್ನು ಭೇದಿಸಿ ಗಜೇಂದ್ರನ ಬಿಡುಗಡೆ ಮಾಡಿದನು.

---

*೯೫ನೇ ಶ್ಲೋಕದ ಟಿಪ್ಪಣಿ ಪುಟ ೩೦ ನೋಡಿರಿ.



**ವಿಧೀಕಾರಣೇ ಜಾಹಲಾ ಮತ್ಸ್ಯವೇಗೀ ।**
**ಧರೀ ಕೂರ್ಮರೂಪೇ ಧರಾಪೃಷ್ಠಭಾಗೀ ॥**
**ಜನಾ ರಕ್ಷಣಾ ಕಾರಣೇ ನೀಚಯೋನೀ ।**
**ನುಪೇಕ್ಷೀ ಕದಾ ದೇವ ಭಕ್ತಾಭಿಮಾನೀ ॥೨೦॥**

ಬ್ರಹ್ಮದೇವನ ಸಲುವಾಗಿ ಮತ್ಸ್ಯಾವತಾರ ತಾಳಿದನು, ೬ ಕೂರ್ಮರೂಪ ಧರಿಸಿ ಪೃಥ್ವಿಯನ್ನು ಬೆನ್ನ ಮೇಲೆ ಪೊತ್ತನು, ೭ ಜನರ ರಕ್ಷಣೆಗಾಗಿ ಸೂಕರ ಜನ್ಮ ತಕ್ಕೊಂಡನು ! ೮ ಹೀಗೆ ಅವತಾರ ಧರಿಸಿದ ಭಕ್ತ ಕೈವಾರಿಯಾದ ದೇವನು ಭಕ್ತರನ್ನೆಂದಿಗೂ ಅಲಕ್ಷ ಮಾಡನು !

**ಮಹಾಭಕ್ತ ಪ್ರಲ್ಹಾದ ಹಾ ಕಷ್ಟವೀಲಾ ।**
**ಮ್ಹಣೋನೀ ತಯಾಕಾರಣೇ ಸಿಂಹ ಝಾಲಾ ॥**
**ನಯೇ ಜ್ವಾಳ ವೀಶಾಳ ಸನ್ನೀಧ ಕೋಣೀ ।**
**ನುಪೇಕ್ಷೀ ಕದಾ ದೇವ ಭಕ್ತಾಭಿಮಾನೀ ॥೨೧॥**

---

೬. ಬ್ರಹ್ಮದೇವನು ಒಂದು ಕಲ್ಪದ ಕೊನೆಗೆ ನಿದ್ರಿಸಿರಲು, ಹಯಗ್ರೀವನೆಂಬ ದೈತ್ಯನು ವೇದಗಳನ್ನು ತುಡುಗು ಮಾಡಿ ಒಯ್ದನು ! ಬ್ರಹ್ಮದೇವನು ಎಚ್ಚೆತ್ತ ಮೇಲೆ ವೇದಗಳನ್ನು ತಿರುಗಿ ಪಡೆಯುವದಕ್ಕಾಗಿ ವಿಷ್ಣುವಿನ ಆರಾಧನೆ ಮಾಡಿದನು. ಆಗ ವಿಷ್ಣುವು ಪ್ರಸನ್ನನಾಗಿ ಮೀನರೂಪ ಧಾರಣ ಮಾಡಿ, ಸಮುದ್ರದಲ್ಲಿ ಅಡಗಿಕೊಂಡು ಕುಳಿತ ಅಸುರನನ್ನು ವಧಿಸಿದನು. ಇದೇ ವಿಷ್ಣುವಿನ ದಶಾವತಾರಗಳಲ್ಲಿ ೧ ನೇಯದಾದ ಮತ್ಸ್ಯಾವತಾರವು.

೭. ದೇವ-ದೈತ್ಯರು ಕೂಡಿಕೊಂಡು ಸಮುದ್ರವನ್ನು ಕಡೆಯುತ್ತಿರಲು, ಅವರು ಕಡಗೋಲಾಗಿ ಮಾಡಿದ ಭಾರವಾದ ಮೇರು ಪರ್ವತವು ರಸಾತಳಕ್ಕೆ ಇಳಿಯಹತ್ತಿತು ! ದೇವತೆಗಳು ವಿಷ್ಣುವನ್ನು ಪ್ರಾರ್ಥಿಸಲು ಅವನು ಆವೆಯಾಗಿ ಮೇರುವಿಗೆ ಆಧಾರ ಕೊಟ್ಟು ಸಮುದ್ರ ಮಂಥನದ ಕಾರ್ಯ ನಡೆಸಲು ಆಸ್ಪದ ಮಾಡಿದನು ! ಇದೇ ದಶಾವತಾರದಲ್ಲಿಯ ೨ನೇಯ ಕೂರ್ಮಾವತಾರವು.

೮. ಹಿರಣ್ಯಾಕ್ಷನೆಂಬ ದೈತ್ಯನು ಜಗತ್ತೆಲ್ಲವನ್ನು ಗೆದ್ದು ಜನರನ್ನು ಹಿಂಸಿಸುತ್ತಿರಲು ವಿಷ್ಣುವು ಕನಿಷ್ಟ ಪ್ರಾಣಿಯಾದ ಹಂದಿಯ ರೂಪತಾಳಿ ರಸಾತಳಕ್ಕೆ ಹೋಗುತ್ತಿದ್ದ ಪೃಥ್ವಿಯನ್ನು ಕೋರೆಗಳ ಮೇಲೆ ಧರಿಸಿ ರಕ್ಷಿಸಿ, ಹಿರಣ್ಯಾಕ್ಷನನ್ನು ಸಂಹರಿಸಿದನು. ಇದೇ ದಶಾವತಾರದಲ್ಲಿಯ ೩ನೇಯ ವರಾಹಾವತಾರವು.

ಶ್ರೇಷ್ಠ ಭಕ್ತನಾದ ಪ್ರಲ್ಹಾದನು ಹಿಂಸೆಗೀಡಾಗಿರಲು, ಅವನ ಸಲುವಾಗಿ ನರಸಿಂಹನಾದನು ![೯] ಆ ಕೆಂಡಕಾರುವ ಭಯಂಕರ ರೂಪದೆದುರಿಗೆ ಬರಲಿಕ್ಕೆ ಪ್ರಲ್ಹಾದನ ಹೊರತು ಯಾರಿಗೂ ಧೈರ್ಯವಾಗಲಿಲ್ಲ !! ಇಂತಹ ಭಕ್ತ ಕೈವಾರಿಯಾದ ದೇವನು ತನ್ನ ಭಕ್ತರನ್ನೆಂದಿಗೂ ಅಲಕ್ಷ ಮಾಡನು !

---

೯. ಅಸುರನಾದ ಹಿರಣ್ಯಕಶ್ಯಪುವು ತಪಸ್ಸು ಮಾಡಿ ಬ್ರಹ್ಮದೇವನಿಂದ ''ತನಗೆ ಮನೆಯೊಳಗೆ ಮರಣ ಬರಬಾರದು, ಮನೆಯ ಹೊರಗೆ ಮರಣ ಬರಬಾರದು, ಹಗಲಿನಲ್ಲಿ ಮರಣ ಬರಬಾರದು, ರಾತ್ರಿಯಲ್ಲಿ ಮರಣ ಬರಬಾರದು; ಅದರಂತೆ ಮನುಷ್ಯನಿಂದಲೂ ಅಥವಾ ಪಶುವಿನಿಂದಲೂ ಮರಣವಾಗಬಾರದು. ಯಾವ ಆಯುಧದಿಂದಲೂ ಸಾಯಬಾರದು'' ಮುಂತಾಗಿ ವರ ಪಡೆದನು. ಮತ್ತು ಅಜೇಯನಾಗಿ ಮಾನವ-ದೇವತೆಗಳೆಲ್ಲರಿಗೆ ಹಿಂಸೆಕೊಡಹತ್ತಿದನು !

ಹಿರಣ್ಯ ಕಶ್ಯಪುವಿನ ಸಾಧ್ವಿಯಾದ ಪತ್ನಿಯ ಹೊಟ್ಟೆಯಲ್ಲಿ ಮಹಾ ಭಕ್ತಪ್ರಲ್ಹಾದನು ಜನಿಸಿದನು ! ಹಿರಣ್ಯಕಶ್ಯಪಾಸುರನು ವಿಷ್ಣುವಿನ ದ್ವೇಷಿಯಾಗಿದ್ದು ಪ್ರಲ್ಹಾದನಿಗಾದರೂ ವಿಷ್ಣುಭಕ್ತಿಯಿಂದ ಪರಾವೃತ್ತ ಮಾಡುವದಕ್ಕಾಗಿ ಅನೇಕ ರೀತಿ ತಿಳಿ ಹೇಳಿದನು. ಆದರೆ ಭಕ್ತ ಪ್ರಲ್ಹಾದನು ತಂದೆಯ ಮಾತು ಕೇಳದೆ ತಿರುಗಿ ಅವನಿಗೆ ಹರಿಭಕ್ತಿ ಮಾಡೆಂದು ಉಪದೇಶಿಸುತ್ತಿದ್ದನು ! ಇದರಿಂದಾಗಿ ಹಿರಣ್ಯ ಕಶ್ಯಪನು ಕ್ರುದ್ಧನಾಗಿ ಕೊನೆಗೆ ಪ್ರಲ್ಹಾದನನ್ನು ಕೊಲ್ಲಬೇಕೆಂದು ಬೆಂಕಿಯಲ್ಲಿ ಹಾಕುವದು, ಹಾವು ಕಡಿಸುವದು, ವಿಷ ಕುಡಿಸುವದು ಮೊದಲಾದ ಎಲ್ಲ ಉಪಾಯಗಳನ್ನು ಮಾಡಿ ಅಯಶಸ್ವಿಯಾದನು. ಆಗ್ಗೆ ಅವನು ಸಂತಾಪಯುಕ್ತನಾಗಿ ''ಪ್ರಲ್ಹಾದಾ, ಆ ನಿನ್ನ ಹರಿಯು ಇರುವನಾದರೂ ಎಲ್ಲಿ ? ತೋರಿಸು!''

ಪ್ರಲ್ಹಾದ - ''ಶ್ರೀ ಹರಿಯು ಸ್ಥಿರಚರವೆಲ್ಲವನ್ನೂ ವ್ಯಾಪಿಸಿರುವನು ಅವನು ಇಲ್ಲದ ಸ್ಥಳವೇ ಇರುವದಿಲ್ಲ''.

ಹಿರಣ್ಯಕಶ್ಯಪು - ಏನು ಬೊಗಳುವಿ ? ನಿನ್ನ ಶ್ರೀ ಹರಿಯು ಈ ಕಂಬದಲ್ಲಿರುವನೇ ? ಪ್ರಲ್ಹಾದ - ಓಹೋ ! ಇದ್ದೇ ಇರುವನು, ಹಿರಣ್ಯಕಶ್ಯಪು - ನಿನ್ನ ಅಂಜುಬುರುಕ ಹರಿಯು ಕಂಬದಲ್ಲಿ ಅಡಗಿದ್ದರೆ, ಇಗೋ ಕಂಬವನ್ನು ಕಾಲಿನಿಂದ ಒದೆಯುವೆನು, ಅವನು ಹೊರಗೆ ಬರಲಿ! ಹೀಗೆಂದು ಬಲವಾಗಿ ಕಂಬವನ್ನು ಒದೆಯಲು ಸಿಡಿಲಿನಂತೆ ಸಪ್ಪಳವಾಗಿ ಭಯಂಕರ ಆಕಾರದ ನರಸಿಂಹನು ಪ್ರಕಟವಾದನು ! ನರ ಶರೀರ - ಸಿಂಹದ ತಲೆಯುಳ್ಳ ನರಸಿಂಹನು ಗರ್ಜಿಸುತ್ತಾ ಸಿಂಹ ನಖದಿಂದ ಹೊಸ್ತಿಲ ಮೇಲೆ ಕುಳಿತು ಹಿರಣ್ಯ ಕಶ್ಯಪುವಿನ ವಧೆ ಮಾಡಿದನು ! ಆಗ ಸಂಧ್ಯಾ ಸಮಯವಿದ್ದು ಬ್ರಹ್ಮ ದೇವನ ವರಕ್ಕಾದರೂ ಬಾಧೆ ಬರಲಿಲ್ಲಾ.



**ಕೃಪಾ ಭಾಕಿತಾ ಚಾಹಲಾ ವಜ್ರಪಾಣೀ ।**
**ತಯಾಕಾರಣೇ ವಾಮನೂ ಚಕ್ರಪಾಣೀ ॥**
**ದ್ವಿಜಾಕಾರಣೇ ಭಾರ್ಗವ ಚಾಪಪಾಣೀ ।**
**ನುಪೇಕ್ಷೀ ಕದಾ ದೇವ ಭಕ್ತಾಭಿಮಾನೀ** ॥೧೨೨॥

ಇಂದ್ರನು ದಯೆ ಯಾಚಿಸಲು ಅವನಿಗಾಗಿ ವಿಷ್ಣುವು ವಾಮನನಾದನು[೧೦] ಹಾಗೂ ಬ್ರಾಹ್ಮಣರ ರಕ್ಷಣೆಗಾಗಿ ಶಾರ್ಜಪಾಣಿಯು ಪರಶುರಾಮ ಅವತಾರ

---

೧೦. ತ್ರೇತಾಯುಗದಲ್ಲಿ ಪ್ರಲ್ಹಾದನ ಪೌತ್ರನಾದ ಬಲಿರಾಜನು ಇಂದ್ರಪದವಿಯ ಪ್ರಾಪ್ತಿಗಾಗಿ ೧೦೦ ಯಜ್ಞ ಜರುಗಿಸುವ ಸಂಕಲ್ಪ ಮಾಡಿ, ಯಜ್ಞಕಾರ್ಯ ಪ್ರಾರಂಭಿಸಿದನು. ಅವನ ಯಜ್ಞಗಳು ಭರದಿಂದ ಸಾಗಿರಲು ಇಂದ್ರನಿಗೆ ಚಿಂತೆಯುಂಟಾಗಿ ವಿಷ್ಣುವಿಗೆ ಮೊರೆಹೋದನು. ಆಗ ವಿಷ್ಣುವು ಕಶ್ಯಪ - ಅದಿತಿಯರ ಹೊಟ್ಟೆಯಲ್ಲಿ ವಾಮನನಾಗಿ ಜನಿಸಿ ಬಲಿಯ ಮಹತ್ವಾಕಾಂಕ್ಷೆಯನ್ನು ನಿಷ್ಫಲಗೊಳಿಸಿದನು. ಬಲಿರಾಜನು ೯೯ ಯಜ್ಞಗಳನ್ನು ಮುಗಿಸಿ ಕೊನೆಯದನ್ನು ಸಮಾಪ್ತಗೊಳಿಸುವ ಕಾಲಕ್ಕೆ ವಾಮನ ವಟುವು ಬಂದು ರಾಜನಿಗೆ ೩ ಪಾದದ ಅಳತೆಯಷ್ಟು ಭೂಮಿಯನ್ನು ದಾನ ಬೇಡಿದನು ! ದಾನಶೂರನಾದ ಬಲಿಯು ಇದು ಬಹಳ ಸ್ವಲ್ಪವೆಂದು ಅನ್ನುತ್ತ ದಾನದ ಸಂಕಲ್ಪೋದಕ ಬಿಡಲು ಸಿದ್ಧನಾದನು. ಆದರೆ ವಿಷ್ಣುವಿನ ಕಪಟವನ್ನರಿತ ದೈತ್ಯಗುರು ಶುಕ್ರಾಚಾರ್ಯರು ಹಾಗೆ ವಚನ ಕೊಡಬೇಡವೆಂದು ಎಷ್ಟು ಎಷ್ಟು ಹೇಳಿದರೂ ಬಲಿಯು ಕೇಳದಾಗಲು, ಅವರು ಸೂಕ್ಷ್ಮರೂಪದಿಂದ ಸಂಕಲ್ಪೋದಕದ ಗಿಂಡಿಯ ಸೊಂಡಿಯಲ್ಲಿ ಪ್ರವೇಶಿಸಿ ನೀರಿಗೆ ಅಡ್ಡವಾಗಿ ಕುಳಿತರು ! ಬಲಿಯು ಕಡ್ಡಿಯಿಂದ ಸೊಂಡಿಯೊಳಗೆ ಚುಚ್ಚಲು ಅದು ಶುಕ್ರಾಚಾರ್ಯರ ಒಂದು ಕಣ್ಣಿಗೆ ತಗಲಿ, ಅದು ಕುರುಡಾಯಿತು !! ಇರಲಿ, ಬಲಿರಾಜನು ೩ ಪಾದ ಭೂಮಿಯನ್ನು ಕೊಡುವೆನೆಂದು ಉದಕ ಬಿಡುತ್ತಲೇ ವಾಮನನು ವಿರಾಟರೂಪ ಧಾರಣ ಮಾಡಿ ಒಂದು ಪಾದದಿಂದ ಪೃಥ್ವಿಯನ್ನೂ ೨ ನೇಯ ಪಾದದಿಂದ ಸ್ವರ್ಗವನ್ನೂ ವ್ಯಾಪಿಸಿದನು. ಮತ್ತು ''೩ ನೇಯ ಪಾದಕ್ಕೆ ಭೂಮಿ ಎಲ್ಲಿರುವದು, ನನ್ನ ಪಾದವೆಲ್ಲಿಡಲಿ?'' ಎಂದು ಕೇಳಲು, ಬಲಿಯು ತನ್ನ ಮಸ್ತಕದ ಮೇಲೆ ಪಾದವಿಡಲು ಪ್ರಾರ್ಥಿಸಿ ತಲೆಬಾಗಿ ಕುಳಿತನು !

ವಿರಾಟರೂಪೀ ವಾಮನನು ಬಲಿ ಚಕ್ರವರ್ತಿಯನ್ನು ತನ್ನ ಪಾದದಿಂದ ಪಾತಾಳಕ್ಕೆ ಮೆಟ್ಟಿ ಇಂದ್ರನನ್ನು ಭಯಮುಕ್ತ ಮಾಡಿದನು. ಹೀಗೆ ಅವತಾರ ಕಾರ್ಯ ಮಾಡಿದರೂ

(ಮುಂದಿನ ಪುಟಕ್ಕೆ)

ಧರಿಸಿದನು.[೧೧] ಇಂತಹ ಭಕಕ್ತೈವಾರಿಯಾದ ದೇವನು ತನ್ನ ಭಕ್ತರನ್ನೆಂದಿಗೂ ಅಲಕ್ಷ ಮಾಡನು !

---

ಶ್ರೀ ಹರಿಯು ಬಲಿರಾಜನ ಶೀಲ-ದಾನಶೂರತೆ, ಭಕ್ತಿಗೆ ಮೆಚ್ಚಿ ಅವನಿಗೆ ಪಾತಾಳದ ರಾಜ್ಯವನ್ನು ಕೊಟ್ಟು, ಮುಂದಿನ ಮನ್ವಂತರದಲ್ಲಿ ಇಂದ್ರಪದವಿಯನ್ನು ಆಶ್ವಾಸಿಸಿದ್ದಲ್ಲದೆ ''ನಾನು ಯಾವಾಗಲೂ ನಿನ್ನ ಬಾಗಿಲ ಕಾಯುತ್ತಿರುವೆ'' ನೆಂದು ವರ ಕೊಟ್ಟನು !

೧೧. ಒಂದು ಕಾಲಕ್ಕೆ ಕ್ಷತ್ರಿಯರು ಉನ್ಮತ್ತರಾಗಿ ಬ್ರಾಹ್ಮಣರನ್ನು ಗಾಸಿಗೊಳಿಸುತ್ತಿರಲು ವಿಷ್ಣುವು ಜಮದಗ್ನಿ - ರೇಣುಕಾ ಇವರಲ್ಲಿ ಪರಶುರಾಮನಾಗಿ ಅವತರಿಸಿ ಕ್ಷತ್ರಿಯರನ್ನು ನಾಶ ಮಾಡಿದನು. ಜಮದಗ್ನಿ ಋಷಿಯ ಹತ್ತಿರ ಕಾಮಧೇನುವಿದ್ದು ಅವರು ಅದರಿಂದ ಸಹಜವೇ ಅತಿಥಿಗಳ ಉತ್ಕೃಷ್ಟ ಸತ್ಕಾರ ಮಾಡುತ್ತಿದ್ದರು ! ಒಮ್ಮೆ ಆ ದೇಶದ ಕಾರ್ತವೀರ್ಯನೆಂಬ ಕ್ಷತ್ರಿಯ ರಾಜನು ಜಮದಗ್ನಿಯ ಆಶ್ರಮದಲ್ಲಿ ಪರಿವಾರದೊಂದಿಗೆ ರಾಜೋಚಿತ ಭೋಜನ ಮಾಡಿ ಸಂತುಷ್ಟನಾದನು. ಆದರೆ ಅವನು ಅಲ್ಲಿಯ ಕಾಮಧೇನುವಿನ ವೃತ್ತಾಂತವನ್ನು ಅರಿತು, ದುಷ್ಟಬುದ್ಧಿಯಿಂದ ಅದನ್ನು ಹರಣ ಮಾಡಿಕೊಂಡು ಹೋದನು. ಆಗ್ಗೆ ಪರಶುರಾಮನು ಆಶ್ರಮದಲ್ಲಿರಲಿಲ್ಲ.

ಕಾಮಧೇನುವನ್ನು ಬಲಾತ್ಕಾರವಾಗಿ ಒಯ್ದ ಮೇಲೆ ಪರಶುರಾಮನು ಆಶ್ರಮಕ್ಕೆ ಬಂದು ಎಲ್ಲ ವೃತ್ತಾಂತವನ್ನು ಕೇಳಿ ಕೋಪಾವಿಷ್ಟನಾದನು ಮತ್ತು ಕಾರ್ತವೀರ್ಯನ ರಾಜಧಾನಿಯಾದ ಮಾಹಿಷ್ಮತಿಗೆ ಹೋಗಿ, ರಾಜನನ್ನು ತನ್ನ ಕೊಡಲಿಯಿಂದ ಸಂಹರಿಸಿ ಕಾಮಧೇನುವನ್ನು ತಿರುಗಿ ತಕ್ಕೊಂಡು ಬಂದನು ! ಆದರೆ ಕಾರ್ತವೀರ್ಯನ ಮಕ್ಕಳು ಅದರ ಸೇಡು ತೀರಿಸಿಕೊಳ್ಳಲು, ಪರಶುರಾಮನಿಲ್ಲದ ವೇಳೆಯಲ್ಲಿ ಆಶ್ರಮಕ್ಕೆ ಹೋಗಿ ಜಮದಗ್ನಿಯ ವಧೆ ಮಾಡಿದರು !!

ಪರಶುರಾಮನು ಪಿತೃವಧೆಯನ್ನು ಕಂಡು ಕೋಪೋದ್ರಿಕ್ತನಾಗಿ ಕ್ಷತ್ರಿಯರ ವಂಶವನ್ನೇ ನಾಶಗೊಳಿಸುವ ಪ್ರತಿಜ್ಞೆ ಮಾಡಿದನು. ಹಾಗೂ ಮೊದಲು ಕಾರ್ತವೀರ್ಯನ ಮ್ಕಳನ್ನು ಸಂಹರಿಸಿ, ೨೧ ಸಾರೆ ಕ್ಷತ್ರಿಯರೊಡನೆ ಯುದ್ಧ ಮಾಡಿ ಅನೇಕರನ್ನು ಕೊಂದನು !

ಮುಂದೆ ಪರಶುರಾಮನು, ಸೀತಾಸ್ವಯಂವರ ಮಾಡಿಕೊಂಡು ಮಹೋತ್ಸಾಹದಿಂದ ಬರುತ್ತಿದ್ದ ದಾಶರಥೀ ರಾಮನ ಮೇಲೆ ಏರಿ ಹೋದನು. ಆದರೆ ಆ ಸಮಯಕ್ಕೆ ಭಗವದಿಚ್ಛೆಯಿಂದಲೇ ಪರಶುರಾಮನಲ್ಲಿಯ ವಿಷ್ಣುತೇಜವು ಹೊರಹೊರಟು ಸೀತಾಪತಿ ರಾಮನಲ್ಲಿ ಪ್ರವೇಶಿಸಿದ್ದರಿಂದ ಪರಶುರಾಮನು ರಾಮನಿಂದ ಸೋತನು ! ಅಲ್ಲಿಗೆ ಪರಶುರಾಮನ ಅವತಾರದ ಕಾರ್ಯ ಮುಗಿಯಿತು.



**ಅಹಿಲ್ಯೇ ಸತೀಲಾಗಿ ಆರಣ್ಯಪಂಥೇ ।**
**ಕುಡಾವಾ ಪುಢೇ ದೇವ ಬಂದೀ ತಯಾತೇ ॥**
**ಬಳೇ ಸೋಡಿತಾ ಘಾವ ಘಾಲೀ ನಿಶಾಣೆ ।**
**ನುಪೇಕ್ಷೀ ಕದಾ ದೇವ ಭಕ್ತಾಭಿಮಾನೀ** ॥೧೨೩॥

ರಾಮನು* ವನವಾಸ ಕಾಲಕ್ಕೆ ಅರಣ್ಯದಲ್ಲಿ ಸಂಚರಿಸುತ್ತಿರುವಾಗ, ಶಿಲೆಯಾಗಿ ಬಿದ್ದ ಅಹಿಲ್ಯೆಯನ್ನು ಉದ್ಧರಿಸಿದನು. ಹಾಗೂ ರಾವಣನ ಸೆರೆಯಲ್ಲಿ ಬಿದ್ದ ದೇವತೆಗಳನ್ನು ಬಿಡಿಸಿ ಜಯಭೇರಿ ಹೊಡೆದನು ! ಇಂತಹ ಭಕ್ತ ಕೈವಾರಿಯಾದ ದೇವನು ತನ್ನ ಭಕ್ತರನ್ನೆಂದಿಗೂ ಅಲಕ್ಷ ಮಾಡನು !

**ತಯೇ ದ್ರೌಪದೀಕಾರಣೇ ಲಾಗವೇಗೇ ।**
**ತ್ವರೇ ಧಾವತೂ ಸರ್ವ ಸಾಂಡೂನಿ ಮಾಗೇ ॥**
**ಕಲೀಲಾಗಿ ಝಾಲಾ ಅಸೇ ಬೌದ್ಧ ಮೌನೀ ।**
**ನುಪೇಕ್ಷೀ ಕದಾ ದೇವ ಭಕ್ತಾಭಿಮಾನೀ** ॥೧೨೪॥

ಕೃಷ್ಣನು* ದ್ರೌಪದಿಯ ಮಾನರಕ್ಷಣೆಯ ಸಲುವಾಗಿ ಎಲ್ಲವನ್ನೂ ಹಿಂದೊಗೆದು ವೇಗದಿಂದ ಓಡಿಬಂದನು ಹಾಗೂ ಕಲಿಯುಗದಲ್ಲಿ ಮೌನವಹಿಸಿದ ಬುದ್ಧನಾದನು ! ಇಂತಹ ಭಕ್ತ ಕೈವಾರಿಯಾದ ದೇವನು ತನ್ನ ಭಕ್ತರನ್ನೆಂದಿಗೂ ಅಲಕ್ಷ ಮಾಡನು.

**ಅನಾಥಾ ದಿನಾ ಕಾರಣೇ ಜನ್ಮತಾಹೇ ।**
**ಕಲಂಕೀ ಪುಢೇ ದೇವ ಹೋಣಾರ ಆಹೇ ॥**
**ಜಯಾ ವರ್ಣಿತಾ ಶೀಣಲೀ ವೇದವಾಣೀ ।**
**ನುಪೇಕ್ಷಿ ಕದಾ ದೇವ ಭಕ್ತಾಭಿಮಾನೀ** ॥೧೨೫॥

ಹೀಗೆ ಭಗವಂತನು ದೀನ ಅಸಹಾಯ ಜನರಿಗಾಗಿ ಅವತಾರ ತಕ್ಕೊಳ್ಳುವನು ಮತ್ತು ಮುಂದೆಯಾದರೂ ಕಲ್ಕಿಯು ೧೨ ಹುಟ್ಟಿ ಬರುವವನಿದ್ದಾನೆ ! ಅವನನ್ನು ವರ್ಣಿಸಹೋಗಿ ವೇದಗಳು ದಣಿದವು !

---

★ ಚರಿತ್ರೆಯು ಸರ್ವಶ್ರುತವಿದ್ದುದರಿಂದ ಇಲ್ಲಿ ಕಥಿಸಿಲ್ಲ.

೧೨. ಮುಂದೆ ಶಂಬಲ ಗ್ರಾಮದಲ್ಲಿ ವಿಷ್ಣುಯಶ ಬ್ರಾಹ್ಮಣನ ಮನೆಯಲ್ಲಿ ಈ ಅವತಾರವಾಗುವದೆಂದು ಭಾಗವತದಲ್ಲಿ ಹೇಳಿದೆ.

ಇಂತಹ ಭಕಕ್ತೈವಾರಿಯಾದ ದೇವನು ತನ್ನ ಭಕ್ತರನ್ನೆಂದಿಗೂ ಅಲಕ್ಷ ಮಾಡನು.

**ಜನಾಕಾರಣೀ ದೇವ ಲೀಲಾವತಾರೀ ।**
**ಬಹುತಾ ಪರೀ ಆದರೆ ವೇಷಧಾರೀ ॥**
**ತಯಾ ನೇಣತೀ ತೇ ಜನ ಪಾಪರೂಪೀ ।**
**ದುರಾತ್ಮೇ ಮಹಾನಷ್ಟ ಚಾಂಡಾಳ ಪಾಪೀ ॥೧೨೬॥**

ಜನತೆಯ ಸಲುವಾಗಿ ಪರಮಾತ್ಮನು ಅವತಾರಲೀಲೆ ಮಾಡುವನು, ಪ್ರೇಮದಿಂದ ತರತರ ರೂಪ ತಾಳುವನು ! ಇಂತಹ ದಯಾಳು ದೇವನನ್ನು ಅರಿಯದ ಜನರು ಪಾಪಿಗಳು, ದುಷ್ಟರು, ನೀಚರು, ಚಾಂಡಾಲರು ಆಗಿದ್ದಾರೆಂದು ತಿಳಿಯಬೇಕು !!

**ಜಗೀ ಧನ್ಯ ತೋ ರಾಮಸೂಖೇ ನಿವಾಲಾ ।**
**ಕಥಾ ಐಕತಾ ಸರ್ವ ತಲ್ಲೀನ ಝಾಲಾ ॥**
**ದೇಹೇ ಭಾವನಾ ರಾಮಬೋಧೇ ಉಡಾಲೀ ।**
**ಮನೋವಾಸನಾ ರಾಮರೂಪೀ ಬುಡಾಲೀ ॥೧೨೭॥**

ರಾಮ ಕಥೆಯನ್ನು ಕೇಳುವದರಲ್ಲಿ ತನ್ಮಯನಾಗಿ ರಾಮಸುಖದಿಂದ ತೃಪ್ತಿ ಪಡೆದವನು ಜಗತ್ತಿನಲ್ಲಿ ಧನ್ಯನಿದ್ದಾನೆ ! ರಾಮನ ಅನುಭವದಿಂದ ಅವನ ದೇಹದ ಅರಿವು ಹಾರಿಹೋಗಿ, ಮನಸ್ಸಿನ ಸೂಕ್ಷ್ಮ ವಾಸನೆಯು ರಾಮಸ್ವರೂಪದಲ್ಲಿ ಮುಳುಗಿಬಿಟ್ಟಿರುವದು !

**ಮನಾ ವಾಸನಾ ವಾಸುದೇವೀ ವಸೋದೇ ।**
**ಮನಾ ಕಾಮನಾ ಕಾಮಸಂಗೀ ನಸೋದೇ ॥**
**ಮನಾ ಕಲ್ಪನಾ ವಾಉಗೀ ತೇ ನ ಕೀಜೇ ।**
**ಮನಾ ಸಜ್ಜನಾ, ಸಜ್ಜನೀ ವಸ್ತಿ ಕೀಜೆ ॥೧೨೮॥**

ಮನವೇ, ವಾಸುದೇವನಲ್ಲಿಯೇ ನಿನ್ನ ಆಶೆಯಿರಲಿ, ಕಾಮಭೋಗಗಳಲ್ಲಿ ಇಚ್ಛೆಯಿಡಬೇಡ ! ಸಂಭಾವಿತ ಮನವೇ, ನಿರರ್ಥಕವಾದ ವಿಷಯ ಕಲ್ಪನೆ ಮಾಡುವದು ಬಿಟ್ಟು ಸಂತರೊಡನೆಯೇ ಸಹವಾಸ ಮಾಡು.



**ಗತೀಕಾರಣೇ ಸಂಗತೀ ಸಜ್ಜನಾಚೀ ।**
**ಮತೀ ಪಾಲಟೀ ಸೂಮತೀ ದುರ್ಜನಾಚೀ ॥**
**ರತೀನಾಯಿಕೇಚಾ ಪತೀ ನಷ್ಟ ಆಹೇ ।**
**ಮ್ಹಣೋನೀ ಮನಾತೀತ ಹೋವೂನೀ ರಾಹೇ ॥೧೨೯॥**

ಸತ್ಸಂಗತಿಯಿಂದ ದುಷ್ಟ ಜನರ ಕುಬುದ್ಧಿ ಸಹ ಪರಿವರ್ತನೆಯಾಗುವದೆಂದ ಮೇಲೆ ತನ್ನ ಉದ್ಧಾರಕ್ಕಾಗಿ ಸಂತರ ಸಹವಾಸ ಅತ್ಯವಶ್ಯವು. ಅಲ್ಲದೆ ಕಾಮನು ದುರಾತ್ಮನಿದ್ದುದರಿಂದ ಅವನಿಗೆ ಆಸ್ಪದ ಸಿಗದಂತೆ ನಿರ್ವಿಕಲ್ಪ ಸ್ಥಿತಿಯಿಂದ ಇರುತ್ತಿರು!

**ಮನಾ ಅಲ್ಪ ಸಂಕಲ್ಪ ತೋಹೀನಸಾವಾ ।**
**ಮನಾ ಸತ್ಯ ಸಂಕಲ್ಪ ಚಿತ್ತೀ ವಸಾವಾ ॥**
**ಜನೀ ಜಲ್ಪ ವೀಕಲ್ಪ ತೋಹೀ ತ್ಯಜವಾ ।**
**ರಮಾಕಾಂತ ಏಕಾಂತ ಕಾಳೀ ಭಜಾವಾ ॥೧೩೦॥**

ಮನವೇ, ಸ್ವಲ್ಪವೂ ಸಂಕಲ್ಪವಿಕಲ್ಪ ಮಾಡದೆ, ಅಂತಃಕರಣದಲ್ಲಿ ಸತ್ಯವಿಚಾರಧರಿಸು. ಜನರಲ್ಲಿಯ ಕುತ್ಸಿತ ಬಡಬಡಿಕೆಯನ್ನಾದರೂ ತ್ಯಜಿಸಿ, ಏಕಾಂತ ಸಮಯದಲ್ಲಿ ರಾಮನ ಭಜನೆ ಮಾಡು.

**ಭಜಾಯಾ ಜನೀ ಪಾಹತಾ ರಾಮ ಏಕೂ ।**
**ಕರೀ ಬಾಣ ಏಕೂ ಮುಖೀ ಶಬ್ದ ಏಕೂ ॥**
**ಕ್ರಿಯಾ ಪಾಹತಾ ಉದ್ಧರೀ ಸರ್ವ ಲೋಕೂ**
**ಧರಾ ಜಾನಕೀನಾಯಕಾಚಾ ವಿವೇಕೂ ॥೧೩೧॥**

'ಏಕವಚನೀ, ಏಕಬಾಣೀ' ನಡೆಯಿಂದ ಅದ್ವಿತೀಯನಾದ ರಾಮಚಂದ್ರನ ಭಜನೆ ಮಾಡಿರಿ! ಅವನ ಚರಿತ್ರದ ಮನನದಿಂದಲೇ ಎಲ್ಲ ಜನರೂ ಕೃತಾರ್ಥರಾಗುವರು! ಅಂತಹ ಸೀತಾಪತಿಯ ಆಚರಣೆಯನ್ನು ಅನುಸರಿಸಿರಿ.

**ವಿಚಾರೂನಿ ಬೋಲೇ ವಿವಂಚೂನಿ ಚಾಲೇ ।**
**ತಯಾಚೇನಿ ಸಂತಪ್ತ ತೇಹೀ ನಿವಾಲೇ ॥**
**ಬರೇ ಶೋಧಿಲ್ಯಾವೀಣ ಬೋಲೋ ನಕೋಹೋ ।**
**ಜನೀ ಚಾಲಣೇ ಶುದ್ಧ ನೇಮಸ್ತ ರಾಹೋ ॥೧೩೨॥**

ವಿಚಾರಮಾಡಿ ಮಾತಾಡುವ ಹಾಗೂ ಹಿತಾಹಿತ ನೋಡಿ ನಡೆಯುವ ವಿವೇಕಿಯಿಂದೆ ತ್ರಿವಿಧ ತಾಪದಿಂದ ಬೆಂದವರೂ ಶಾಂತರಾಗುವರು ! ಅದಕ್ಕಾಗಿ ಅಪ್ಪಗಳಿರಾ, ನೀವಾದರೂ ಪೂರ್ಣ ವಿಚಾರ ಮಾಡದೇ ಏನೂ ಮಾತಾಡ ಬೇಡಿರಿ ಹಾಗೂ ನಿಮ್ಮ ನಡತೆಯಾದರೂ ಶುದ್ಧವೂ ನಿಯಮಿತವೂ ಆಗಿರಲಿ !

ಹರೀಭಕ್ತ ವೀರಕ್ತ ವಿಜ್ಞಾನರಾಸೀ ।
ಜೇಣೇ ಮಾನಸೀ ಸ್ಥಾಪಿಲೇ ನಿಶ್ಚಯಾಸೀ ॥
ತಯಾ ದರ್ಶನೇ ಸ್ಪರ್ಶನೇ ಪುಣ್ಯ ಜೋಡೇ ।
ತಯಾ ಭಾಷಣೇ ನಷ್ಟ ಸಂದೇಹ ಮೋಡೇ ॥೧೩೩॥

ವೈರಾಗ್ಯವಂತನು, ಪೂರ್ಣ ಅನುಭವಿಯು, ಮನದಲ್ಲಿ ನಿಶ್ಚಯವನ್ನು ನಲೆಗೊಳಿಸಿದವನೂ ಆದ ರಾಮಭಕ್ತನ ದರ್ಶನ-ಸ್ಪರ್ಶನದಿಂದ ಪುಣ್ಯ ಲಭಿಸುವದು ಹಾಗೂ ಅವನ ಸಂಭಾಷಣೆಯಿಂದ ಖೊಟ್ಟಿ ಸಂಶಯ ಕಡಿಯುವದು.

ನಸೇ ಗರ್ವ ಅಂಗೀ ಸದಾ ವೀತರಾಗೀ ।
ಕ್ಷಮಾ ಶಾಂತಿ ಭೋಗೀ ದಯಾದಕ್ಷ ಯೋಗೀ ।।
ನಸೇ ಲೋಭ ನಾ ಕ್ಷೋಭ ನಾ ದೈನ್ಯವಾಣಾ ।
ಇಹಿ ಲಕ್ಷಣೇ ಜಾಣಿಜೇ ಯೋಗಿರಾಣಾ ॥೧೩೪॥

ಗರ್ವರಹಿತನು, ಅನಾಸಕ್ತನು, ಕ್ಷಮೆ-ಶಾಂತಿಯುಕ್ತನು, ದಯಾಪರನು; ಧನಾಶೆಯಾಗಲಿ, ಸಂತಾಪವಾಗಲಿ, ದೀನತೆಯಾಗಲಿ ಇಲ್ಲದವನು ಆಗಿರುವ ಈ ಲಕ್ಷಣಗಳಿಂದ ಯೋಗಿರಾಜನನ್ನು ಗುರುತಿಸಿರಿ.

ಧರೀರೇ ಮನಾ ಸಂಗತೀ ಸಜ್ಜನಾಚೀ ।
ಜೇಣೇ ವೃತ್ತಿ ಹೇ ಪಾಲಟೇ ದುರ್ಜನಾಚೀ ॥
ಬಳೇ ಭಾವ ಸದ್ಬುದ್ಧಿ ಸನ್ಮಾರ್ಗ ಲಾಗೇ ।
ಮಹಾ ಕ್ರೂರ ತೋ ಕಾಳ ವಿಕ್ರಾಳ ಭಂಗೇ ॥೧೩೫॥

ಎಲೋ ಮನವೇ, ದುಷ್ಟನ ಸ್ವಭಾವವನ್ನು ಪರಿವರ್ತನೆ ಮಾಡಬಲ್ಲ ಸತ್ಸಂಗತಿ ಹಿಡಿಯಪ್ಪಾ ! ಸತ್ಸಂಗತಿಯಿಂದ ಬಲುಮೆಯಾಗಿಯೇ ಭಕ್ತಿ-ಜ್ಞಾನದ ಶ್ರೇಷ್ಠ ದಾರಿ ದೊರೆತು, ಮಹಾಭಯಂಕರನಾದ ಯಮನೇ ನಾಶಹೊಂದುವನು.



## ೫. ಸತ್ಯಸ್ವರೂಪದ ಶೋಧ-ಜ್ಞಾನೋಪದೇಶ

(ಶ್ಲೋಕ ೧೩೬-೧೭೭)

ಭಯೇ ವ್ಯಾಪಿಲೇ ಸರ್ವ ಬ್ರಹ್ಮಾಂಡ ಆಹೇ ।
ಭಯಾತೀತ ತೇ ಸಂತ ಅನಂತ ಪಾಹೇ ॥
ಜಯಾ ಪಾಹತಾ ದ್ವೈತ ಕಾಂಹೀ ದಿಸೇನಾ ।
ಭಯ ಮಾನಸೀ ಸರ್ವಥಾಹೀ ಅಸೇನಾ ॥೧೩೬॥

ವಿಶ್ವವೆಲ್ಲವೂ ಭೀತಿಯಿಂದ ಆವರಿಸಿದ್ದು ಸತ್ಯಜ್ಞಾನಾನಂತ ಪರಬ್ರಹ್ಮವು ಮಾತ್ರ ನಿರ್ಭಯವಾಗಿದೆ. ಅದನ್ನು (ಬ್ರಹ್ಮವನ್ನು) ಅರಿತರೆ ಎಷ್ಟು ಮಾತ್ರವೂ ದ್ವೈತ ತೋರದು ಹಾಗೂ ಮನದಲ್ಲಿ ಭಯವೆಂದಿಗೂ ಉಳಿಯದು.

ಜೀವಾ ಶ್ರೇಷ್ಠತೇ ಸ್ಪಷ್ಟ ಸಾಂಗೋನಿ ಗೇಲೇ ।
ಪರಿ ಜೀವ ಅಜ್ಞಾನ ತೈಸೇಚಿ ಠೇಲೇ ॥
ದೇಹೇ ಬುದ್ಧಿಚೇ ಕರ್ಮ ಖೋಟೇ ಟಳೇನಾ ।
ಜುನೇ ಠೇವಣೇ ಮೀಪಣೇ ಆಕಳೇನಾ★ ॥೧೩೭॥

ಶ್ರೇಷ್ಠರಾದ ಸಾಧುಸಂತರು ಜೀವರಿಗೆ ವಿಶದವಾಗಿ ಬೋಧಮಾಡಿ ಹೋಗಿದ್ದರೂ, ಜೀವರು ಹಾಗೆಯೇ ಅಜ್ಞಾನಿಗಳೇ ಉಳಿದರು ! ಅವರ ನಿರರ್ಥಕ ದೇಹಬುದ್ಧಿಯ ಕಾಯಕವೇನು ಅಳಿಯಲೊಲ್ಲದು ಹಾಗೂ ಕಳೆದುಹೋದ ಪುರಾತನ ನಿಧಿಯೇನು ಅಹಂಕಾರಮೂಲಕವಾಗಿ ಸಿಗಲೊಲ್ಲದು !

ಭ್ರಮೇ ನಾಢಳೇ ವಿತ್ತ ತೇ ಗುಪ್ತ ಝಾಲೇ ।
ಜೀವಾ ಜನ್ಮದಾರಿದ್ರ್ಯ ಠಾಕೂನೀ ಆಲೇ ॥
ದೇಹೇಬುದ್ಧಿಚಾ ನಿಶ್ಚಯೋ ಜ್ಯಾ ಢಳೇನಾ ।
ಜುನೇ ಠೇವಣೇ ಮೀಪಣೇ ಆಕಳೇನಾ ॥೧೩೮॥

ಭ್ರಾಂತಿಯಿಂದ ತನ್ನ ಧನವೇ ತನಗೆ ಸಿಗದೆ ಅಡಗಿಹೋದಂತೆ, ಜೀವರಿಗೆ ತಪ್ಪದೆ ಹುಟ್ಟುದರಿದ್ರತೆ ಬಂದಿರುವದು ! ಅವರ ದೇಹತ್ಮಾಬುದ್ಧಿಯ ನಿಶ್ಚಯವೇನು ಸರಿಯಲೊಲ್ಲದು ಹಾಗೂ ಕಳೆದು ಹೋದ ಪುರಾತನ ನಿಧಿಯೇನು ಅಹಂಕಾರ ಮೂಲಕವಾಗಿ ಸಿಗಲೊಲ್ಲದು !

★ ಜುನೇ ಠೇವಣೇ ಮೀಪಣೇ ಆಕಳೇನಾ : ೧೩೭-೧೪೧ (೫ ಶ್ಲೋಕ)

**ಪುಡೆ ಪಾಹತಾ ಸರ್ವಹೀ ಕೋಂದಲೇಸೇ ।**
**ಅಭಾಗ್ಯಾಸ ಹೇ ದೃಶ್ಯ ಪಾಷಾಣ ಭಾಸೇ ॥**
**ಅಭಾವೇ ಕದಾ ಪುಣ್ಯ ಗಾಠೀ ಪಡೇನಾ ।**
**ಜುನೇ ಠೇವಣೇ ಮೀಪಣೇ ಆಕಳೇನಾ ॥೧೪೯॥**

ಎದುರಿಗೆ ತೋರುವದೇನೆಲ್ಲವೂ ಆತ್ಮಮಯವಿರುವದು; ಆದರೆ ದುರ್ದೈವಿಗಳಿಗೆ ಈ ಜಗತ್ತು ಕಲ್ಲು-ಮಣ್ಣಾಗಿಯೇ ಅನಿಸುವದು ! ಅವಿಶ್ವಾಸದಿಂದಲೇನು ಪುಣ್ಯ ಪದರಿಗೆ ಬೀಳದು ಹಾಗೂ ಕಳೆದುಹೋದ ಪುರಾತನ ನಿಧಿಯೇನು ಅಹಂಕಾರ ಮೂಲಕವಾಗಿ ಸಿಗಲೊಲ್ಲದು !

**ಜಯಾಚೇ ತಯಾ ಚೂಕಲೇ ಪ್ರಾಪ್ತ ನಾಂಹೀ ।**
**ಗುಣೇ ಗೋವಿಲೇ ಜಾಹಲೇ ದುಃಖ ದೇಹೀ ॥**
**ಗುಣಾ ವೇಗಳೀ ವೃತ್ತಿ ತೇಹೀ ವಳೇನಾ ।**
**ಜುನೇ ಠೇವಣೇ ಮೀಪಣೇ ಆಕಳೇನಾ ॥೧೫೦॥**

ತ್ರಿಗುಣದಿಂದ ಬಂಧಿತನಾಗಿ ದುಃಖ ಅನುಭವಿಸುತ್ತಿರುವ ಜೀವನಿಗೆ ಕಳೆದ ತನ್ನಸೊತ್ತೆ ತನಗೆ ಸಿಗದಾಗಿದೆ; ಅವನ ಮನಸ್ಥಿತಿಯೇನು ಗುಣಹಿತವಾಗಲೊಲ್ಲದು ಹಾಗೂ ಕಳೆದುಹೋದ ಪುರಾತನ ನಿಧಿಯು ಅಹಂಕಾರ ಮೂಲಕವಾಗಿ ಸಿಗಲೊಲ್ಲದು !

**ಮ್ಹಣೇ ದಾಸ ಸಾಯಾಸ ತ್ಯಾಚೇ ಕರಾವೇ ।**
**ಜನೀ ಜಾಣತಾ ಪಾಯ ತ್ಯಾಚೇ ಧರಾವೇ ॥**
**ಗುರೂ ಅಂಜನೇವೀಣ ತೇ ಆಕಳೇನಾ ।**
**ಜುನೇ ಠೇವಣೇ ಮೀಪಣೇ ತೇಕಳೇನಾ ॥೧೫೧॥**

ಸಾರಾಂಶದಲ್ಲಿ ರಾಮದಾಸರು ಹೇಳುವದೇನೆಂದರೆ, ಆತ್ಮ ಪ್ರಾಪ್ತಿಗಾಗಿ ಜ್ಞಾನಿಗೆ ಶರಣು ಹೋಗಿ ಅವನ ಸೇವೆ ಮಾಡಬೇಕು. ಯಾಕೆಂದರೆ ಗುರು ಅಂಜನದ ಹೊರತಾಗಿಯೇನು ಅಹಂಕಾರದಿಂದ ಎರವಾದ ಪುರಾತನ ಆತ್ಮನಿಧಿಯು ಸಿಗಲಾರದು !

**ಕಳೇನಾ ಕಳೇನಾ ಕಳೇನಾ ಢಳೇನಾ ।**
**ಢಳೇ ನಾಢಳೇ ಸಂಶಯೋಹೀ ಢಳೇನಾ ॥**



**ಗಳೇನಾ ಗಳೇನಾ ಅಹಂತಾ ಗಳೇನಾ ।**
**ಬಳೇ ಆಕಳೇನಾ ಮಿಳೇನಾ ಮಿಳೇನಾ ॥೧೫೨॥**

ಸ್ವಬುದ್ಧಿಯಿಂದ ಮಾಡಿದ ಸಾಧನಾದಿಗಳಿಂದ ಪರವಸ್ತುವೆಂದಿಗೂ ತಿಳಿಯದು ಸಂಶಯವೆಂದಿಗೂ ಅಳಿಯದು, ಅಹಂಕಾರವೆಂದಿಗೂ ತೊಲಗದು ಹಾಗೂ ಎಷ್ಟೇ ಸಾಹಪಟ್ಟರೂ ಆತ್ಮಪ್ರಾಪ್ತಿಯಾಗಲಾರದು !

**ಅವಿದ್ಯಾಗುಣೇ ಮಾನವಾ ಊಮಜೇನಾ ।**
**ಭ್ರಮೇ ಚೂಕಲೇ ಹೀತ ತೇ ಆಕಳೇನಾ ॥**
**ಪರೀಕ್ಷೇವಿಣೇ ಬಾಂಧಿಲೇ ದೃಢ ನಾಣೇ ।**
**ಪರೀ ಸತ್ಯ ಮಿಥ್ಯಾ ಅಸೇ ಕೋಣ ಜಾಣೇ ॥೧೫೩॥**

ಅಜ್ಞಾನದ ಮೂಲಕವಾಗಿ ಮನುಷ್ಯನಿಗೆ ಆತ್ಮನ ಅರಿವಾಗಲೊಲ್ಲದು ಹಾಗೂ ಭ್ರಮೆಯ ದೆಸೆಯಿಂದ ಕಳೆದು ಹೋದ ಆನಂದವು ಸಿಗಲೊಲ್ಲದು ! ಸಾರಾಂಶ, ದುಃಖ - ಬಂಧನಕ್ಕೆ ಅಜ್ಞಾನ ಹಾಗೂ ಭ್ರಮೆಯೇ ಕಾರಣವು. ನೆಟ್ಟಗೆ ಪರೀಕ್ಷಿಸದೆ ನಾಣ್ಯವನ್ನು ಪದರಿಗೆ ಕಟ್ಟಿದರೇನಂತೆ ! ಅದು ಖರೆಯೋ ಖೊಟ್ಟಿಯೋ ಯಾರು ಬಲ್ಲರು ?

**ಜಗೀ ಪಾಹತಾ ಸಾಚ ತೇ ಕಾಯ ಆಹೇ ।**
**ಅತೀ ಆದರೇ ಸತ್ಯ ಶೋಧೂನಿ ಪಾಹೇ ।**
**ಪುಢೇ ಪಾಹತಾ ಪಾಹತಾ ದೇವ ಜೋಡೇ ।**
**ಭ್ರಮ ಭ್ರಾಂತಿ ಅಜ್ಞಾನ* ಹೇ ಸರ್ವ ಮೋಡೇ ॥೧೫೪॥**

ಪರೀಕ್ಷಿಸಿ ನೋಡಿದರೆ ಜಗತ್ತಿನಲ್ಲಿ ಯಾವದು ಸತ್ಯವಿರುವದು ? ಯಾವದೂ ಇಲ್ಲವಾದ್ದರಿಂದ ನೀನು ಒಳ್ಳೇ ಜಿಜ್ಞಾಸೆಯಿಂದ ಸತ್ಯವನ್ನು ಶೋಧಿಸಿ ನೋಡಪ್ಪಾ. ಬಿಡದೆ ಸತ್ಯದ ಶೋಧ ಮಾಡಿದರೆ ಸತ್ಯಸ್ವರೂಪೀ ದೇವನು ಲಭಿಸಿ ಅಜ್ಞಾನ ಬಯಲು ಭ್ರಾಂತಿಯೆಲ್ಲವೂ ಅಳಿಯುವದು.

**ಸದಾ ವಿಷಯೋ ಚಿಂತಿತಾ ಜೀವ ಝೂರಾ ।**
**ಅಹಂಭಾವ ಅಜ್ಞಾನ ಜನ್ಮಾಸಿ ಆಲಾ ॥**
**ವಿವೇಕೇ ಸಾದಾ ಸ್ವಸ್ವರೂಪೀ ಭರಾವೇ ।**
**ಜೀವಾ ಊಗಮೀ ಜನ್ಮ ನಾಂಹೀ ಸ್ವಭಾವೇ ॥೧೫೫॥**

---

*ಅಜ್ಞಾನ : ೧೫೪, ೧೫೫, ೧೯೧ (೩)

ಜೀವನು ಸತತವಾಗಿ ವಿಷಯ ಚಿಂತನೆ ಮಾಡುತ್ತಾ ಅಜ್ಞಾನ-ಅಹಂಕಾರದಿಂದ ಜನ್ಮಕ್ಕೆ ಬಂದಿರುವನು ! ಆದರೆ ನಿಜವಾಗಿ ಅವನಿಗೆ ಮೂಲತಃ ಜನ್ಮವೇ ಇಲ್ಲದ್ದರಿಂದ, ವಿವೇಕದಿಂದ ಆ ತನ್ನ ಆತ್ಮ ಸ್ವರೂಪದಲ್ಲಿ ತನ್ಮಯನಾಗಬೇಕು.

**ದಿಸೇ ಲೋಚನೀ ತೇ ನಸೇ ಕಲ್ಪಕೋಡೀ ।**
**ಅಕಸ್ಮಾತ ಆಕಾರಲೇ ಕಾಳ ಮೋಡೀ ॥**
**ಪುಢೇ ಸರ್ವ ಜಾಯೀಲ ಕಾಂಹೀ ನ ರಾಹೇ ।**
**ಮನಾ ಸಂತ ಆನಂತ ಶೋಧೂನಿ ಪಾಹೇ *** ॥೧೪೬॥

ಕಣ್ಣಿಗೆ ಕಾಣಿಸುವ ದೃಶ್ಯವು ಶಾಶ್ವತವಾಗಿ ಉಳಿಯಲಾರದು, ಆಕಾರಕ್ಕೆ ಬಂದ ಜಗತ್ತನ್ನು ಕಾಲನು ಒಮ್ಮಿಂದೊಮ್ಮೆಲೆ ನಾಶ ಮಾಡುವನು ! ಒಟ್ಟಿಗೆ, ಮುಂದೆ ಎಲ್ಲವೂ ನಾಶವಾಗಿ ಏನೂ ಉಳಿಯಲಾರದ ಕಾರಣದಿಂದ ಮನವೇ, ನಿತ್ಯ ಪರಿಪೂರ್ಣ ವಸ್ತುವನ್ನು ಶೋಧಿಸಿ ನೋಡು.

**ಫುಟೇನಾ ತುಟೇನಾ ಚಳೇನಾ ಢಳೇನಾ ।**
**ಸದಾ ಸಂಚಲೇ ಮೀಪಣೇ ತೇ ಕಳೇನಾ ॥**
**ತಯಾ ಏಕರೂಪಾಸಿ ದೂಜೇ ನ ಸಾಹೇ ।**
**ಮನಾ ಸಂತ ಆನಂತ ಶೋಧೂನಿ ಪಾಹೇ** ॥೧೪೭॥

ಸದ್ವಸ್ತುವಾದರೋ ಒಡೆಯದು, ಹರಿಯದು, ಚಲಿಸದು, ಅಲುಗಾಡದು ಹಾಗೂ ಯಾವಾಗಲೂ ಎಲ್ಲೆಡೆಯಲ್ಲಿ ನೆಲೆಸಿರುವದು; ಆದರೆ ಅಹಂಭಾವದಿಂದ ಅದು ತಿಳಿಯದಾಗಿದೆ ! ಆ ಏಕಮೇವ ವಸ್ತುವಿಗೆ ಎರಡನೇಯದೆನ್ನುವದೇ ಸಹಿಸದು !! ಮನವೇ ಇಂತಹ ನಿತ್ಯ ಪರಿಪೂರ್ಣ ವಸ್ತುವನ್ನು ಶೋಧಿಸಿ ನೋಡು.

**ನಿರಾಕಾರ ಆಧಾರ ಬ್ರಹ್ಮಾದಿಕಾಂಚಾ ।**
**ಜಯಾ ಸಾಂಗತಾ ಶೀಣಲೀ ವೇದವಾಚಾ ॥**
**ವಿವೇಕೇ ತದಾಕಾರ ಹೋವುನಿ ರಾಹೆ ।**
**ಮನಾ ಸಂತ ಅನಂತ ಶೋಧೂನಿ ಪಾಹೆ** ॥೧೪೮॥

---

★ ಮನಾ ಸಂತ ಅನಂತ ಶೋಧೂನಿ ಪಾಹೇ : ೧೪೬-೧೫೦ (೫ ಶ್ಲೋಕ)



ಬ್ರಹ್ಮದೇವ ಮೊದಲಾದವರೆಲ್ಲರಿಗೂ ಆಧಾರವಾದ ನಿರಾಕಾರ ಬ್ರಹ್ಮವನ್ನು ವರ್ಣಿಸಹೋಗಿ ವೇದವಾಣಿಯೂ ದಣಿಯಿತು ! ಅದಕ್ಕಾಗಿ ಮನವೇ, ಬ್ರಹ್ಮವನ್ನು ಬುದ್ಧಿಯಿಂದ ಗ್ರಹಿಸಲೆತ್ನಿಸದೇ ವಿವೇಕದಿಂದ ಬ್ರಹ್ಮರೂಪವಾಗಿ ನೆಲಿಸು -ಹೀಗೆ ನಿತ್ಯ ಪರಿಪೂರ್ಣ ವಸ್ತುವನ್ನು ಶೋಧಿಸಿ ನೋಡು.

**ಜಗೀ ಪಾಹತಾ ಚರ್ಮಚಕ್ಷೀ ನ ಲಕ್ಷೀ ।**
**ಜಗೀ ಪಾಹತಾ ಜ್ಞಾನಚಕ್ಷೀ ನ ರಕ್ಷೀ ॥**
**ಜಗೀ ಪಾಹತಾ ಪಾಹಣೇ ಜಾತ ಆಹೇ ।**
**ಮನಾ ಸಂತ ಆನಂತ ಶೋಧೂನಿ ಪಾಹೇ** ॥೧೪೯॥

ಸದ್ವಸ್ತುವನ್ನು ಚರ್ಮಚಕ್ಷುವಿನಿಂದ (ಸ್ಥೂಲ ಕಣ್ಣುಗಳಿಂದ) ನೋಡಲಿಕ್ಕೆ ಬಾರದು; ಆದರೆ ಜ್ಞಾನಚಕ್ಷುವಿನಿಂದ (ಜ್ಞಾನರೂಪೀ ಕಣ್ಣಿನಿಂದ) ಅದನ್ನು ನಿರೀಕ್ಷಿಸಬಹುದು. ಆದರೆ ಎಲ್ಲ ಜನರ ನೋಟವು ದೃಶ್ಯ ಪದಾರ್ಥಗಳನ್ನು ನೋಡುವದರಲ್ಲಿಯೇ ವ್ಯರ್ಥವಾಗುತ್ತಿರುವದು ! ಮನವೇ, ನೀನು ವಿವೇಕದಿಂದ ಪರಿಪೂರ್ಣ ವಸ್ತುವನ್ನು ಶೋಧಿಸಿ ನೋಡು.

**ನಸೇ ಪೀತ ನಾ ಶ್ವೇತ ನಾ ಶ್ಯಾಮ ಕಾಂಹೀ ।**
**ನಸೇ ವ್ಯಕ್ತ ಅವ್ಯಕ್ತ ನಾ ನೀಳ ನಾಹಿ ॥**
**ಮ್ಹಣೇ ದಾಸ ವಿಶ್ವಾಸತಾ ಮುಕ್ತಿ ಲಾಹೇ ।**
**ಮನಾ ಸಂತ ಅನಂತ ಶೋಧೂನಿ ಪಾಹೇ** ॥೧೫೦॥

ಆತ್ಮಸ್ವರೂಪವು ಹಳದೀ-ಬೆಳ್ಳಗೆ-ಕಪ್ಪು-ನೀಲಿ ಇತ್ಯಾದಿ ಯಾವ ಬಣ್ಣದುದಲ್ಲ; ಅಥವಾ ವ್ಯಕ್ತ (ಪ್ರಕಟ)-ಅವ್ಯಕ್ತ (ಅಪ್ರಕಟ)ವೂ ಅಲ್ಲ. ರಾಮದಾಸರು ಹೇಳುವದೇನೆಂದರೆ ಇಲ್ಲಿ ಮುಖ್ಯವಾಗಿ ಶ್ರದ್ಧೆಯಿಡುವದರಿಂದಲೇ ಮುಕ್ತಿ ಲಭಿಸುತ್ತದೆ. ಮನವೇ, ಈ ರೀತಿಯಾಗಿ ನಿತ್ಯ ಪರಿಪೂರ್ಣ ವಸ್ತುವನ್ನು ಶೋಧಿಸಿ ನೋಡು.

**ಖರೇ ಶೋಧಿತಾ ಶೋಧಿತಾ ಶೋಧಿತಾಹೇ ।**
**ಮನಾ ಬೋಧಿತಾ ಬೋಧಿತಾ ಬೋಧಿತಾಹೇ ॥**
**ಪರೀ ಸರ್ವಹೀ ಸಜ್ಜನಾಚೆನಿಯೋಗೇ ।**
**ಬರಾ ನಿಶ್ಚಯೋ ಪಾವಿಜೇ ಸಾನುರಾಗೇ** ॥೧೫೧॥

ಮನವೇ, ಎಲ್ಲರೂ ಸತ್ಯವನ್ನು ಬಹುಕಾಲ ಹಾಗೆಯೇ ಹುಡುಕುತ್ತಲೇ ಇರುವರು ಹಾಗೂ ಅದರ ಬಗ್ಗೆ ಎಷ್ಟೋ ಉಪದೇಶವಾದರೂ ಮಾಡುವರು ! ಆದರೆ ಸಂತ ಜನರ ಸಹವಾಸದಿಂದ ಮಾತ್ರ ಶ್ರವಣಾದಿ ಎಲ್ಲವೂ ಘಡಿಸಿ, ಸತ್ಯದ ಯಥಾರ್ಥ ಜ್ಞಾನ ಲಭಿಸುವದು.

**ಬಹುತಾಪರೀ ಕೂಸರೀ ತತ್ತ್ವಝಾಡಾ ।**
**ಪರೀ ಪಾಹಿಜೇ ಅಂತರಿ ತೋ ನಿವಾಡಾ ॥**
**ಮನಾ ಸಾರ ಸಾಚಾರ ತೇ ವೇಗಳೇ ರೇ ।**
**ಸಮಸ್ತಾಮಧೇ ಏಕ ತೇ ಆಗಳೇ ರೇ ॥೧೫೨॥**

ತತ್ತ್ವ ಪರೀಕ್ಷೆಯು ಬಹಳ ಚಾತುರ್ಯದ ಕೆಲಸವಿದ್ದು, ತನ್ನಲ್ಲಿ ಬೇರೆ ಬೇರೆ ತತ್ತ್ವಗಳ ಸರಿಯಾದ ಜ್ಞಾನವು ಅವಶ್ಯವಿರುತ್ತದೆ. ಮನವೇ, ಹೀಗೆ ತತ್ತ್ವಗಳನ್ನು ತಿಳಿದರೂ ಸತ್ಯ ವಸ್ತುವು ಅವೆಲ್ಲಕ್ಕಿಂತ ಬೇರೆಯೇ ಇದ್ದು, ಅದು ಅವುಗಳಿಗಿಂತ ಅತ್ಯಂತ ಶ್ರೇಷ್ಠವೂ ಅಹುದು !

**ನವ್ಹೇ ಪಿಂಡಜ್ಞಾನೇ ನವ್ಹೇ ತತ್ತ್ವಜ್ಞಾನೇ ।**
**ಸಮಾಧಾನ ಕಾಂಹೀ ನವ್ಹೇ ತಾನಮಾನೇ ॥**
**ನವ್ಹೇ ಯೋಗಯಾಗೇ ನವ್ಹೇ ಭೋಗತ್ಯಾಗೇ ।**
**ಸಮಾಧಾನ ತೇ ಸಜ್ಜನಾಚೇನಿಯೋಗೇ ॥೧೫೩॥**

ಶರೀರಜ್ಞಾನ, ಜಗತ್ತಿನಲ್ಲಿಯ ತತ್ತ್ವಗಳ ಜ್ಞಾನ, ಗಾಯನ, ವಾದನ, ಅಷ್ಟಾಂಗ ಯೋಗ, ಯಜ್ಞ, ವಿಷಯತ್ಯಾಗ ಇವಾವುದರಿಂದಲೂ ದೊರೆಯದ ಸಮಾಧಾನವು ಸಂತರಿಂದ ಲಭಿಸುತ್ತದೆ.

**ಮಹಾವಾಕ್ಯ ತತ್ತ್ವಾದಿಕೇ ಪಂಚಿಕರ್ಣೇ ।**
**ಖುಣೇ ಪಾವಿಜೇ ಸಂತಸಂಗೇ ವಿವರ್ಣೇ ॥**
**ದ್ವಿತೀಯೇಸಿ ಸಂಕೇತ ಜೋ ದಾವಿಜೇತೋ ।**
**ತಯಾ ಸಾಂಡುನೀ ಚಂದ್ರಮಾ ಭಾವಿಜೇತೋ ॥೧೫೪॥**

ಶುಕ್ಲಪಕ್ಷದ ಬಿದಿಗೆಯ ಸೂಕ್ಷ್ಮ ಚಂದ್ರನನ್ನು ದೃಷ್ಟಿಪಥದಲ್ಲಿ ತರುವದಕ್ಕಾಗಿ ಒಂದು ಗಿಡದ ಟೊಂಗೆಯಗುಂಟ ನೋಡಲಿಕ್ಕೆ ಹೇಳಲು, ವೀಕ್ಷಕನು ಶಾಖೆಯನ್ನು ಬಿಟ್ಟು ಚಂದ್ರನನ್ನು ನೋಡಲು ಶಕ್ತನಾಗುವಂತೆ, ಸಂತರ ಪಂಚೀಕರಣ ಹಾಗೂ ತತ್ತ್ವಮಸಿ ಮಹಾವಾಕ್ಯದ ವಿವರಣೆಯಿಂದ ಆತ್ಮರಹಸ್ಯ ಹಸ್ತಗತವಾಗುವದು.



**ದಿಸೇನಾ ಜನೀ ತೇಚಿ ಶೋಧೂನಿ ಆಹೇ ।**
**ಬರೇ ಪಾಹತಾ ಗೂಜ ತೇಥೇಚಿ ಆಹೇ ॥**
**ಕರೀ ಘೇವು ಜಾತಾ ಕದಾ ಆಢಳೇನಾ ।**
**ಜನೀ ಸರ್ವ ಕೋಂದಾಟಲೇ ತೇ ಕಳೇನಾ ॥೧೫೫॥**

ಎಲ್ಲಿಯೂ ಕಾಣಿಸಲಾರದ ವಸ್ತುವನ್ನೇ ಕಂಡುಹಿಡಿ; ಜ್ಞಾನದೃಷ್ಟಿಯಿಂದ ಸರಿಯಾಗಿ ನೋಡಿದರೆ ಆ ರಹಸ್ಯವು ಅಲ್ಲಿಯೇ ಸಿದ್ಧವಿದೆ ! ಆದರೆ ಜಡ ವಸ್ತುವಿನಂತೆ ಅದನ್ನು ಕೈಯಿಂದ ಹಿಡಿಯಹೋದರೆ ಮಾತ್ರ ಅದೇನು ಸಿಗದು, ಎಲ್ಲರಲ್ಲಿಯೂ ತುಂಬಿಕೊಂಡಿದ್ದರೂ ಅದು ತಿಳಿಯದು !

**ಮ್ಹಣೇ ಜಾಣತಾ ತೋ ಜನೀ ಮೂರ್ಖ ಪಾಹೇ ।**
**ಅತರ್ಕ್ಯಾಸಿ ತರ್ಕೀ ಅಸಾ ಕೋಣ ಆಹೇ ॥**
**ಜನೀ ಮೀಪಣೇ ಪಾಹತಾ ಪಾಹವೇನಾ ।**
**ತಯಾ ಲಕ್ಷಿತಾ ವೇಗಳೇ ರಾಹವೇನಾ ॥೧೫೬॥**

''ನಾನು ಆತ್ಮವನ್ನು ತಿಳಿದಿರುವೆನೆ''ಂದು ಅನ್ನುವವನು ಮೂರ್ಖನೇ ಸೈ ! ಯಾಕೆಂದರೆ ಬುದ್ಧಿಗೆ ನಿಲುಕಲಾರದ ವಸ್ತುವನ್ನು ತಿಳಿಯಲು ಯಾವನು ಶಕ್ತನು ? ಸತ್ಯವಾಗಿಯೂ ಅಹಂಕಾರ ಧರಿಸಿ ಆತ್ಮವಸ್ತುವನ್ನು ನೋಡಲಾಗದು ಹಾಗೂ ಆತನನ್ನು ಯಥಾರ್ಥವಾಗಿ ಲಕ್ಷಿಸಿದರೆ ತಾನು ಬೇರೆಯಾಗಿ ಉಳಿಯುವದೂ ಆಗದು !!!

**ಬಹು ಶಾಸ್ತ್ರ ಧುಂಡಾಳಿತಾ ವಾಢ ಆಹೇ ।**
**ಜಯಾ ನಿಶ್ಚಯೋ ಏಕ ತೋಹೀ ನ ಸಾಹೇ ॥**
**ಮತಿ ಭಾಂಡತೀ ಶಾಸ್ತ್ರಬೋಧೇ ವಿರೋಧೇ ।**
**ಗತೀ ಖುಂಟತೀ ಜ್ಞಾನಬೋಧೇ* ಪ್ರಬೋಧೇ ॥೧೫೭॥**

ಅನೇಕ ಶಾಸ್ತ್ರಗಳ ಅಭ್ಯಾಸವೊಂದು ಮಹಾರಣ್ಯವೇ ಅಹುದು ! ಅದರಲ್ಲಿ ಚರಿಸುವವನಿಗೆ ಒಂದು ನಿಶ್ಚಯವೂ ಗತಿಗಾಣುವುದಿಲ್ಲ !! ಆದರೆ ಮತವಾದಿಗಳು ಪರಸ್ಪರ ವಿರೋಧವಾದ ಶಾಸ್ತ್ರಜ್ಞಾನದಿಂದ ಸುಮ್ಮನೆ ಜಗಳಾಡುತ್ತಿರುವರು ! ಯಥಾರ್ಥ ಅನುಭವ ಜ್ಞಾನದಿಂದಲಾದರೋ ಬುದ್ಧಿಯ ಓಟವೇ ಮುಗಿದು ಶಾಂತಿ ಲಭಿಸುವದು.

---

★ ಪಾಠಭೇದ : ಶಾಸ್ತ್ರಬೋಧೇ.

ಶ್ರುತೀ ನ್ಯಾಯ ಮೀಮಾಂಸಕೇ ತರ್ಕಶಾಸ್ತ್ರೇ ।
ಸ್ಮೃತೀ ವೇದ ವೇದಾಂತವಾಕ್ಯೇ ವಿಚಿತ್ರೇ ॥
ಸ್ವಯೇ ಶೇಷ ಮೌನಾವಲಾ ಸ್ಥಿರ ರಾಹೇ◆
ಮನಾ ಸರ್ವ ಜಾಣೀವ ಸಾಂಡೂನಿ ಪಾಹೇ● ॥೧೫೮॥

ಶಾಸ್ತ್ರವಿಸ್ತಾರವನ್ನಾದರೂ ಏನು ಹೇಳುವದು, ಋಗ್ವೇದಾದಿ ೪ ವೇದಗಳು, ಪೂರ್ವಮೀಮಾಂಸಾ, ನ್ಯಾಯ-ವೈಶೇಷಿಕಾದಿ ೬ ಶಾಸ್ತ್ರಗಳು, ೧೮ ಪುರಾಣಾದಿ ಸ್ಮೃತಿಗ್ರಂಥಗಳು ಹಾಗೂ ಅವುಗಳಲ್ಲಿಯ ಚಮತ್ಕಾರಿಕ ವಿಭಿನ್ನ ಸಿದ್ಧಾಂತಗಳು !! ಇದೂ ಸಾಲದೆ ವಸ್ತುವಿನ ಬಗ್ಗೆ ಸಾವಿರ ನಾಲಿಗೆಯ ಶೇಷನೇ ಬೆಪ್ಪಗೆ ಕುಳಿತಿರಲು ಮನವೆ, ನಿನ್ನ ಜ್ಞಾನವೆಷ್ಟರದು ? ಅದಕ್ಕಾಗಿ ಅರಿಯುವ ಹವ್ಯಾಸವನ್ನೆಲ್ಲ ತೊರೆದು ಆತ್ಮಸ್ವರೂಪವನ್ನು ಈಕ್ಷಿಸು.

ಜೇಣೇ ಮಕ್ಷಿಕಾ ಭಕ್ಷಿಲೀ ಜಾಣಿವೇಚೀ ।
ತಯಾ ಭೋಜನಾಚೀ ರುಚೀ ಪ್ರಾಪ್ತ ಕೈಚೀ ॥
ಅಹಂಭಾವ ಜ್ಯಾ ಮಾನಸೀಚಾ ವಿರೇನಾ ।
ತಯಾ ಜ್ಞಾನ ಹೇ ಅನ್ನ ಪೋಟೀ ಜಿರೇನಾ ॥೧೫೯॥

ಅಹಂಕಾರದ ನೊಣ ತಿಂದವನಿಗೆ ಜ್ಞಾನಾಮೃತ ಭೋಜನದ ಸವಿಯೆಲ್ಲಿಯದು ಬರಬೇಕು ? ಚಿತ್ತದಲ್ಲಿಯ ಅಹಂಕಾರ ಅಳಿಯದವನಿಗೆ ಜ್ಞಾನರೂಪೀ ಅನ್ನವು ಪಚನವಾಗದು !

ನಕೋರೇ ಮನಾ ವಾದ ಹಾ ಖೇದಕಾರೀ ।
ನಕೋರೇ ಮನಾ ಭೇದ ನಾನಾ ವಿಕಾರೀ ॥
ನಕೋರೇ ಮನಾ ಶೀಕವೂ ಪೂಢಿಲಾಸೀ ।
ಅಹಂಭಾವ ಜೋ ರಾಹಿಲಾ ತೂಜಪಾಸೀ ॥೧೬೦॥

ಮನವೇ, ದುಃಖದಾಯಕ ವಾದವಿವಾದ ಮಾಡಬೇಡವಪ್ಪಾ ! ಕೋಪಾದಿ ಅನೇಕ ವಿಕಾರಿಗಳಿಗೆ ಕಾರಣವಾಗುವ 'ಎದುರಿಗಿನವರು ಬೇರೆ' ಎಂಬ ಭೇದ ಬುದ್ಧಿಯನ್ನು ತ್ಯಜಿಸಪ್ಪಾ ! ಮನವೇ, ನಿನ್ನಲ್ಲಿ ಇನ್ನೂ ಅಹಂಕಾರ ಮನೆ ಮಾಡಿದ್ದರಿಂದ ಅನ್ಯರಿಗೆ ಬುದ್ಧೀ ಕಲಿಸಲಿಕ್ಕೆ ಹೋಗಬೇಡ !

◆ ಪಾಠಭೇದ ಪಾಹೇ ● ಪಾಠಭೇದ ರಾಹೇ



ಅಹಂತಾಗುಣೇ ಸರ್ವಹೀ ದುಃಖ ಹೋತೇ ।
ಮುಖೇ ಬೋಲಿಲೇ ಜ್ಞಾನ ತೇ ವ್ಯರ್ಥ ಜಾತೇ ॥
ಸುಖೀ ರಾಹತಾ ಸರ್ವಹೀ ಸೂಖ ಆಹೇ ।
ಅಹಂತಾ ತುಝೀ ತೂಚಿ ಶೋಧೂನಿ ಪಾಹೇ ॥೧೬೧॥

ಅಹುದು, ಅಹಂಕಾರದಿಂದಲೇ ಎಲ್ಲ ದುಃಖವುಂಟಾಗುವದು ಹಾಗೂ ಬಾಯಿಯಿಂದ ಆಡಿದ ಜ್ಞಾನವು ನಿರರ್ಥಕವಾಗುವದು ! ನಿಜವಾಗಿಯೂ ಸುಖದಿಂದ ಇದ್ದರೆ ಎಲ್ಲವೂ ಸುಖಮಯವೇ ಇರುವದು; ಆದರೆ ಹಾಗೆ ಮಾಡಗೊಡದಿರುವದು ನಿನ್ನ ಅಹಂಕಾರವೇ ಎಂಬುದನ್ನು ಪರೀಕ್ಷಿಸಿ ನೋಡಿಕೋ.

ಅಹಂತಾಗುಣೇ ನೀತಿ ಸಾಂಡೀ ವಿವೇಕೀ ।
ಅನೀತೀಬಳೇ ಶ್ಲಾಘ್ಯತಾ ಸರ್ವ ಲೋಕೀ ॥
ಪರಿ ಅಂತರೀ ಸರ್ವಹೀ ಸಾಕ್ಷ ಯೇತೇ ।
ಪ್ರಮಾಣಾಂತರೀ ಬುದ್ಧಿ ಸಾಂಡೂನಿ ಜಾತೇ ॥೧೬೨॥

ವಿಚಾರಿಯೂ ಕೂಡ ಅಹಂಕಾರದಿಂದ ನೀತಿ ಬಿಟ್ಟು ನಡೆಯಹತ್ತುವನು ಹಾಗೂ ತನ್ನ ಅನೀತಿಯ ವರ್ತನದಿಂದಲೇ ಜನತೆಯ ಮಾನಸನ್ಮಾನ ಗಳಿಸುವನು! ಅವನ ಅಂತರಂಗದಲ್ಲಿ ಅದೆಲ್ಲ ಹೊಳೆಯುತ್ತಿದ್ದರೂ ಸ್ವಾರ್ಥಮಯ ವಿಚಾರಗಳಿಂದ ಅವನ ವಿವೇಕ ದೂರವಾಗುತ್ತದೆ !

ದೇಹೇಬುದ್ಧಿಚಾ ನಿಶ್ಚಯೋ ದೃಢ ಝಾಲಾ ।
ದೇಹಾತೀತ ತೇ ಹೀತ ಸಾಂಡೀತ ಗೇಲಾ ॥
ದೇಹೇಬುದ್ಧಿತೇ ಆತ್ಮಬುದ್ಧೀ ಕರಾವೀ ।
ಸದಾ ಸಂಗತೀ ಸಜ್ಜನಾಚೀ ಧರಾವೀ★ ॥೧೬೩॥

ಮನುಷ್ಯನು ದೇಹವೇ ನಾನೆಂದು ದೃಢನಿಶ್ಚಯ ಮಾಡಿ, ದೇಹಭಾವದಾಚೆಗಿನ ಆತ್ಮಸುಖಕ್ಕೆ ಎರವಾಗಿರುವನು ! ಆದ್ದರಿಂದ ಈಗ ಅವನು ದೇಹಬುದ್ಧಿಯನ್ನು ಆತ್ಮಬುದ್ಧಿಯನ್ನಾಗಿ ಮಾರ್ಪಡಿಸಬೇಕು ಹಾಗೂ ಅದಕ್ಕಾಗಿ ನಿತ್ಯವೂ ಸಂತರ ಸಂಹವಾಸ ಮಾಡತಕ್ಕದ್ದು.

★ ಸದಾಸಂಗತೀ ಸಜ್ಜನಾಚೀ ಧರಾವೀ - ೧೬೩-೧೬೭ (೫ ಶ್ಲೋಕ)

ಮನೇ ಕಲ್ಪಿಲಾ ವೀಷಯೋ ಸೋಡವಾವಾ ।
ಮನೇ ದೇವ ನಿರ್ಗೂಣ ತೋ ಓಳಖಾವಾ ॥
ಮನೇ ಕಲ್ಪಿತಾ ಕಲ್ಪನಾ ತೀ ಸರಾವೀ ।
ಸದಾ ಸಂಗತೀ ಸಜ್ಜನಾಚೀ ಧರಾವೀ ॥೧೬೪॥

ಮನವು ಕಲ್ಪಿಸಿದ ವಿಷಯವನ್ನು ಬಿಡಿಸಿ, ಅದೇ ಮನಸ್ಸಿನಿಂದಲೇ ನಿರ್ಗುಣ ಪರಮಾತ್ಮನನ್ನು ಗುರುತಿಸಬೇಕು. ಮನವು ಮತ್ತೆ ವಿಷಯ ಕಲ್ಪನೆಗೆಳಿಸಿದರೆ ಅದನ್ನು (ಕಲ್ಪನೆಯನ್ನು) ತಳ್ಳಿಹಾಕಬೇಕು ಹಾಗೂ ಇದೆಲ್ಲ ಸಾಧಿಸುವದಕ್ಕಾಗಿ ನಿತ್ಯವೂ ಸಂತರ ಸಹವಾಸ ಮಾಡತಕ್ಕದ್ದು.

ದೇಹಾದೀಕ ಪ್ರಪಂಚ ಹಾ ಚಿಂತಿಯೇಲಾ ।
ಪರೀ ಅಂತರೀ ಲೋಭ ನಿಶ್ಚೀತ ಠೇಲಾ ॥
ಹರೀಚಿಂತನೇ ಮುಕ್ತಿಕಾಂತಾ ವರಾವೀ ।
ಸದಾ ಸಂಗತೀ ಸಜ್ಜನಾಚೀ ಧರಾವೀ ॥೧೬೫॥

ಶರೀರ-ಸ್ತ್ರೀ -ಪುತ್ರಾದಿ ಸಂಸಾರದ ಚಿಂತನೆಯಿಂದ ಅಂತಃಕರಣದಲ್ಲಿ ವಾಸನೆಯು ಬೇರೂರಿ, ಅದರಿಂದ ಜನ್ಮಮರಣದಲ್ಲಿ ಸಿಲುಕಬೇಕಾಗುವುದು ! ಆದರೆ ಅದಕ್ಕಿಂತಲೂ ಈಶ ಚಿಂತನೆಮಾಡಿ ಮುಕ್ತಿಸ್ತ್ರೀಯನ್ನು (=ವಾಸನಾ ರಹಿತವಾಗಿ ಸಹಜಸ್ಥಿತಿಯಿಂದ ಇರುವ ಇರುವಿಕೆಯನ್ನು) ಪಡೆಯುವದು ಲೇಸಲ್ಲವೇ? ಈ ಉದ್ದೇಶದಿಂದ ನಿತ್ಯವೂ ಸಂತರ ಸಹವಾಸ ಮಾಡತಕ್ಕದ್ದು.

ಅಹಂಕಾರ ವಿಸ್ತಾರಲಾ ಯಾ ದೇಹಾಚಾ ।
ಸ್ತ್ರಿಯಾ ಪುತ್ರ ಮಿತ್ರಾದಿಕೇ ಮೋಹ ತ್ಯಾಂಚಾ ॥
ಬಳೇ ಭ್ರಾಂತಿ ಹೇ ಜನ್ಮಚಿಂತಾ ಹರಾವೀ ।
ಸದಾ ಸಂಗತೀ ಸಜ್ಜನಾಚೀ ಧರಾವೀ ॥೧೬೬॥

ಈ ಶರೀರದ ಅಭಿಮಾನವೇ ಬೆಳೆದುಬಿಟ್ಟಿದ್ದು , ಆದರಿಂದ ಹೆಂಡತಿ, ಮಕ್ಕಳು, ಆಪ್ತರು, ಮಿತ್ರರು ಮೊದಲಾದವರ ಮೇಲೆ ಮೋಹವುಂಟಾಗಿ-ರುವವದು. ಆದರೆ ಆಜನ್ಮವೂ ದುಃಖಕೊಡುವ ಈ ಭ್ರಮೆಯನ್ನು ನಿರಸನೆ ಮಾಡಲೇಬೇಕು. ಹಾಗೂ ಅದಕ್ಕಾಗಿ ನಿತ್ಯವೂ ಸಂತರ ಸಹವಾಸ ಮಾಡತಕ್ಕದ್ದು.



ಬರಾ ನಿಶ್ಚಯೋ ಶಾಶ್ವತಾಚಾ ಕರಾವಾ ।
ಮ್ಹಣೇ ದಾಸ ಸಂದೇಹ ತೋ ವೀಸರಾವಾ ॥
ಘಡೀನೇ ಘಡೀ ಸಾರ್ಥಕಾಚೀ ಕರಾವೀ ।
ಸದಾ ಸಂಗತೀ ಸಜ್ಜನಾಚೀ ಧರಾವೀ ॥೧೬೭॥

ರಾಮ ದಾಸರು ಹೇಳುವದೇನೆಂದರೆ ಸಂಶಯವೆನ್ನುವದೇ ಮರೆತು ಹೋಗುವಷ್ಟು ಶಾಶ್ವತ ವಸ್ತುವಿನ ದೃಢನಿಶ್ಚಯ ಮಾಡಬೇಕು. ಹಾಗೂ ಅದಕ್ಕಾಗಿ ನಿತ್ಯವೂ ಸಂತರ ಸಹವಾಸ ಮಾಡಿ ಆಯುಷ್ಯದ ಪ್ರತಿಯೊಂದು ಕ್ಷಣವನ್ನೂ ಸಾರ್ಥಕ ಮಾಡಿಕೊಳ್ಳಬೇಕು.

ಕರೀ ವೃತ್ತಿ ಜೋ ಸಂತ ತೋ ಸಂತ ಜಾಣಾ ।
ದುರಾಶಾಗುಣೇ ಜೋ ನವ್ಹೇ ದೈನ್ಯವಾಣಾ ॥
ಉಪಾಧೀ ದೇಹೇಬುದ್ಧಿ ತೇ ವಾಢವೀತೇ ।
ಪರೀ ಸಜ್ಜನಾ ಕೇವಿ ಬಾಧೂ ಶಕೇ ತೇ ॥೧೬೮॥

ದುರಾಶೆಯಿಂದ ಹೀನದೀನನಾಗದೆ ಮನವನ್ನು ಶಾಂತ ಮಾಡುವವನೇ ನಿಜವಾದ ಸಂತನೆಂದು ತಿಳಿಯಿರಿ. ಪ್ರಾಪಂಚಿಕ ಕಾರ್ಯಾದಿಯು ಸಾಮಾನ್ಯತಃ ಧೇಹಬುದ್ಧಿಯನ್ನು ಬೆಳೆಸುವದಾದರೂ, ಶಾಂತ ಆತ್ಮಸ್ವರೂಪದಲ್ಲಿ ನೆಲಿಸಿದ ಸಂತರಿಗೆ ಅದೇನು ಪರಿಣಾಮ ಮಾಡೀತು ?

ನಸೇ ಅಂತ ಆನಂತ ಸಂತಾ ಪುಸಾವಾ ।
ಅಹಂಕಾರ ವಿಸ್ತಾರ ಹಾ ನೀರಸಾವಾ ॥
ಗುಣೇವೀಣ ನಿರ್ಗೂಣ ತೋ ಆಠವಾವಾ
ದೇಹೇಬುದ್ಧಿಚಾ ಆಠವೋ ನಾಠವಾವಾ ॥೧೬೯॥

ನಾಶವಿಲ್ಲದ ಅನಂತ ವಸ್ತುವಿನ ಬಗ್ಗೆ ಸಂತರನ್ನು ಕೇಳಬೇಕು ಹಾಗೂ ಅಹಂಕಾರದಿಂದ ಬೆಳವಣಿಗೆಯಾದ ಅಸತ್ಯ ಪ್ರಪಂಚವನ್ನು ಖಂಡಿಸಬೇಕು. ದೇಹಭಾವವನ್ನು ಮರೆತು ಗುಣರಹಿತವಾದ ನಿರ್ಗುಣ ಬ್ರಹ್ಮಚಿಂತನೆ ಮಾಡಬೇಕು.

ದೇಹಬುದ್ಧಿ ಹೇ ಜ್ಞಾನಬೋಧೇ ತ್ಯಜಾವೀ ।
ವಿವೇಕೇ ತಯೇ ವಸ್ತುಚೀ ಭೇಟ ಘ್ಯಾವೀ ॥
ತದಾಕರ ಹೇ ವೃತ್ತಿ ನಾಂಹೀ ಸ್ವಭಾವೇ ।
ಮ್ಹಣೋನೀ ಸದಾ ತೇಚಿ ಶೋಧಿತ ಜಾವೇ ॥೧೭೦॥

ಜ್ಞಾನದ ಉಪದೇಶ ಕೇಳಿ ದೇಹಾತ್ಮಬುದ್ಧಿಯನ್ನು ತೊರೆಯಬೇಕು. ಹಾಗೂ ವಿವೇಕದಿಂದ ಆತ್ಮಸ್ವರೂಪದ ಭೇಟ್ಟಿತಕ್ಕೊಳ್ಳಬೇಕು. ಸಾಧಕನ ಮನವು ಸಹಜಗುಣವಾಗಿ ಆತ್ಮಾಕಾರ ಉಳಿಯುವದಿಲ್ಲವಾದ್ದರಿಂದ ನಿಧಿಧ್ಯಾಸದ ಬಗ್ಗೆ ಜಾಗರೂಕರಿರಬೇಕು.

**ಅಸೇ ಸಾರ ಸಾಚಾರ ತೇ ಚೋರಲೇಸೇ ।**
**ಇಹೀ ಲೋಚನೀ ಪಾಹತಾ ದೃಶ್ಯ ಭಾಸೇ ॥**
**ನಿರಾಭಾಸ ನಿರ್ಗುಣ ತೇ ಆಕಳೇನಾ ।**
**ಅಹಂತಾಗುಣೇ ಕಲ್ಪಿತಾಹೀ ಕಳೇನಾ** ॥೧೭೧॥

ಅತ್ಯಂತ ಶ್ರೇಷ್ಠವಾದ ಸತ್ಯವಸ್ತುವು ಗುಪ್ತವಾಗಿದ್ದು ಕಣ್ಣೆದುರಿಗೆ ಜಡಜಗತ್ತೇ ಭಾಸವಾಗುವದು ! ಆ ಭಾಸರಹಿತವಾದ ನಿರ್ಗುಣ ಸ್ವರೂಪದ ಆಕಲನೆಯಾಗಲೊಲ್ಲದು ಹಾಗೂ ತಾನೊಬ್ಬ ಜೀವನಾಗಿ ಬೇಕಾದಷ್ಟು ಕಲ್ಪಿಸಿದರೂ ಅದೇನು ತಿಳಿಯಲೊಲ್ಲದು !

**ಸ್ಫುರೇ ವೀಷಯೀ ಕಲ್ಪನಾ ತೇ ಅವಿದ್ಯಾ ।**
**ಸ್ಫುರೇ ಬ್ರಹ್ಮರೇ ಜಾಣ ಮಾಯಾ ಸುವಿದ್ಯಾ ॥**
**ಮುಳೀ ಕಲ್ಪನಾ ದೋ ರೂಪೇ ತೇಚಿ ಝಾಲೀ ।**
**ವಿವೇಕೇ ತರೀ ಸಸ್ವರೂಪೀ ಮಿಳಾಲೀ** ॥೧೭೨॥

ಮೂಲತಃ ಕಲ್ಪನಾರೂಪೀ ಮಾಯೆಯು ವಿದ್ಯೆ - ಅವಿದ್ಯೆಯೆಂದು ಎರಡು ರೂಪದಿಂದ ನಿರ್ಮಾಣವಾಗಿದ್ದು, ವಿಷಯದತ್ತ ಕಲ್ಪನೆ ಹರಿಯುವದೇ ಅವಿದ್ಯಾ ಮಾಯೆಯು ಹಾಗೂ ಬ್ರಹ್ಮವು ಪ್ರತೀತಿಯಾಗುವದೇ ವಿದ್ಯಾಮಾಯೆಯು; ಆದರೆ ಜ್ಞಾನದ ವಿವೇಕದಿಂದ ಆ ಎರಡೂ ಬಗೆಯ ಕಲ್ಪನೆಯು ಆತ್ಮಸ್ವರೂಪದಲ್ಲಿ ಲಯವಾಗುವದು.

**ಸ್ವರೂಪೀ ಉದೇಲಾ ಅಹಂಕಾರ ರಾಹೋ ।**
**ತೇಣೇ ಸರ್ವ ಆಚ್ಛಾದಿಲೇ ವ್ಯೋಮ ಪಾಹೋ ॥**
**ದಿಶಾ ಪಾಹತಾ ತೇ ನಶಾ ವಾಢತಾಹೇ ।**
**ವಿವೇಕೇ ವಿಚಾರೇ ವಿವಂಚೂನ ಪಾಹೇ** ॥೧೭೩॥

ಆತ್ಮಸ್ವರೂಪದಲ್ಲಿ ಅಹಂಕಾರರೂಪೀ ರಾಹುವು ಉದಯವಾಗಿ



ಚಿದಾಕಾಶವೆಲ್ಲವನ್ನು ಆವರಿಸಿಬಿಟ್ಟಿರುವನು ! ಎತ್ತ ನೋಡಿದರೂ ಅಜ್ಞಾನರೂಪೀ ಕಗ್ಗತ್ತಲೆ ವ್ಯಾಪಿಸಿದೆ !! ನಿಜಸ್ಥಿತಿಯನ್ನು ವಿವೇಕದಿಂದ ಚನ್ನಾಗಿ ವಿಚಾರ ಮಾಡಿ ನೋಡಿರಿ.

**ಜಯಾ ಚಕ್ಷುನೇ ಲಕ್ಷಿತಾ ಲಕ್ಷವೇನಾ ।**
**ಭವಾ ಭಕ್ಷಿತಾ ರಕ್ಷಿತಾ ರಕ್ಷವೇನಾ ॥**
**ಕ್ಷಯಾತೀತ ತೋ ಅಕ್ಷಯೀ ಮೋಕ್ಷ ದೇತೋ ।**
**ದಯಾದಕ್ಷ ತೋ ಸಾಕ್ಷಿನೇ ಪಕ್ಷ ಘೇತೋ** ॥೧೭೪॥

ನಿರ್ಗುಣ ಆತ್ಮನನ್ನು ಕಣ್ಣಿನಿಂದ ನೋಡಹೋದರೆ ಕಾಣಿಸಲಾರನು; ಆದರೂ ಅವನು ತನ್ನ ಜ್ಞಾನದಿಂದ ಸಂಸಾರ ದುಃಖವನ್ನು ನಾಶಮಾಡಲನುವಾದರೆ ಅದನ್ನು ಯಾರೂ ಉಳಿಸಲಾರರು ! ಸಾಕ್ಷಿಯಾಗಿ ದಯಾದಿ ಗುಣಗಳನ್ನು ಧರಿಸಿರುವ ಆತ್ಮದೇವನು ತನ್ನ ಭಕ್ತನಿಗೆ ಒಲಿದು ಸಾಯುಜ್ಯ ಮುಕ್ತಿಯನ್ನು ಕೊಡುವನು.

**ವಿಧೀ ನಿರ್ಮಿತಾ ಲೀಹಿತೋ ಸರ್ವ ಭಾಳೀ ।**
**ಪರೀ ಲೀಹಿತೋ ಕೋಣ ತ್ಯಾಚೆ ಕಪಾಳೀ ॥**
**ಹರೂ ಜಾಳಿತೋ ಲೋಕ ಸಂಹಾರಕಾಳೀ ।**
**ಪರೀ ಶೇವಟೀ ಶಂಕರಾ ಕೋಣ ಜಾಳೀ** ॥೧೭೫॥

ಬ್ರಹ್ಮದೇವನು ಹುಟ್ಟಿಸುವಾಗ ಎಲ್ಲರ ಹಣೆಯಬರಹ ಬರೆಯುತ್ತಾನಂತೆ; ಆದರೆ ಬ್ರಹ್ಮನ ಹಣೆಯ ಮೇಲೆ ಯಾವನು ಬರೆಯುವನು ? ಹಾಗೆಯೇ ಶಂಕರನು ಪ್ರಲಯಕಾಲಕ್ಕೆ ಜಗತ್ತನ್ನು ಸುಡುವನಂತೆ; ಆದರೆ ಕೊನೆಗೆ ಶಂಕರನನ್ನು ಯಾವನು ದಹಿಸುವನು ?

**ಜಗೀ ದ್ವಾದಶಾದಿತ್ಯ ಹೇ ರುದ್ರ ಅಕ್ರಾ ।**
**ಅಸಂಖ್ಯಾತ ಸಂಖ್ಯಾ ಕರೀ ಕೋಣ ಶಕ್ರಾ ॥**
**ಜಗೀ ದೇವ ಧುಂಡಾಳಿತಾ ಆಢಳೇನಾ ।**
**ಜನೀ ಮುಖ್ಯ ತೋ ಕೋಣ ಕೈಸಾ ಕಳೆನಾ** ॥೧೭೬॥

ವಿಶ್ವದಲ್ಲಿ ೧೨ ಆದಿತ್ಯರು, ೧೧ ರುದ್ರರು, ಅಸಂಖ್ಯ ಇಂದ್ರರು ಮೊದಲಾದ ದೇವತೆಗಳಿದ್ದಾರೆ ! ಆದರೆ ಎಷ್ಟು ಶೋಧಿಸಿದರೂ ಒಬ್ಬ ದೇವನೇನು ಸಿಗಲೊಲ್ಲನು, ಮುಖ್ಯ ದೇವನಾರೆಂಬುದೇನು ತಿಳಿಯಲೊಲ್ಲದು !

ತುಟೇನಾ ಫುಟೇನಾ ಕದಾ ದೇವರಾಣಾ ।
ಚಳೇನಾ ಢಳೇನಾ ಕದಾ ದೈನ್ಯವಾಣಾ ॥
ಕಳೇನಾ ಕಳೇನಾ ಕದಾ ಲೋಚನಾಸೀ ।
ವಸೇನಾ ದಿಸೇನಾ ಜನೀ ಮೀಪಣಾಸೀ ॥೧೭೭॥

ಮುಖ್ಯ ದೇವನಾದರೋ ಎಂದಿಗೂ ಹರಿಯನು, ಒಡೆಯನು, ದೀನತೆಯಿಂದ ಚಲಿಸನು, ಅಲುಗಾಡನು ! ಅವನೇನು ದೃಷ್ಟಿಗೆಂದಿಗೂ ತಿಳಿಯನು, ಅಹಂಭಾವಕ್ಕೆ ಕಾಣಿಸನು - ಅಲ್ಲಿ ವಾಸಿಸನು !

## ೬. ಸದ್ಗುರುವಿನ ಅವಶ್ಯಕತೆ - ಸದ್ಗುರು ಲಕ್ಷಣ
(ಶ್ಲೋಕ ೧೭೮-೧೮೪)

ಜಯಾ ಮಾನಲಾ ದೇವ ತೋ ಪೂಜಿತಾಹೇ ।
ಪರೀ ದೇವ ಶೋಧೂನಿ ಕೋಣೀ ನ ಪಾಹೇ ॥
ಜಗೀ ಪಾಹತಾ ದೇವ ಕೋಟ್ಯಾನುಕೋಟಿ ।
ಜಯಾ ಮಾನಲೀ ಭಕ್ತಿ ಜೇ ತೇಚಿ ಮೋಠೀ ॥೧೭೮॥

ಪ್ರತಿಯೊಬ್ಬನು ತನಗೆ ಇಷ್ಟವಿದ್ದ ದೇವನ ಭಕ್ತಿ ಮಾಡುವನೇನೋ ಸರಿ, ಆದರೆ ಯಾವನೂ ದೇವರ ಸ್ವರೂಪವನ್ನು ವಿಚಾಮಾಡಿ ನೋಡುವದಿಲ್ಲ ! ಜಗತ್ತಿನಲ್ಲಿಯಂತೂ ಕೋಟ್ಯಾವಧಿ ದೇವರಿದ್ದು ಯಾರಿಗೆ ಯಾವ ದೇವರ ಭಕ್ತಿ ಸೇರಿತೋ ಅದೇ ದೊಡ್ಡದಾಯಿತು !

ತಿನ್ಹೀ ಲೋಕ ಜೇಥೂನಿ ನಿರ್ಮಾಣ ಝಾಲೆ ।
ತಯಾ ದೇವರಾಯಾಸಿ ಕೋಣೀ ನ ಬೋಲೇ ॥
ಜಗೀ ಥೋರಲಾ ದೇವ ತೋ ಚೋರಲಾಸೇ ।
ಗುರೂವೀಣ ತೋ ಸರ್ವಥಾಹೀ ನ ದೀಸೇ ॥೧೭೯॥

ಮೂರೂ ಲೋಕಗಳ ನಿರ್ಮಿತಿಗೆ ಕಾರಣನಾದ ಸರ್ವಶ್ರೇಷ್ಠ ದೇವನ ಬಗ್ಗೆ ಯಾರೂ ವಿಚಾರ ಮಾಡುವದಿಲ್ಲ ! ಆ ದೇವಾಧಿದೇವನಾದರೋ ಅಡಗಿಕೊಂಡಿದ್ದು ಗುರುಗಳ ಹೊರತಾಗಿಯೇನು ಅವನ ದರ್ಶನವಾಗದು.



ಗುರೂ ಪಾಹತಾ 'ಪಾಹತಾ ಲಕ್ಷ ಕೋಟೀ'★ ।
ಬಹೂಸಾಲ ಮಂತ್ರಾವಳೀ ಶಕ್ತಿ ಮೋಠಿ ॥
ಮನೀ ಕಾಮನಾ ಚೇಟಕೇ ಧಾತಮಾತಾ ।
ಜನೀ ವ್ಯರ್ಥರೇ ತೋ ನವ್ಹೇ ಮುಕ್ತಿದಾತಾ ॥೧೮೦॥

ಇನ್ನು ಗುರುಗಳನ್ನು ಶೋಧಿಸಹತ್ತಿದರೆ ಬಹಳ ಸಾಮರ್ಥ್ಯವಂತವೆಂದು ವಿವಿಧ ಮಂತ್ರಗಳನ್ನು ಉಪದೇಶಿಸುವ ಕೋಟ್ಯಾವಧಿ ಗುರುಗಳಿರುತ್ತಾರೆ. ಆದರೆ ಅಂತಹ ಚೇಟಕೀ ಇತ್ಯಾದಿ ಪ್ರಯೋಗ ಮಾಡುವ ಕಾಮನಿಕ ಗುರುವು ನಿರರ್ಥಕನಿದ್ದು ಅವನೇನು ಮುಕ್ತಿಕೊಡಲರಿಯನು !

ನವ್ಹೇ ಚೇಟಕೀ ಚಾಳಕೂ ದ್ರವ್ಯಭೋಂದೂ ।
ನವ್ಹೇ ನಿಂದಕೂ ಮತ್ಸರೂ ಭಕ್ತಿಮಂದೂ ॥
ನವ್ಹೇ ಉನ್ಮತೂ ವೇಸನೀ ಸಂಗಬಾಧೂ ।
ಜನೀ ಜ್ಞಾನಿಯಾ ತೋಚಿ ಸಾಧೂ ಆಗಾಧೂ ॥೧೮೧॥

ಚೇಟಕೀ ವಿದ್ಯೆಯವನಲ್ಲದ, ಮೋಸಗಾರನಲ್ಲದ, ದ್ರವ್ಯ ಅಪಹರಿಸದ, ನಿಂದೆ ಮಾಡದ, ಹೊಟ್ಟೇಕಿಚ್ಚು ಇಲ್ಲದ ಭಕ್ತಿಹೀನನಲ್ಲದ, ಕೊಬ್ಬಿರದ, ವ್ಯಸನಾಧೀನನಲ್ಲದ, ಸಂಗತಿಯಿಂದ ಹಾನಿಯನ್ನೇ ತಾರದ ಇವೆಲ್ಲ ಅವಗುಣರಹತನಾದ ಜ್ಞಾನಿಯು ಮಾತ್ರ ಮಹಿಮಾಶಾಲಿ ಗುರುವೆನಿಸಬಲ್ಲನು !

ನವ್ಹೇ ವಾಉಗೀ ಚಾಹುಟೀ ಕಾಮ ಪೋಟೀ ।
ಕ್ರಿಯೇವೀಣ ವಾಚಾಳತಾ ತೇಚಿ ಮೋಠೀ ॥
ಮುಖೇ ಬೋಲಣ್ಯಾಸಾರಿಖೇ ಚಾಲತಾಹೇ ।
ಮನಾ ಸದ್ಗುರೂ ತೋಚಿ ಶೋಧೂನಿ ಪಾಹೇ ॥೧೮೨॥

ಮನವೇ, ಹೊಟ್ಟೆಯಲ್ಲಿ ಆಶೆ ಇಟ್ಟುಕೊಂಡು ಮೇಲೆ ನಿರರ್ಥಕ ಗಳಹುವದೇನು ಸದ್ಗುರು ಲಕ್ಷಣವಲ್ಲ; ಅದು ಕೇವಲ ಕ್ರಿಯಾರಹಿತ ಬಡಬಡಿಕೆಯೇ ಸೈ ! ಆದರೆ ಬಾಯಿಯಿಂದ ನುಡಿದಂತೆ ನಡೆಯುವವನೇ ನಿಜವಾದ ಸದ್ಗುರುವೆಂದು ಕಂಡುಹಿಡಿ.

---

★ ಪಾಠಭೇದ - ಲಕ್ಷಕೋಟ್ಯಾನುಕೋಟೀ

ಜನೀ ಭಕ್ತ ಜ್ಞಾನೀ ವಿವೇಕೀ ವಿರಾಗಿ ।
ಕೃಪಾಳೂ ಮನಸ್ವೀ ಕ್ಷಮಾವಂತ ಯೋಗಿ ॥
ಪ್ರಭೂ ದಕ್ಷ ವ್ಯುತ್ಪನ್ನ ಚಾತುರ್ಯ ಜಾಣೇ ।
ತಯಾಚೇನಿ ಯೋಗೇ ಸಮಾಧಾನ ಬಾಣೇ ॥೧೮೩॥

ಜ್ಞಾನೀ ಭಕ್ತನು, ವಿವೇಕ - ವೈರಾಗ್ಯಶಾಲಿಯು, ದಯಾಲುವು, ಸ್ವತಂತ್ರನು, ಕ್ಷಮಾಶೀಲನು, ಧ್ಯಾನನಿಷ್ಠನು, ಸಮರ್ಥನು, ದಕ್ಷನು, ಶಾಸ್ತ್ರ ಅರಿತವನು ಹಾಗೂ ವ್ಯವಹಾರಚತುರನು ಇವೆಲ್ಲ ಲಕ್ಷಣಯುಕ್ತ ಗುರುವಿನಿಂದಲೇ ಶಾಂತಿ ಲಭಿಸುವುದು.

ನವ್ಹೇ ತೇಚಿ ಝಾಲೇ ನಸೇ ತೇಚಿ ಆಲೇ ।
ಕಳೋ ಲಾಗಲೇ ಸಜ್ಜನಾಚೇನಿ ಬೋಲೇ ॥
ಅನಿರ್ವಾಚ್ಯ ತೇ ವಾಚ್ಯ ವಾಚೇ ವದಾವೇ ।
ಮನಾ ಸಂತ ಆನಂತ ಶೋಧೀತ ಜಾವೇ ॥೧೮೪॥

'ಅಸತ್ಯ ಮಾಯೆಯೇ ನಿರ್ಮಾಣವಾಗಿದೆ, ನಿಜವಾಗಿ ಇಲ್ಲದುದೇ ಎದುರಾಗಿದೆ'ಯೆಂಬ ಸಂಗತಿಯು ಸತ್ಪುರುಷರ ಬೋಧದಿಂದ ತಿಳಿಯಹತ್ತಿತು. ಮನವೇ, ಹೀಗೆ ಮಾಯೆಯನ್ನು ಅರಿತ ಮೇಲೆ ವಾಣಿಗೆ ನಿಲುಕದ ಆತ್ಮವಸ್ತುವನ್ನಾದರೂ ಅನಿರ್ವಾಚ್ಯವಿರುತ್ತದೆಂದು ವಾಣಿಯಿಂದಲೇ ಹೇಳಬೇಕಾಗುವದಷ್ಟೇ ? ಅದಕ್ಕಾಗಿ ಶ್ರವಣಾದಿಯಿಂದ ಸತ್ಯಜ್ಞಾನಾನಂತ ವಸ್ತುವನ್ನು ಶೋಧ ಮಾಡುತ್ತಿರು.

## ೭. ಜ್ಞಾನಾಭ್ಯಾಸದ ರಹಸ್ಯ (ಸಂಗತ್ಯಾಗ)ಉಪಸಂಹಾರ (ಶ್ಲೋಕ ೧೮೫-೨೦೫)

ಲಪಾವೇ ಅತೀ ಆದರೇ ರಾಮರೂಪೀ ।
ಭಯಾತೀತ ನಿಶ್ಚಿಂತ ಯೇ ಸಸ್ವರೂಪೀ ॥
ಕದಾ ತೋ ಜನೀ ಪಾಹತಾ ಹೀ ದಿಸೇನಾ ।
ಸದಾ ಐಕ್ಯ ತೋ ಭಿನ್ನಭಾವೇ ವಸೇನಾ ॥೧೮೫॥

ತನ್ನ ಸ್ವರೂಪವೇ ಆದ ನಿಶ್ಚಿಂತ ನಿರ್ಭಯ ಆತ್ಮನಲ್ಲಿ ಅತ್ಯಂತ ಪ್ರೇಮದಿಂದ ಲೀನನಾಗಬೇಕು; ಆತ್ಮಾರಾಮನೇನು ತನಗಿಂತ ಬೇರೆಯಾಗಿ ಹೊರಗೆ ಇರುತ್ತಿರದೆ ಅವನು ಯಾವಾಗಲೂ ತನ್ನೊಡನೆ ಐಕ್ಯತೆಯಿಂದ ನೆಲೆಸಿರುವನು.



ಸದಾ ಸರ್ವದಾ ರಾಮ ಸನ್ನೀಧ ಆಹೇ ।
ಮನಾ ಸಜ್ಜನಾ ಸತ್ಯ ಶೋಧೂನಿ ಪಾಹೇ ॥
ಅಖಂಡೀತ ಭೇಟೀ ರಘೂರಾಜಯೋಗೂ ।
ಮನಾ ಸಾಂಡಿರೇ ಮೀಪಣಾಚಾ ವಿಯೋಗೂ ॥೧೮೬॥

ಸತ್ವಗುಣಿ ಮನವೇ ರಾಮನು ಬಿಡದೆ ನಿನ್ನ ಹತ್ತಿರವೇ ಇರುವನು, ಕಿಂಬಹುನಾ ಆತ್ಮಾರಾಮನ ಹಾಗೂ ನಿನ್ನ ಸದೋದಿತ ಭೆಟ್ಟಿಯ ಯೋಗ (ಏಕತ್ವ) ವಿರುತ್ತದೆ. ಈ ಸತ್ಯವನ್ನು ತಿಳಿದು ಅಹಂಕಾರವು ನಿರ್ಮಿಸಿದ ವಿಯೋಗ(ಭಿನ್ನತೆ) ವನ್ನು ತ್ಯಜಿಸು.

ಭುತೇ ಪಿಂಡ ಬ್ರಹ್ಮಾಂಡ ಹೇ ಐಕ್ಯ ಆಹೇ ।
ಪರೀ ಸರ್ವಹೀ ಸಸ್ವರೂಪೀ ನ ಸಾಹೇ ॥
ಮನಾ ಭಾಸಲೇ ಸರ್ವ ಕಾಂಹೀ ಪಹಾವೇ ।
ಪರೀ ಸಂಗ ಸೋಡೂನಿ ಸೂಖೇ ರಹಾವೇ* ॥೧೮೭॥

ಪಂಚ ಮಹಾಭೂತರೂಪವಾದ ಪಿಂಡ-ಬ್ರಹ್ಮಾಂಡ (ಶರೀರ-ಜಗತ್ತು) ಗಳು ಆತ್ಮಸ್ವರೂಪದಲ್ಲಿ ಮೋರೆ ತೋರಿಸಲರಿಯವು ! ಅದಕ್ಕಾಗಿ ಮನವೇ, ಶರೀರಾದಿಗಳು ಎದುರಿಗೆ ಭಾಸವಾಗಲೊಲ್ಲವೇಕೆ, ಅವುಗಳ ಆಸಕ್ತಿಯನ್ನು ತೊರೆದು ಪೂರ್ಣ ಸುಖವಾಗಿರಬೇಕು.

ದೇಹೇಭಾನ ಹೇ ಜ್ಞಾನಶಸ್ತ್ರೇ ಖಿಡಾವೇ ।
ವಿದೇಹೀಪಣೇ ಭಕ್ತಿ ಮಾರ್ಗೇಚಿ ಜಾವೇ ॥
ವಿರಕ್ತೀಬಳೇ ನಿಂದ್ಯ ಸರ್ವೇ ತ್ಯಜಾವೇ ।
ಪರೀ ಸಂಗ ಸೋಡೂನಿ ಸೂಖೇ ರಹಾವೇ ॥೧೮೮॥

ಜ್ಞಾನ ಖಡ್ಗದಿಂದ ದೇಹದ ಭಾಸವನ್ನು ಕಡಿದೊಗೆದು ದೇಹರಹಿತ ಆತ್ಮೈಕ್ಯದ ದಾರಿಯಲ್ಲಿಯೇ ಹೋಗಬೇಕು. ವೈರಾಗ್ಯಬಲದಿಂದ ದೇಹಬುದ್ಧಿಯ ದುರ್ಗುಣಗಳೆಲ್ಲವನ್ನು ಬಿಟ್ಟುಕೊಡಬೇಕು. ಆದರೆ ಮುಖ್ಯತಃ ಎಲ್ಲದರ ಸತ್ಯತ್ವಬುದ್ಧಿ ಹಾಗೂ ಆಸಕ್ತಿಯನ್ನು ತೊರೆದು ಪೂರ್ಣ ಸುಖವಾಗಿರಬೇಕು.

★ ಪರೀ ಸಂಗ ಸೋಡೂನಿ ಸೂಖೇ ರಹಾವೇ : ೧೮೭-೧೯೦ (೪ ಶ್ಲೋಕ)

ಮಹೀ ನಿರ್ಮಿಲೀ ದೇವ ತೋ ಓಳಖಾವಾ ।
ಜಯಾ ಪಾಹತಾ ಮೋಕ್ಷ ತತ್ಕಾಳ ಜೀವಾ ॥
ತಯಾ ನಿರ್ಗುಣಾಲಾಗಿ ಗೂಣೀ ಪಹಾವೇ ।
ಪರೀ ಸಂಗ ಸೋಡೂನಿ ಸೂಖೇ ರಹಾವೇ ॥೧೮೯॥

ಜಗತ್ತನ್ನು ನಿರ್ಮಾಣ ಮಾಡಿದ ದೇವನಾವನೆಂಬುದನ್ನು ಗುರುತಿಸಬೇಕು. ಅವನನ್ನು ಸಾಕ್ಷಾತ್ಕರಿಸಿಕೊಂಡರೆ ಜೀವವನಿಗೆಕೂಡಲೇ ಮುಕ್ತಿಯಾಗುವದು. ಆ ನಿರ್ಗುಣ ಸ್ವರೂಪವನ್ನು ಗುಣಗಳಲ್ಲಿಯೂ ನೋಡಬೇಕು. ಸರಿ, ಆದರೆ ಗುಣಾದಿಯ ಸತ್ಯತ್ವಬುದ್ಧಿ ಹಾಗೂ ಆಸಕ್ತಿಯನ್ನು ತೊರೆದು ಪೂರ್ಣ ಸುಖವಾಗಿರಬೇಕು.

ನವ್ಹೇ ಕಾರ್ಯಕರ್ತಾ ನವ್ಹೇ ಸೃಷ್ಟಿಭರ್ತಾ।
ಪರೇಹೂನಿ ಪರ್ತಾ ನ ಲಿಂಪೇ ವಿವರ್ತಾ ॥
ತಯಾ ನಿರ್ವಿಕಲ್ಪಾಸಿ ಕಲ್ಪೀತ ಜಾವೇ ।
ಪರೀ ಸಂಗ ಸೋಡೂನಿ ಸೂಖೇ ರಹಾವೇ ॥೧೯೦॥

ಪರಮಾತ್ಮನು ನಿಜವಾಗಿ ಕಾರ್ಯಗಳ ಕರ್ತನೂ ಅಲ್ಲ , ಸೃಷ್ಟಿಯ ಪಾಲಕನೂ ಅಲ್ಲ; ಆದರೆ ಜಗತ್ತಿನ ಭಾಸಕ್ಕೆ ಸಂಬಂಧವಿರದ, ಎಲ್ಲಕ್ಕಿಂತಲೂ ಆಚೆಗಿನವನಿರುತ್ತಾನೆ. ಇಂತಹ ನಿರ್ವಿಕಲ್ಪ ಬ್ರಹ್ಮದ ವಿಚಾರ ಮಾಡುತ್ತಿರಬೇಕು ಸರಿ, ಆದರೆ ಆ ಮನನಾದಿಯ ಸತ್ಯತ್ವಬುದ್ಧಿ ಹಾಗೂ ಆಸಕ್ತಿಯನ್ನು ತೊರೆದು ಪೂರ್ಣ ಸುಖವಾಗಿರಬೇಕು

ದೇಹೇಬುದ್ಧಿಚಾ ನಿಶ್ಚಯೋ ಜ್ಯಾ ಟಳೇನಾ ।
ತಯಾ ಜ್ಞಾನ ಕಲ್ಪಾಂತಕಾಳೀ ಕಳೇನಾ ॥
ಪರಬ್ರಹ್ಮ ತೇ ಮೀಪಣೇ ಆಕಳೇನಾ ।
ಮನೀ ಶೂನ್ಯ ಅಜ್ಞಾನ ಹೇ ಮಾವಳೇನಾ ॥೧೯೧॥

ದೇಹಾತ್ಮಬುದ್ಧಿಯ ನಿಶ್ಚಯವು ಅಳಿಯದವನಿಗೆ ಕಲ್ಪಾಂತದಲ್ಲಿಯೂ ಜ್ಞಾನವಾಗಲಾರದು ! ಅಹಂಕಾರವಿರುವವರೆಗೂ ಪರಬ್ರಹ್ಮದೊರಕದು ಹಾಗೂ ಮನದ ಶೂನ್ಯಭಾವ - ಅಜ್ಞಾನ ಹೋಗಲಾರದು !



ಮನಾ ನಾ ಕಳೇ ನಾ ಢಳೇ ರೂಪ ಜ್ಯಾಚೇ ।
ದುಜೇವೀಣ ತೇ ಧ್ಯಾನ ಸರ್ವೋತ್ತಮಾಚೇ ॥
ತಯಾ ಖೂಣ ತೇ ಹೀನದೃಷ್ಟಾಂತ ಪಾಹೇ ।
ತೇಥೇ ಸಂಗ ನಿಃಸಂಗ ದೋನ್ಹೀ ನ ಸಾಹೇ ॥೧೯೨॥

ಮನವೇ, ಆ ಸರ್ವ ಶ್ರೇಷ್ಠ ದೇವನ ಸ್ವರೂಪವು ಬುದ್ಧಿಗೆ ತಿಳಿಯದು; ತದ್ರೂಪತೆಯಿಂದಲೇ ಅವನ ಧ್ಯಾನ ಮಾಡಬೇಕಾಗುವದು ! ಆ ದೇವನಿಗೆ ದೃಷ್ಟಾಂತಗಳೇ ಇಲ್ಲವೆನ್ನುವದೇ ಅವನ ಲಕ್ಷಣವಾಗಿದ್ದು, ಅವನಲ್ಲಿ ಸಂಗವಾಗಲಿ, ನಿಃಸಂಗತೆಯ ಭಾವವಾಗಲಿ ಎರಡೂ ಇರಲರಿಯವು !

ನವ್ಹೇ ಜಾಣತಾ ನೇಣತಾ ದೇವರಾಣಾ ।
ನವ್ಹೇ ವರ್ಣಿತಾ ವೇದಶಾಸ್ತ್ರಾ ಪುರಾಣಾ ॥
ನವ್ಹೇ ದೃಶ್ಯ ಅದೃಶ್ಯ ಸಕ್ಷಿ ತಯಾಚಾ ।
ಶ್ರುತೀ ನೇಣತೀ ನೇಣತೀ ಅಂತ ತ್ಯಾಚಾ ॥೧೯೩॥

ದೇವರಾಯನನ್ನು (ಪರಬ್ರಹ್ಮವನ್ನು) ಅರಿಯಲಿಕ್ಕೂಬಾರದು, ಅನುಭವ ವಿಷಯವಾಗಿದ್ದು ಮೂಲಕ ಅರಿಯದಿರಲೂ ಬಾರದು ! ಹೀಗಾಗಿ ವೇದ-ಶಾಸ್ತ್ರ ಪುರಾಣಗಳಿಗೆ ಅವನನ್ನು ವರ್ಣಿಸಲಸಾಧ್ಯವು ! ಅವನು ಕಾಣುವಂತಹ ವಸ್ತುವಲ್ಲ, ಅದೃಶ್ಯವೂ ಅಲ್ಲ ಅಥವಾ ದೃಶ್ಯಾದೃಶ್ಯಗಳ ಸಾಕ್ಷಿಯೂ ಅಲ್ಲ. ವೇದವಾಕ್ಯಗಳೂ ಅವನ ನೆಲೆಯನ್ನು ತಿಳಿಯಲಾರವು !

ವಸೇ ಹೃದಯೀ ದೇವ ತೋ ಕೋಣ ಕೈಸಾ ।
ಪುಸೇ ಆದರೇ ಸಾಧಕೂ ಪ್ರಶ್ನ ಐಸಾ ॥
ದೇಹೇ ಟಾಕಿತಾ ದೇವ ಕೋಠೇ ರಹಾತೋ ।
ಪರೀ ಮಾಗುತಾ ಠಾವ ಕೋಠೇ ಪಹಾತೋ ॥೧೯೪॥

ಸಾಧಕನು ವಿನಯದಿಂದ ಪ್ರಶ್ನೆ ಮಾಡಿದುದೇನಂದರೆ, ಹೃದಯದಲ್ಲಿ ವಾಸಿಸಿದ ದೇವನು ಯಾವನು ? ಎಂಥವನು ? ಶರೀರಬಿಟ್ಟ ಮೇಲೆ ಅವನು ಎಲ್ಲಿ ಉಳಿಯುವನು ಹಾಗೂ ತಿರುಗಿ ತನಗೆ ಜಾಗವನ್ನೆಲ್ಲಿ ನೋಡುವನು ?

ವಸೇ ಹೃದಯೀ ದೇವ ತೋ ಜಾಣ ಐಸಾ ।
ನಭಾಚೇಪರೀ ವ್ಯಾಪಕೂ ಜಾಣ ತೈಸಾ ॥

ಸದಾ ಸಂಚಲಾ ಯೇತ ನಾ ಜಾತ ಕಾಂಹೀ ।
ತಯಾವೀಣ ಕೋಠೇ ರಿತಾ ಠಾವ ನಾಂಹೀ ॥೧೯೫॥

ಹೃದಯವಾಸಿಯಾದ ದೇವನು ಹೀಗಿರುವನು ನೋಡಪ್ಪಾ ! ಅವನು ಆಕಾಶದಂತೆ ವ್ಯಾಪಕನಿರುತ್ತಾನೆ. ಯಾವಾಗಲೂ ಎಲ್ಲೆಡೆಯಲ್ಲಿಯೂ ತುಂಬಿಕೊಂಡಿದ್ದು ಅವನೇನು ಬರಹೋಗುವವನಲ್ಲ ! ಅವನಿಲ್ಲದ ತೆರವು ಜಾಗವೇ ಇರುವದಿಲ್ಲ.

ನಭೀ ವಾವರೇ ಜೋ ಅಣುರೇಣು ಕಾಂಹೀ ।
ರಿತಾ ಠಾವ ಯಾ ರಾಘವೇವೀಣ ನಾಂಹೀ ॥
ತಯಾ ಪಾಹತಾ ಪಾಹತಾ ತೇಚಿ ಝಾಲೇ ।
ತೇಥೇ ಲಕ್ಷ ಅಲಕ್ಷ ಸರ್ವೈ ಬುಡಾಲೇ ॥೧೯೬॥

ಆಕಾಶದಲ್ಲಿ ಹರಿದಾಡುವ ಅಣುರೇಣುವಿನ ಜಾಗವೂ ಕೂಡ ಈ ಆತ್ಮಾರಾಮನಿಲ್ಲದಿಲ್ಲ ! ಅವನನ್ನು ನೋಡುತ್ತ ನೋಡುತ್ತ ಅದೇ ತಾನಾಗುವನು ಹಾಗೂ ಆ ಸ್ಥಿತಿಯಲ್ಲಿ ಲಕ್ಷ ಹಚ್ಚುವದು ಲಕ್ಷ ಹಚ್ಚದಿರುವುದೆಲ್ಲ ಮುಳುಗಿ ಹೋಗಿರುವದು !

ನಭಾ ಸಾರಿಖೇ ರೂಪ ಯಾ ರಾಘವಾಚೇ ।
ಮನೀ ಚಿಂತಿತಾ ಮೂಳ ತೂಟೇ ಭವಾಚೇ ॥
ತಯಾ ಪಾಹತಾ ದೇಹಬುದ್ಧೀ ಉರೇನಾ ।
ಸದಾ ಸರ್ವದಾ ಆರ್ತ ಪೋಟೀ ಪುರೇನಾ ॥೧೯೭॥

ಈ ರಾಮನ ಸ್ವರೂಪವು ಆಕಾಶದಂತೆ ಇರುತ್ತದೆ. ಮನದಲ್ಲಿ ಅವನನ್ನು ಧ್ಯಾನಿಸಿದರೆ ಸಂಸಾರಬಂಧನದ ಮೂಲವೇ ಕಡಿಯುವದು. ಅವನನ್ನು ಅನುಲಕ್ಷಿಸಿದರೆ ದೇಹಭಾವನೆ ಉಳಿಯದು ಹಾಗೂ ಅಂತರಂಗದ ಪ್ರೇಮಾನಂದವು ಎಂದೆಂದಿಗೂ ಸಾಕೆನಿಸದು !

ನಭೇ ವ್ಯಾಪಿಲೇ ಸರ್ವ ಸೃಷ್ಟೀಸ ಆಹೇ ।
ರಘೂನಾಯಕಾ ಊಪಮಾ ತೇ ನ ಸಾಹೇ ॥
ದುಜೇವೀಣ ಜೋ ತೋಚಿ ತೋ ಹಾ ಸ್ವಭಾವೇ ।
ತಯಾ ವ್ಯಾಪಕೂ ವ್ಯರ್ಥ ಕೈಸೇ ಮ್ಹಣಾವೇ ॥೧೯೮॥



ನಿಜವಾಗಿ ಹೇಳಬೇಕೆಂದರೆ, ಜಗವನ್ನೆಲ್ಲ ವ್ಯಾಪಿಸಿದ ಆಕಾಶವು ಕೂಡ ಆತ್ಮಾರಾಮನಿಗೆ ಯೋಗ್ಯ ದೃಷ್ಟಾಂತವಾಗಲಾರದು ! ಯಾಕೆಂದರೆ ತನಿಗಿಂತ ಬೇರೆಯಾದ ವಸ್ತುವೇ ಇಲ್ಲದೆ ತಾನೇ ತಾನಾಗಿರುವವನಿಗೆ ಸುಮ್ಮಸುಮ್ಮನೆ ವ್ಯಾಪಕನೆಂದಾದರೂ ಹೇಗೆ ಅನ್ನುವದು ?

ಅತೀ ಜೀರ್ಣ ವಿಸ್ತೀರ್ಣ ತೇ ರೂಪ ಆಹೇ ।
ತೀಥೇ ತರ್ಕ ಸಂಪರ್ಕ ತೋಹೀ ನ ಸಾಹೇ ॥
ಅತಿ ಗೂಢ ತೇ ದೃಢ ತತ್ಕಾಳ ಸೋಪೇ ।
ದುಜೇವೀಣ ಜೇ ಖೂಣ ಸ್ವಾಮೀ ಪ್ರತಾಪೇ ॥೧೯೯॥

ಆತ್ಮಸ್ವರೂಪವು ಅತ್ಯಂತ ಪುರಾತನವೂ, ವಿಶಾಲವೂ ಆಗಿದ್ದು, ಅದರಲ್ಲಿ ಬುದ್ಧಿಯ ಅಲ್ಪ ಸಂಬಂಧವೂ ಕೂಡಾ ಸಹಿಸದು ! ಆತ್ಮವು ಅತ್ಯಂತ ಗೌಪ್ಯವಾಗಿದ್ದರೂ, ಸದ್ಗುರುಕೃಪೆಯಿಂದ 'ಅದು ತನಗಿಂತ ಬೇರೆಯಲ್ಲ'ವೆಂಬ ರಹಸ್ಯ ತಿಳಿದರೆ ನಿಶ್ಚತವಾಗಿ ಆಗಿಂದಾಗ್ಗೆ ಸುಲಭಪ್ರಾಪ್ತವೆನಿಸಿದೆ.

ಕಳೇ ಆಕಳೇ ರೂಪ ತೇ ಜ್ಞಾನ ಹೋತಾ ।
ತೇಥೇ ಆಟಲೀ ಸರ್ವಸಾಕ್ಷೀ ಅವಸ್ಥಾ ॥
ಮನಾ ಉನ್ಮನೀ ಶಬ್ದ ಕುಂಠೀತ ರಾಹೇ ।
ತೋಗೆ ತೋಚಿ ತೋ ರಾಮ ಸರ್ವತ್ರ ಪಾಹೇ ॥೨೦೦॥

ಗುರುಕೃಪೆಯಿಂದ ಜ್ಞಾನವಾಗಲು, ಸರ್ವಸಾಕ್ಷಿತ್ವದ ಅವಸ್ಥೆಯು ಲಯವಾಗಿ ಸ್ವರೂಪಪ್ರಾಪ್ತಿಯಾಗುವದು; ಆ ಉನ್ಮನಿ ಸ್ಥಿತಿಯಲ್ಲಿ ಮನವಾಣಿಗಳು ಸ್ಥಗಿತವಾಗುವವು. ಆಗೋ, ಅದೇ ಎಲ್ಲೆಡೆಯಲ್ಲಿಯೂ ವಾಸಿಸಿದ ರಾಮಸ್ವರೂಪವು !

ಕದಾ ಓಳಖೀಮಾಜಿ ದೂಜೇ ದಿಸೇನಾ ।
ಮನೀ ಮಾನಸೀ ದ್ವೈತ ಕಾಂಹೀ ವಸೇನಾ ॥
ಬಹುತಾ ದಿಸಾ ಆಪುಲೀ ಭೇಟಿ ಝಾಲೀ ।
ವಿದೇಹೀಪಣೇ ಸರ್ವ ಕಾಯಾ ನಿವಾಲೀ ॥೨೦೧॥

ರಾಮ ಸ್ವರೂಪವನ್ನು ಅರಿತಮೇಲೆ ನೋಡಿದಲ್ಲೆಲ್ಲ ರಾಮನ ಹೊರತಾಗಿ

ಅನ್ಯವೇನೂ ಕಾಣದು ಹಾಗೂ ಮನಸಿನಲ್ಲಿ ದ್ವೈತವೆಷ್ಟು ಮಾತ್ರವೂ ಉಳಿಯದು! ರಾಮರಾಯಾ ! ಬಹುಕಾಲದ ನಂತರ ನಿಮ್ಮ ಭೆಟ್ಟಿಯಾಗಿ ವಿದೇಹಸ್ಥಿತಿಯಿಂದ ಶರೀರವೆಲ್ಲ ತಣಿಯಿತು !

**ಮನಾ ಗೂಜರೇ ತೂಜ ಹೇ ಪ್ರಾಪ್ತ ಝಾಲೇ ।**
**ಪರೀ ಅಂತರೀ ಪಾಹಿಜೇ ಯತ್ನ ಕೇಲೇ ॥**
**ಸದಾ ಶ್ರವಣೇ ಪಾವಿಜೇ ನಿಶ್ಚಯಾಸೀ ।**
**ಧರೀ ಸಜ್ಜನೀ ಸಂಗತೀ ಧನ್ಯ ಹೋಸೀ ॥೨೦೨॥**

ಮನವೇ, ನಿನಗೆ ಈ ರಹಸ್ಯವೇನೋ ಹಸ್ತಗತವಾಯಿತು. ಆದರೆ ಇದರ ದೃಢತೆಗಾಗಿ ನೀನು ಪ್ರಯತ್ನ ಮಾಡುವದವಶ್ಯವು. ಯಾವಾಗಲೂ ಶ್ರವಣ ಮಾಡುತ್ತಿದ್ದರೇ ನಿಶ್ಚಯ ನೆಲೆಗೊಳ್ಳುವದರಿಂದ, ಸತ್ಸಂಗತಿ ಹಿಡಿದು ಧನ್ಯನಾಗಪ್ಪಾ!

**ಮನಾ ಸರ್ವಹೀ ಸಂಗ ಸೋಡೂನಿ ದ್ಯಾವಾ ।**
**ಅತೀ ಆದರೇ ಸಜ್ಜನಾಚಾ ಕರಾವಾ ॥**
**ಜಯಾಚೇನಿ ಸಂಗೇ ಮಹಾದುಃಖ ಭಂಗೇ ।**
**ಜನೀ ಸಾಧನೇವೀಣ ಸನ್ಮಾರ್ಗ ಲಾಗೇ ॥೨೦೩॥**

ಮನವೇ ದೇಹ-ಪ್ರಪಂಚಾದಿಯ ಎಲ್ಲ ಸಂಗವನ್ನು ಬಿಟ್ಟುಬಿಡಬೇಕು, ಆದರೆ ಸತ್ಸಂಗವನ್ನು ಮಾತ್ರ ಒಳ್ಳೇ ಪ್ರೇಮದಿಂದ ಮಾಡಬೇಕು. ಯಾಕೆಂದರೆ, ಸಜ್ಜನಸಂಗದಿಂದ ವಿಶೇಷ ಸಾಧನದ ಪ್ರಯಾಸವಿಲ್ಲದೆಯೇ ಪರಮಾರ್ಥದ ದಾರಿ ದೊರೆತು ದಾರುಣವಾದ ಭವದುಃಖ ನಾಶವಾಗುವದು.

**ಮನಾ ಸಂಗ ಹಾ ಸರ್ವ ಸಂಗಾಸಿ ತೋಡೀ ।**
**ಮನಾ ಸಂಗ ಹಾ ಮೋಕ್ಷ ತತ್ಕಾಳ ಜೋಡೀ ॥**
**ಮನಾ ಸಂಗ ಹಾ ಸಾಧಕಾ ಶೀಘ್ರ ಸೋಡಿ ।**
**ಮನಾ ಸಂಗ ಹಾ ದ್ವೈತ ನಿಃಶೇಷ ಮೋಡೀ ॥೨೦೪॥**

ಮನವೇ, ಸತ್ಸಂಗವು ಬೇರೆ ಎಲ್ಲ ಸಂಗವನ್ನು ಕೆಡಿಸಿ, ಕೂಡಲೇ ಮೋಕ್ಷ ಲಭಿಸಿಕೊಡುವದು; ಅದು (ಸತ್ಸಂಗವು) ದ್ವೈತವನ್ನು ಪೂರ್ಣ ಮುರಿದುಹಾಕಿ ಸಾಧಕನನ್ನು ತೀವ್ರವೇ ಮುಕ್ತಮಾಡುವದು.



**ಮನಾಚೀ ಶತೇ ಐಕತಾ ದೋಷ ಜಾತೀ ।**
**ಮತೀಮಂದ ತೇ ಸಾಧನಾ ಯೋಗ್ಯ ಹೋತೀ ॥**
**ಚಢೇ ಜ್ಞಾನ ವೈರಾಗ್ಯ ಸಾಮರ್ಥ್ಯ ಅಂಗೀ ।**
**ಮ್ಹಣೇ ದಾಸ ವಿಶ್ವಾಸತಾ ಮುಕ್ತಿ ಭೋಗೀ ॥೨೦೫॥**

ರಾಮದಾಸರು ಕೊನೆಗೆ ಹೇಳುವದೇನೆಂದರೆ, ಮನದ ಎರಡು ಶತಕ(=ನೂರು) ಶ್ಲೋಕಗಳನ್ನು ಕೇಳುವದರಿಂದ ದೋಷ ಪರಿಹಾರವಾಗುವವು, ಮಂದಬುದ್ಧಿಯು ಸಾಧನಕ್ಕೆ ತಕ್ಕವನಾಗುವನು, ಅವನಲ್ಲಿ ಜ್ಞಾನವೈರಾಗ್ಯಾದಿ ಶಕ್ತಿ ಬರುವದು ಮತ್ತು ಶ್ರದ್ಧೆಯುಳ್ಳವನಾದರೆ ಮುಕ್ತಿಸುಖವನ್ನು ಉಪಭೋಗಿಸುವನು!

ಜಯ ಜಯ ರಘುವೀರ ಸಮರ್ಥ !

## ಮನೋಭೋಧದ ಆರತಿ

ವೇದಾಂಚೇ ಜೇ ಗುಹ್ಯ ಶಾಸ್ತ್ರಾಂಚೇ ಜೇ ಸಾರ ।
ಪ್ರಾಕೃತ ಶಬ್ದಾ ಮಾಜೀ ಕೇಲಾ ವಿಸ್ತಾರ ॥
ಕರ್ಮ ಉಪಾಸನಾ ಜ್ಞಾನ ಗಂಭೀರ ।
ಜ್ಯಾಚಾ ಮನನಮಾತ್ರೇ ಆತ್ಮಾ ಗೋಚರ ॥೧॥

ಜಯದೇವ ಜಯದೇವ ಜಯ ಮನೋಬೋಧಾ ।
ಪಂಚಪ್ರಾಣಾ ಆರತೀ ತುಜ ಸ್ವಾತ್ಮಶುದ್ಧಾ ॥ಧೃ॥

ದೋನ ಶತೇ ಪಾಚ ಶ್ಲೋಕ ಹೇ ಜಾಣ ।
ಶ್ರವಣೇ ಅರ್ಥೇ ಸಾಧಕ ಪಾವತಿ ಹೇ ಖೂಣ ॥
ಪರಮಾರ್ಥಾಸಿ ಸುಲಭ ಮಾರ್ಗ ಹಾ ಪೂರ್ಣ ।
ಯಶವಂತ ಸದ್ಗುರು ದಾಸಾಚಾ ಪ್ರಾಣ ॥೨॥

ಭವಾರ್ಥ :- ವೇದಗಳ ಗೂಢ ರಹಸ್ಯವೂ, ಶಾಸ್ತ್ರಗಳ ತಿರಳೂ ಆಗಿರುವ ಕರ್ಮ-ಉಪಾಸನಾ-ಜ್ಞಾನದ ಸಿದ್ಧಾಂತವನ್ನು ದೇಶಭಾಷೆಯಲ್ಲಿಯೇ ವಿವರಿಸಿರುವ ಮನೋಭೋಧದ ಕೇವಲ ವಿಚಾರದಿಂದ ಆತ್ಮನು ಪ್ರಕಟನಾಗುತ್ತಾನೆ ॥೧॥

ಇಂತಹ ಮಹಿಮಶಾಲಿ ಮನೋಭೋಧವೇ ನಿನ್ನ ವಿಜಯವಾಗಲಿ. ಶುದ್ಧ ಅಂತರಂಗದ ನಿನಗೆ ಭಾವಪೂರ್ಣವಾಗಿ ಆರತಿ ಬೆಳಗುವೆನು. ॥ಧೃ॥

ಮನೋಬೋಧದ ಈ ಎರಡೂನೂರಾ ಐದು ಶ್ಲೋಕಗಳ ಶ್ರವಣ ಹಾಗೂ ಅರ್ಥಗ್ರಹಣದಿಂದ ಸಾಧಕರು ಮರ್ಮವನ್ನೇ ಪಡೆಯುತ್ತಾರೆ. ಶ್ರೀ ರಾಮದಾಸ ಸದ್ಗುರುಗಳಿಗೆ ಅತ್ಯಂತ ಪ್ರೀಯನಾದ ಯಶವಂತನು ಹೇಳುವದೇನೆಂದರೆ '' ಪರಮಾರ್ಥ ಸಾಧಿಸಲಿಕ್ಕೆ ಇದೇ ಅತ್ಯಂತ ಸುಲಭ ದಾರಿಯಿರುತ್ತದೆ !'' ॥೨॥

**ಜಯ ಜಯ ರಘುವೀರ ಸಮರ್ಥ !**

**ಶ್ರೀ ಸಮರ್ಥ ರಾಮದಾಸ ಸ್ವಾಮಿಗಳ**

ಜಗದೋದ್ಧಾರಕದ ಮಹಾ ಉಪದೇಶದ ನುಡಿ,

ಜನರನ್ನು ಪಾವನಗೊಳಿಸುವ ಪವಿತ್ರ ನುಡಿ,

ಸಾಧಕರಿಗೆ ಸಾಧನ ಸೊಬಗು ತೋರಿದ ನುಡಿ,

ಪ್ರತಿಯೊಬ್ಬರ ಸ್ವರೂಪದ ಸೊಂಪಾದ ನುಡಿ,

ಜೀವೇಶ್ವರರ ಐಕ್ಯಸಾರಿದ ಸಿದ್ಧನುಡಿ,

ಇವೆಲ್ಲ ನುಡಿಗಳಿಂದ ಅನುಭವಕ್ಕೆ ತರುವ ಚೆನ್ನುಡಿ,

ಹೀಗಿರುವ ಸದ್ಬೋಧ ಗ್ರಂಥವಾವುದೆಂದರೆ .........

ಅದೇ ನಮ್ಮ ಪ್ರಕಾಶನದ **ದಾಸಬೋಧ** ಗ್ರಂಥ !

(೬ ನೇ ಮುದ್ರಣ ಪ್ರಕಾಶಿತವಾಗಿದೆ)

ಇದರ ವಾಚನ, ಮನನದಿಂದ

ತೃಪ್ತಿಯ ಅನುಭವ ತಂದಿರಿಸುವ

**ತಮ್ಮೆಲ್ಲರ ಅಂತರಂಗದ ಅರುವಿನ ನುಡಿ !!**

## ಅಧ್ಯಾತ್ಮ ಭಾಂಡಾರ ಗ್ರಂಥಮಾಲೆಯ ಅಮೂಲ್ಯ ಗ್ರಂಥಗಳು

| | | |
|---|---|---|
| ೧) | ಶ್ರೀ ಸದ್ಗುರು ಗುರುಲಿಂಗಜಂಗಮ ಮಹಾರಾಜರ ವಚನ | ೧೫-೦೦ |
| ೨) | ಪರಮಾರ್ಥ ಮಾರ್ಗ ಪ್ರದೀಪ | ೨೦-೦೦ |
| ೩) | ಶ್ರೀ ಸ.ಸ. ಭಾವೂಸಾಹೇಬ ಮಹಾರಾಜ ಸಾಂಪ್ರದಾಯಿಕ ಭಜನೆ | ೭-೦೦ |
| ೪) | ಭೋಧಗಂಗಾವಾಹಿನಿ | ೪-೦೦ |
| ೫) | ಭಗವದ್ಗೀತೆಯಲ್ಲಿ ಧ್ಯಾನಯೋಗ | (ಅಚ್ಚಿನಲ್ಲಿ) |
| ೬) | ವಿವೇಕ ಕುಂಜ | ೩-೦೦ |
| ೭) | ಸುಲಭ ವೇದಾಂತ ವಾಹಿನಿ | ೧೨-೦೦ |
| ೮) | ಬ್ರಹ್ಮಬೋಧ ವೈಭವ | ೫-೦೦ |
| ೯) | ಕನ್ನಡ ನಾಡಿನ ಸತ್ಪುರುಷರ ಅನುಭವ ಪದಗಳು | ೨೮-೦೦ |
| ೧೦) | ನಿತ್ಯ ಪಠಣೀಯ ಶ್ಲೋಕ | ೪-೦೦ |
| ೧೧) | ಸುಬೋಧ ಕರ್ಮಯೋಗ | (ಅಚ್ಚಿನಲ್ಲಿ) |
| ೧೨) | ಯಶಸ್ವಿ ಜೀವನ | ೧೦-೦೦ |
| ೧೩) | ಶ್ರೀರಾಮ ಗೀತಾ | ೩-೦೦ |
| ೧೪) | ಭಕ್ತಿಗಾಗಿ ಬಡಿದಾಟವೇ ? | ೧೦-೦೦ |
| ೧೫) | ಗುರುಗೀತಾಸಾರ | ೨-೦೦ |
| ೧೬) | ಮನೋಬೋಧ } (ಶ್ರೀ ಸಮರ್ಥ ರಾಮದಾಸಸ್ವಾಮಿ ಕೃತ | ೨೦-೦೦ |
| ೧೭) | ದಾಸಬೋಧ } ಕನ್ನಡ ಅನುವಾದದೊಂದಿಗೆ) | ೧೨೫-೦೦ |
| ೧೮) | ಆತ್ಮಜ್ಞಾನದ ರಸದೂಟ | ೩೫-೦೦ |
| ೧೯) | ಆತ್ಮಾನುಭವದ ಸಾಧನಗಳು | ೧೨-೦೦ |
| ೨೦) | ಅಧ್ಯಾತ್ಮದ ಅಂಗೈನೆಲ್ಲಿ | ೧೦-೦೦ |
| ೨೧) | ಶ್ರೀ ಕೃಷ್ಣಗೀತೆ (ಶ್ರೀಮದ್ಭಾಗವತಾಂತರ್ಗತ) | ೨೦-೦೦ |
| ೨೨) | ಆತ್ಮೋನ್ನತಿಯ ಘನತೆ | ೫-೦೦ |
| ೨೩) | ಅನುಭವ ಜ್ಞಾನ | ೧೨-೦೦ |
| ೨೪) | ಸಾಧಕರ ದಾರಿದೀಪ | ೨೦-೦೦ |
| ೨೫) | ಚೂಡಾಲಾಖ್ಯಾನ (ನಾಟಕ) | ೧೨-೦೦ |
| ೨೬) | ಕರ್ಮಯೋಗ ಸೂತ್ರಗಳು | ೩-೦೦ |
| ೨೭) | ಸ್ವಾಮೀರಾಮತೀರ್ಥರ ಚರಿತ್ರೆ | ೮-೦೦ |
| ೨೮) | ನವನೀತ | ೧೫-೦೦ |
| ೨೯) | ಸಂಕ್ಷೇಪ ಗೀತಾ-ಜ್ಞಾನೇಶ್ವರಿ | ೫೦-೦೦ |
| ೩೦) | ಸಕಲ ಭಾರತೀಯರ ಸದಸದ್ವಿವೇಕಕ್ಕೆ ಕರೆ ಹಾಗೂ ಕರ್ತವ್ಯ ಪ್ರಜ್ಞೆಯ ಜಾಗೃತಿಗೆ ಮನವಿ | ೬೦-೦೦ |
| ೩೧) | ಭಾರತ ಪುನರುತ್ಥಾನ ಗ್ರಂಥ ಮಾಲೆಯ ಗ್ರಂಥಗಳು (ಕನ್ನಡ ೧೦, ಮರಾಠಿ ೫, ಇಂಗ್ಲೀಷ ೫, ಹಿಂದಿ ೪) ಪ್ರತಿಯೊಂದಕ್ಕೆ | ೮-೦೦ |

### ಈ ಗ್ರಂಥಗಳಲ್ಲದೆ ಶ್ರೀ ಗುರುಶಂಕರ ಪ್ರಕಾಶನದ ಗ್ರಂಥಗಳು:

೩೨) ಭಕ್ತಿ ಮಂಜರಿ, ೩೩) ಶ್ರೀ ದತ್ತ ಸುಪ್ರಭಾತ ೩೪) ಪ್ರಬೋಧಸುಧಾಕರ (ಶ್ರೀ ಜಗದ್ಗುರು ಆದ್ಯ ಶಂಕರಾಚಾರ್ಯ ವಿರಚಿತ), ೩೫) ಗುರುಗೀತಾ ೩೬) ಮಹಾಯೋಗಿ ರೇವಣನಾಥ ೩೭) ಸಂತ ಜ್ಞಾನೇಶ್ವರ ಇತ್ಯಾದಿ.